ಶನಿವಾರ, ಡಿಸೆಂಬರ್ 9, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 339 | ಪುಟ 18

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ತಮಿಳುನಾಡು ಹಾಗೂ ಕೇರಳದ ಮೂಲಕ ಹಾದುಹೋಗುವ ಹೊಸದೊಂದು ಯಾತ್ರೆಯನ್ನು ಮುಗಿಸಿ ಬಂದಿದ್ದಾರೆ ಬೈಕರ್ ದಶಮಿ ರಾಣಿ



‘ಮೌಲ್ವಿ ಪ್ರಕರಣ: ಯತ್ನಾಳ ಗುರಿ ಮೋದಿ’ 7

ನ್ಯಾಯಮೂರ್ತಿಗಳ ಬೋಧನೆ ಬೇಡ: ‘ಸುಪ್ರೀಂ’ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
69,825 ▲	20,969 ▲	₹64,430 (ಬೆಂಗಳೂರು)	₹75,800 (ಬೆಂಗಳೂರು)	83.40 ▼

‘ದಾಖಲೆಯಿಲ್ಲದ’ ₹225 ಕೋಟಿ ಜಪ್ತಿ

ಭುವನೇಶ್ವರ (ಪಿಟಿಐ): ಒಡಿಶಾ ಮೂಲದ ಡಿಸ್ಟಿಲರಿ ಸಮೂಹದ ಕಚೇರಿಯಲ್ಲಿ ಶುಕ್ರವಾರವೂ ತಪಾಸಣೆ ಮುಂದು ವರಿಸಿದ ಐ.ಟಿ. ಅಧಿಕಾರಿಗಳು ‘ದಾಖಲೆಯಿಲ್ಲದ’ ₹ 225 ಕೋಟಿ ನಗದು ಪತ್ತೆ ಮಾಡಿದ್ದಾರೆ. ಜಪ್ತಿಯಾದ ಮೊತ್ತ ₹ 250 ಕೋಟಿಗೂ ಹೆಚ್ಚಿರಬಹುದು ಎಂದು ತಿಳಿಸಿದ್ದಾರೆ.

‘ಹಣ ಎಣಿಕೆಗೆ ಮೂರು ಡಜನ್‌ಗೂ ಹೆಚ್ಚು ಎಣಿಕೆ ಯಂತ್ರಗಳನ್ನು ಬಳಸಲಾಗಿದೆ. ಇವುಗಳ ಎಣಿಕೆ ಮಿತಿ ಸೀಮಿತವಾಗಿದ್ದು, ಇಡೀ ಪ್ರಕ್ರಿಯೆ ವಿಳಂಬವಾಗಬಹುದು. ಅಲ್ಮೆರಾಗಳಲ್ಲಿ ಹಣ ಜೋಡಿಸಿಟ್ಟಿದ್ದು, ಎಣಿಕೆ ನಡೆದಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆದಾಯ ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೌದ್ ಡಿಸ್ಟಿಲರಿ ಪ್ರೈವೇಟ್ ಲಿಮಿಟೆಡ್‌ನ ವಿವಿಧ ಕಚೇರಿಗಳ ಮೇಲೆ ಬುಧವಾರ ಅಧಿಕಾರಿಗಳು ಏಕಕಾಲಕ್ಕೆ ದಾಳಿ ನಡೆಸಿದ್ದರು.

ವಿವರ 11

ಕಾಂಗರೂ ನ್ಯಾಯಾಲಯ ವಿಧಿಸಿದ ನೇಣು ಶಿಕ್ಷೆ: ಟಿಎಂಸಿ ನಾಯಕಿ ಆಕ್ರೋಶ

ಮಹುವಾ ಉಚ್ಚಾಟನೆ

ನವದೆಹಲಿ (ಪಿಟಿಐ): ಉದ್ಯಮಿಯೊಬ್ಬರ ಹಿತಾಸಕ್ತಿಯ ರಕ್ಷಣೆಗಾಗಿ ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು, ಆ ಉದ್ಯಮಿಯಿಂದ ಅಕ್ರಮವಾಗಿ ಪ್ರಯೋಜನ ಪಡೆದುಕೊಂಡಿದ್ದಾರೆ ಎಂದು ಹೇಳಿರುವ ನೀತಿ ಸಮಿತಿಯ ವರದಿಯನ್ನು ಅಂಗೀಕರಿಸಿರುವ ಲೋಕಸಭೆಯು, ಮಹುವಾ ಅವರನ್ನು ಲೋಕಸಭಾ ಸದಸ್ಯತ್ವದಿಂದ ಶುಕ್ರವಾರ ಉಚ್ಚಾಟಿಸಿದೆ.

ನೀತಿ ಸಮಿತಿಯ ವರದಿ ಬಗ್ಗೆ ಲೋಕಸಭೆಯಲ್ಲಿ ಬಿರುಸಿನ ಚರ್ಚೆ ನಡೆಯಿತು. ಆದರೆ ಈ ವೇಳೆ ಮಹುವಾ ಅವರಿಗೆ ಮಾತನಾಡಲು ಅವಕಾಶ ಕೊಡಲಿಲ್ಲ. ಮಹುವಾ ಅವರು ‘ಅನೈತಿಕವಾಗಿ ನಡೆದುಕೊಂಡಿದ್ದಾರೆ’ ಎಂಬ ಕಾರಣಕ್ಕೆ ಅವರನ್ನು ಉಚ್ಚಾಟಿಸಬೇಕು ಎಂಬ ಗೊತ್ತುವಳಿಯನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮಂಡಿಸಿದರು.

11ನೇ ಪುಟ ನೋಡಿ

‘ನನಗೆ 49 ವರ್ಷ, ಇನ್ನೂ 30 ವರ್ಷ ಹೋರಾಡುವೆ’



ಪ್ರಜಾವಾಣಿ ವಾರ್ತೆ

ನವದೆಹಲಿ: ಆಡಳಿತಾರೂಢ ಬಿಜೆಪಿ ವಿರುದ್ಧ ಸಂಸತ್ತಿನ ಹೊರಗಡೆಯೂ ಹೋರಾಟ ಮುಂದುವರಿಸುವುದಾಗಿ ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಹೇಳಿದರು. ಲೋಕಸಭೆಯಿಂದ ಉಚ್ಚಾಟನೆಗೊಂಡ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಉಚ್ಚಾಟನೆಯಂತಹ ಕ್ರಮಗಳ ಮೂಲಕ ತಾವು ಅದಾನಿ ವಿಚಾರ ಪ್ರಸ್ತಾಪಿಸುವುದನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದರು.

‘ನಾನು ಸದನದ ಒಳಗೆ ಈ ಮಾತುಗಳನ್ನು ಆಡಲು ಬಯಸಿದ್ದೆ. ಆದರೆ ಅದಕ್ಕೆ ಅವಕಾಶ ಸಿಗಲಿಲ್ಲ’ ಎಂಬುದಾಗಿ ಮೊಯಿತ್ರಾ ಹೇಳಿದರು. ಅವರ ಜೊತೆ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಇತರ ಕೆಲವು ಸಂಸದರು ಕೂಡ ಇದ್ದರು.

‘ನನಗೆ ಈಗ 49 ವರ್ಷ ವಯಸ್ಸು, ನಾನು ಇನ್ನೂ ಮೂವತ್ತು ವರ್ಷ ಹೋರಾಡುವೆ. ಸಂಸತ್ತಿನ ಒಳಗೆ ಮತ್ತು ಹೊರಗೆ ಹೋರಾಡುವೆ’ ಎಂದರು.

> ಬಿಜೆಪಿ ವಿರುದ್ಧ ಬೀದಿಯಲ್ಲಿ ನಿಂತು ಹೋರಾಟ ನಡೆಸುತ್ತೇನೆ, ಚರಂಡಿಯಲ್ಲಿ ನಿಂತೂ ಹೋರಾಡುವೆ
>
> ಮಹುವಾ ಮೊಯಿತ್ರಾ

11ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳಿಗೆ ಯುಪಿಐ ಪಾವತಿ ಮಿತಿ ₹5 ಲಕ್ಷ

ಮುಂಬೈ (ಪಿಟಿಐ): ಆಸ್ಪತ್ರೆಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ಯುಪಿಐ ಮೂಲಕ ಹಣ ಪಾವತಿಸುವ ಮಿತಿಯನ್ನು ಈಗಿರುವ ₹ 1 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ಧರಿಸಿದೆ.

ಯುಪಿಐ ಪಾವತಿ ಮಿತಿ ಏರಿಕೆ ಮಾಡಿರುವುದರಿಂದ ಗ್ರಾಹಕರಿಗೆ ಹೆಚ್ಚು ಅನುಕೂಲ ಆಗಲಿದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಶುಕ್ರವಾರ ತಿಳಿಸಿದ್ದಾರೆ.

ಪುನರಾವರ್ತಿತ ಪಾವತಿಗಳಿಗೆ (recurring transactions) ಇರುವ ಮಿತಿಯನ್ನು ₹1 ಲಕ್ಷಕ್ಕೆ ಹೆಚ್ಚಿಸಲು ಆರ್‌ಬಿಐ ಉದ್ದೇಶಿಸಿದೆ. ಮ್ಯೂಚುವಲ್ ಫಂಡ್ ಚಂದಾದಾರಿಕೆ, ವಿಮೆ ಕಂತಿನ ಚಂದಾದಾರಿಕೆ ಮತ್ತು ಕ್ರೆಡಿಟ್ ಕಾರ್ಡ್ ಮರುಪಾವತಿಯಂತಹ ಪುನರಾವರ್ತಿತ ಪಾವತಿಗಳಿಗೆ ಪ್ರತಿ ವರ್ಗಾವಣೆಯ ಮಿತಿಯನ್ನು ₹15,000 ರಿಂದ ₹1 ಲಕ್ಷಕ್ಕೆ ಹೆಚ್ಚಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.

ಪುನರಾವರ್ತಿತ ಪಾವತಿಗಳಿಗೆ ಇ–ಮ್ಯಾಂಡೇಟ್ ವ್ಯವಸ್ಥೆ ಜನಪ್ರಿಯವಾಗಿದೆ.

10ನೇ ಪುಟ ನೋಡಿ

ನಟಿ ಲೀಲಾವತಿ ನಿಧನ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೋಜ್ಞ ಅಭಿನಯದ ಮೂಲಕ ಕನ್ನಡಿಗರ ಕಣ್ಮಣಿಯಾಗಿದ್ದ ಬಹುಭಾಷಾ ತಾರೆ ಲೀಲಾವತಿ (86) ಶುಕ್ರವಾರ ನೆಲಮಂಗಲದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಕನ್ನಡ, ತಮಿಳು ಹಾಗೂ ತೆಲುಗು ಭಾಷೆಗಳ 600ಕ್ಕೂ ಹೆಚ್ಚು ಚಿತ್ರಗಳಲ್ಲಿ ಅವರು ನಟಿಸಿದ್ದರು. ಕನ್ನಡದಲ್ಲಿಯೇ 400ಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅಭಿನಯಿಸಿದ್ದರು. ಅವರ ಪುತ್ರ ವಿನೋದ್ ರಾಜ್ ಕೂಡ ಸಿನಿಮಾ ನಟ. ನೆಲಮಂಗಲದ ಅಂಬೇಡ್ಕರ್ ಮೈದಾನದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸೋಲದೇವನಹಳ್ಳಿಯಲ್ಲಿ ಶನಿವಾರ ಅಂತ್ಯಕ್ರಿಯೆ ನಡೆಯಲಿದೆ.

1937-2023

ನುಡಿನಮನ 9

800 ಶಿಕ್ಷಕರ ಬದಲು: ಪೋಷಕರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೈಕ್ಷಣಿಕ ವರ್ಷದ ಅಂತಿಮ ಘಟ್ಟದಲ್ಲಿ ಸುಮಾರು 800 ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಬದಲಾಯಿಸಲು ಬಿಬಿಎಂಪಿ ನಿರ್ಧರಿಸಿದೆ. ಈ ಕ್ರಮಕ್ಕೆ ಪೋಷಕರು ಹಾಗೂ ಶಿಕ್ಷಕರಿಂದ ಪ್ರತಿರೋಧ ವ್ಯಕ್ತವಾಗಿದೆ.

ಶೈಕ್ಷಣಿಕ ವರ್ಷ ಅಂತಿಮ ಘಟ್ಟದಲ್ಲಿದ್ದು, ಅಂತಿಮ ಪರೀಕ್ಷೆಗಳು ಸನಿಹದಲ್ಲಿವೆ. ಇಂತಹ ಸಂದರ್ಭದಲ್ಲಿ ಶಿಕ್ಷಕರು/ ಉಪನ್ಯಾಸಕರನ್ನು ಬದಲಾಯಿಸುವುದರಿಂದ ಮಕ್ಕಳ ವಿದ್ಯಾಭ್ಯಾಸದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಆರೋಪಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿನ 167 ಶಾಲಾ-ಕಾಲೇಜುಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಡಿ.15ರಿಂದ ಬಿಡುಗಡೆ ಮಾಡಬೇಕೆಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಆದೇಶ ಹೊರಡಿಸಿದ್ದಾರೆ.

ಕ್ರಿಸ್ಟೆಲ್ ಇನ್ಫೋಸಿಸ್ಟಮ್ಸ್ ಆ್ಯಂಡ್ ಸರ್ವೀಸಸ್ ಮೂಲಕ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರು/ ಉಪನ್ಯಾಸಕರನ್ನು ನೇಮಿಸಿಕೊಳ್ಳಲಾಗಿತ್ತು. ಆ ಸಂಸ್ಥೆಯ ಗುತ್ತಿಗೆ ಕಳೆದ ವರ್ಷವೇ ಮುಗಿದುಹೋಗಿತ್ತು. ಹೊಸ ಟೆಂಡರ್ ಪೂರ್ಣಗೊಳ್ಳುವರೆಗೆ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಕ್ರಿಸ್ಟೆಲ್ ಸಂಸ್ಥೆ ಶಿಕ್ಷಕರು ಮತ್ತು ಉಪನ್ಯಾಸಕರನ್ನು ಒದಗಿಸಲು ಜೂನ್‌ನಲ್ಲಿ ಅವಕಾಶ ನೀಡಲಾಗಿತ್ತು. 'ಇದೀಗ ಹೊಸ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಟೆಂಡರ್‌ನಲ್ಲಿ ಆಯ್ಕೆಯಾಗಿರುವ ಬಿಡ್‌ದಾರರಿಗೆ ಮುಖ್ಯ ಆಯುಕ್ತರ ನಿರ್ದೇಶನದಂತೆ ಕಾರ್ಯಾದೇಶ ನೀಡಬೇಕಿದೆ. ಹೀಗಾಗಿ, ಡಿ.15ರಿಂದ ನಿಮ್ಮ ಸಂಸ್ಥೆ ಒದಗಿಸುವ ಶಿಕ್ಷಕ/ ಉಪನ್ಯಾಸಕರ ಸೇವೆಯನ್ನು ಸ್ಥಗಿತಗೊಳಿಸಬೇಕು' ಎಂದು ಪ್ರೀತಿ ಗೆಹ್ಲೋಟ್ ಅವರು ಕ್ರಿಸ್ಟೆಲ್ ಸಂಸ್ಥೆಗೆ ಆದೇಶ ನೀಡಿದ್ದಾರೆ.

'ಈ ಹಂತದಲ್ಲಿ ಹೊಸ ಶಿಕ್ಷಕರು ಬಂದು ಪಾಠ ಮಾಡಿದರೆ ಮಕ್ಕಳಿಗೆ ತೊಂದರೆಯಾಗುತ್ತದೆ. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಇಂತಹ ಬದಲಾವಣೆ ಬೇಕಿಲ್ಲ. ಬಿಬಿಎಂಪಿ ಇಂತಹ ಸೂಕ್ಷ್ಮ ವಿಚಾರವನ್ನು ಅರಿತುಕೊಂಡು, ಶೈಕ್ಷಣಿಕ ವರ್ಷದ ಆರಂಭಕ್ಕೆ ಮುನ್ನವೇ ಎಲ್ಲ ರೀತಿಯ ಪ್ರಕ್ರಿಯೆಯನ್ನು ಮುಗಿಸಬೇಕಿತ್ತು' ಎಂದು ಪೋಷಕರಾದ ರಮೇಶ್ ಹೇಳಿದರು.

'ಹೊಸ ಶಿಕ್ಷಕರು/ಉಪನ್ಯಾಸಕರನ್ನು ಈಗ ನೇಮಿಸಿದರೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಈಗಿರುವ ನಾವು ಎಲ್ಲಿಗೆ ಹೋಗಬೇಕು? ಅವರ ಆರ್ಥಿಕ ಸ್ಥಿತಿಗೆ ಸಮಸ್ಯೆ ಆಗುತ್ತದೆ' ಎಂದು ಶಿಕ್ಷಕರು ಅಳಲು ತೋಡಿಕೊಂಡರು.

'ಆರು ವರ್ಷಗಳಿಂದ ಶಿಕ್ಷಕರು, ಉಪನ್ಯಾಸಕರು ಬೋಧನೆ ಮಾಡುತ್ತಿದ್ದಾರೆ. ಕೆಲವರು ಹಿಂದಿನ ಏಜೆನ್ಸಿ ಜೊತೆಯಲ್ಲೂ ಇದ್ದು, 8 ರಿಂದ 10 ವರ್ಷದಿಂದ ಬೋಧಿಸುತ್ತಿದ್ದಾರೆ. ಇವರನ್ನೆಲ್ಲ ಏಕಾಏಕಿ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ತೆಗೆದುಹಾಕುವುದರಿಂದ ಎಲ್ಲರಿಗೂ ತೊಂದರೆಯಾ ಗುತ್ತದೆ' ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಅಧಿಕಾರಿಗಳು ತಿಳಿಸಿದರು.

'ಹೊಸ ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೆ ಮಾತ್ರ ಈ ಶೈಕ್ಷಣಿಕ ವರ್ಷದಲ್ಲಿ ಹೊರಗುತ್ತಿಗೆಯಲ್ಲಿ ಶಿಕ್ಷಕರು/ ಪೋಷಕರನ್ನು ಒದಗಿಸಬೇಕು ಎಂದು ಕ್ರಿಸ್ಟೆಲ್ ಸಂಸ್ಥೆಗೆ ಮೊದಲೇ ತಿಳಿಸಲಾಗಿತ್ತು' ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದರು.

ಸೆಕ್ಯುರಿಟಿ ಏಜೆನ್ಸಿಗೆ ಗುತ್ತಿಗೆ

ಬಿಬಿಎಂಪಿ ದಕ್ಷಿಣ ಹಾಗೂ ಆರ್‌.ಆರ್‌. ನಗರ ವಲಯದ ಶಾಲೆ-ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರನ್ನು ಒದಗಿಸುವ ಗುತ್ತಿಗೆಯನ್ನು 'ಅಪ್ಪು ಡಿಟೆಕ್ಟೀವ್ ಆ್ಯಂಡ್ ಸೆಕ್ಯೂರಿಟಿ ಸರ್ವೀಸ್'ಗೆ ನೀಡಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿದೆ.

'ಸೆಕ್ಯೂರಿಟಿಗಳನ್ನು ಒದಗಿಸುವ ಸಂಸ್ಥೆಯಿಂದ ಗುಣಮಟ್ಟದ ಶಿಕ್ಷಕರನ್ನು ಒದಗಿಸಲು ಸಾಧ್ಯವೆ' ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ. 'ನಗುವುದೋ ಅಳುವುದೋ ಗೊತ್ತಾಗುತ್ತಿಲ್ಲ. ಬಿಬಿಎಂಪಿಯ ಈ ಅವಿವೇಕತನ ಕಂಡು. ಡಿಟೆಕ್ಟೀವ್ ಸಂಸ್ಥೆಯ ಮೂಲಕ ಶಿಕ್ಷಕರ ಆಯ್ಕೆ! ಎಲ್ಲಿಗೆ ಬಂತು ಶಿಕ್ಷಕ- ಶಿಕ್ಷಣದ ಸ್ಥಿತಿ!' ಎಂದು ಶಾಸಕ ಎಸ್‌. ಸುರೇಶ್‌ಕುಮಾರ್ ಅವರು ಸಾಮಾಜಿಕ ಜಾಲತಾಣದಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಇಂದು 'ಭೂಮಿಕಾ ಕ್ಲಬ್' ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ



ಗಾನವಿ ಲಕ್ಷ್ಮಣ್

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಹಿಳೆಯರಿಗಾಗಿ ಸ್ಥಾಪಿಸಿರುವ 'ಭೂಮಿಕಾ ಕ್ಲಬ್' ವೇದಿಕೆಯು ಶನಿವಾರ ಮಧ್ಯಾಹ್ನ 1.30ಕ್ಕೆ ವಿಜಯನಗರದ ಗೋವಿಂದ-ರಾಜನಗರ ವಾರ್ಡ್‌ನಲ್ಲಿರುವ ವೈಟ್ ಪೆಟಲ್ಸ್‌ನಲ್ಲಿ 13ನೇ ಆವೃತ್ತಿಯ ವಿಶೇಷ ಕಾರ್ಯಕ್ರಮ ಹಮ್ಮಿಕೊಂಡಿದೆ.

'ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್', 'ಮಣಿಪಾಲ್ ಆಸ್ಪತ್ರೆಗಳ ಸಮೂಹ' ಹಾಗೂ 'ಸ್ಟಾರ್ ಬಜಾರ್' ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಲಿದೆ. ಚಲನಚಿತ್ರ ನಟಿ ಗಾನವಿ ಲಕ್ಷ್ಮಣ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ವಿಚಾರಸಂಕಿರಣ ಹಾಗೂ ಸಂಗೀತ ಕಾರ್ಯಕ್ರಮ ಸೇರಿ ಹಲವು ವಿಶಿಷ್ಟತೆಯನ್ನು ಒಳಗೊಂಡಿರಲಿದೆ.

Freedom Healthy Cooking Oils presents ಭೂಮಿಕಾ ಕ್ಲಬ್ powered by manipalhospitals LIFE'S ON

ಅಡುಗೆ ಕಾರ್ಯಕ್ರಮವನ್ನು ಪೂಜಾ ಪಾಟೀಲ ನಡೆಸಿಕೊಡಲಿದ್ದಾರೆ. 'ಚಳಿಗಾಲದ ಅಲರ್ಜಿಗಳು' ವಿಚಾರಸಂಕಿರಣವನ್ನು ಮಿಲ್ಲರ್ಸ್ ರಸ್ತೆಯ ಮಣಿಪಾಲ್ ಆಸ್ಪತ್ರೆಯ ಶ್ವಾಸಕೋಶ ವಿಜ್ಞಾನದ ಸಲಹೆಗಾರರಾದ ಡಾ. ವಸುನೇತ್ರ ಕಾಸರಗೋಡು ನಡೆಸಿಕೊಡಲಿದ್ದಾರೆ. 'ಚಳಿಗಾಲದಲ್ಲಿ ಚರ್ಮ ಮತ್ತು ಕೂದಲ ರಕ್ಷಣೆ' ವಿಷಯದ ಬಗ್ಗೆ ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯ ಚರ್ಮರೋಗ ತಜ್ಞೆ ಡಾ. ರಿತಿಕಾ ಷಣ್ಮುಗಂ ಮಾತನಾಡಲಿದ್ದಾರೆ.

ದಿವ್ಯಾ ರಾಮಚಂದ್ರ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಹೆಸರು ನೋಂದಾಯಿಸಿದವರಿಗೆ ಮಾತ್ರ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಎಂದು ಪ್ರಕಟಣೆ ತಿಳಿಸಿದೆ.

ನೋಂದಣಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'ನಮ್ಮ ರಸ್ತೆ': ಸಲಹೆಗಳಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ



'ನಮ್ಮ ರಸ್ತೆ' ಪ್ರದರ್ಶನದಲ್ಲಿ ಕಾಲೇಜು ವಿದ್ಯಾರ್ಥಿನಿಯರು ಫೋಟೊ ತೆಗೆದುಕೊಂಡು ಸಂಭ್ರಮಿಸಿದರು

ಬೆಂಗಳೂರು: ನಗರದಲ್ಲಿ ಸುರಕ್ಷಿತ ರಸ್ತೆಗಳನ್ನು ನಿರ್ಮಿಸುವ ಉದ್ದೇಶದಿಂದ ಬಿಬಿಎಂಪಿಯಲ್ಲಿ 'ನಮ್ಮ ರಸ್ತೆ'- ಪ್ರದರ್ಶನ ಮತ್ತು ಕಾರ್ಯಾಗಾರ ಆಯೋಜಿಸಿದ್ದು, ನಾಗರಿಕರಿಂದ ಸಲಹೆ ಸಂಗ್ರಹಿಸಲಾಗುತ್ತಿದೆ.

ಜಾಗತಿಕ ರಸ್ತೆ ಸುರಕ್ಷತೆಗಾಗಿ ಬ್ಲೂಮ್‌ಬರ್ಗ್ ಫಿಲಾಂತ್ರಪಿಸ್ ಇನಿಷಿಯೇಟಿವ್ ಅಡಿಯಲ್ಲಿ ಜ್ಞಾನಪಾಲುದಾರ ವರ್ಲ್ಡ್ ರಿಸೋರ್ಸ್ ಇನ್‌ಸ್ಟಿಟ್ಯೂಟ್ (ಡಬ್ಲ್ಯುಆರ್‌ಐ) ಇಂಡಿಯಾದ ಸಹಭಾಗಿತ್ವದಲ್ಲಿ ಬಿಬಿಎಂಪಿಯು 'ನಮ್ಮ ರಸ್ತೆ' ಪ್ರದರ್ಶನವನ್ನು ಕೇಂದ್ರ ಕಚೇರಿಯ ಡಾ. ರಾಜ್‌ಕುಮಾರ್ ಗಾಜಿನ ಮನೆಯಲ್ಲಿ ಡಿ.9ರವರೆಗೆ ಆಯೋಜಿಸಿದೆ.

ರಸ್ತೆಗಳನ್ನು ನಾಗರಿಕರಿಗೆ ಸುರಕ್ಷಿತವಾಗಿರಿಸುವುದು, ಸ್ಥಿತಿಸ್ಥಾಪಕವಾಗಿಸಲು ಬೇಕಾದ ಎಲ್ಲಾ ಪರಿಹಾರಗಳನ್ನು ಆಲೋಚಿಸುವುದು ಹಾಗೂ ಸಲಹೆಗಳನ್ನು ಪಡೆಯುವುದು ಸೇರಿದಂತೆ ಹಲವು ಚರ್ಚೆಗಳು ಸಮಾವೇಶಗಳು ನಡೆಯುತ್ತಿವೆ.

ನಗರದಲ್ಲಿ ಸಕ್ರಿಯ ಸಾರಿಗೆಯನ್ನು ಉತ್ತೇಜಿಸಲು ಮತ್ತು ಆರೋಗ್ಯಕರ ಜೀವನಶೈಲಿಯನ್ನು ಉತ್ತೇಜಿಸಲು, ಪಾದಚಾರಿ-ಸ್ನೇಹಿ ಬೀದಿಗಳು, ಸೈಕ್ಲಿಂಗ್‌ಗಾಗಿಯೇ ಮೀಸಲಾದ ಪ್ರತ್ಯೇಕ ಪಥಗಳು ಮತ್ತು ಹಸಿರುಮಯವಾದ ಸ್ಥಳಗಳನ್ನು ಸೃಷ್ಟಿಸುವಂತೆ ಪ್ರದರ್ಶನದಲ್ಲಿ ಸಲಹೆ ನೀಡಲಾಗಿದೆ.

ಸುರಕ್ಷಿತ ರಸ್ತೆಗಳನ್ನು ಸಿದ್ಧಪಡಿಸುವ ಕುರಿತು ಅನುಭವಗಳನ್ನು ಹಂಚಿಕೊಳ್ಳಲು ನಾಗರಿಕರು, ನಾಗರಿಕ ಸಂಸ್ಥೆಗಳು, ವಿನ್ಯಾಸಕರು, ವಿವಿಧ ಶೈಕ್ಷಣಿಕ ಸಂಸ್ಥೆಗಳಿಗೆ ಅವಕಾಶ ನೀಡಲಾಗಿದೆ. ನಗರದಲ್ಲಿ ಮೆಟ್ರೊ ಜಾಲ, ಉಪನಗರ ರೈಲು ಸೌಲಭ್ಯಗಳು ಮತ್ತು ಬಸ್‌ಗಳ ಸೇವೆಗಳ ತ್ವರಿತ ವಿಸ್ತರಣೆಯೊಂದಿಗೆ ಸುರಕ್ಷಿತ ಸಂಪರ್ಕ ಜಾಲ ನಿರ್ಮಿಸುವುದು.

ಬಿಬಿಎಂಪಿ 'ಸುರಕ್ಷಾ 75 ಮಿಷನ್ 2023' ಅಡಿ ನಗರದ 75 ಜಂಕ್ಷನ್‌ಗಳ ಮರು ವಿನ್ಯಾಸ ಮಾಡುತ್ತಿದೆ. ಇದು ಜನ ಕೇಂದ್ರಿತ ಜಂಕ್ಷನ್ ವಿನ್ಯಾಸಗಳನ್ನು ರಚಿಸುವ ಗುರಿ ಹೊಂದಿದೆ. ಇದರಿಂದ ಸುರಕ್ಷಿತ, ಪರಿಣಾಮಕಾರಿ ಮತ್ತು ಸುಲಲಿತ ಪ್ರವೇಶವನ್ನು ನಾಗರಿಕರಿಗೆ ಒದಗಿಸುವ ವಿವರವನ್ನೂ ಪ್ರದರ್ಶನದಲ್ಲಿ ನೀಡಲಾಗಿದೆ.

ಸಲಹೆ ಪರಿಗಣನೆ: 'ನಮ್ಮ ರಸ್ತೆ'- ಪ್ರದರ್ಶನ ಹಾಗೂ ಕಾರ್ಯಾಗಾರದ ಮೂಲಕ ರಸ್ತೆ, ಪಾದಚಾರಿ ಮಾರ್ಗಗಳನ್ನು ನಾಗರಿಕರ ಸುರಕ್ಷತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಿನ್ಯಾಸ ಮಾಡಬೇಕಿದೆ. ಈ ಕಾರ್ಯಾಗಾರದ ಮೂಲಕ ಬರುವ ಸಲಹೆಗಳನ್ನು ಪರಿಗಣಿಸಿ, ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ಸರಳ ವಿನ್ಯಾಸಗಳು

- ರಸ್ತೆಗಳ ಮಧ್ಯದ ಸ್ಥಳವನ್ನು 'ಆಶ್ರಯ ದ್ವೀಪ'ವಾಗಿ ನಿರ್ಮಿಸುವುದು
- ಸ್ಪೀಡ್ ಹಂಪ್‌ಗಳ ನಿರ್ಮಾಣ
- ರಸ್ತೆ ಮಾರ್ಕಿಂಗ್ ಮಾಡುವುದು.
- ರಸ್ತೆಯ ಮಧ್ಯಭಾಗದಲ್ಲಿ ಪಾದಚಾರಿಗಳು ನಿಲ್ಲಲು ವ್ಯವಸ್ಥೆ
- ಸೂಚನಾ ಫಲಕಗಳ ಅಳವಡಿಕೆ
- ಎತ್ತರದ ಪಾದಚಾರಿ ಕ್ರಾಸಿಂಗ್ ನಿರ್ಮಿಸುವುದು
- ಬಹು ಉಪಯೋಗದ 'ಸೈಡ್ ವಾಕ್‌ಝೋನ್' ನಿರ್ಮಿಸುವುದು
- ಕಾಂಪ್ಯಾಕ್ಟ್ ಇಂಟರ್ ಸೆಕ್ಷನ್‌ಗಳ ನಿರ್ಮಾಣ
- ವಾಹನಗಳ ವೇಗ ನಿಯಂತ್ರಿಸಲು ರಂಬಲ್ ಸ್ಟ್ರಿಪ್ಸ್ ಅಳವಡಿಕೆ
- ಬಸ್ ತಂಗುದಾಣ ನಿರ್ಮಾಣ

ನಾಗರಿಕರ ಪ್ರತಿಕ್ರಿಯೆ

ಬೆಂಗಳೂರಿನ ಬೀದಿಗಳಲ್ಲಿ ನಿಮ್ಮ ಅನುಭವವನ್ನು ಉತ್ತಮಗೊಳಿಸಲು ನಾವು ಏನು ಮಾಡಬಹುದು?' ಎಂದು ಪ್ರದರ್ಶನದ ದೊಡ್ಡ ಫಲಕದಲ್ಲಿ ನಾಗರಿಕರ ಸಲಹೆ ಆಹ್ವಾನಿಸಲಾಗಿತ್ತು. ಆ ಫಲಕದ ಮೇಲೆ ನಾಗರಿಕರು ಬರೆದಿರುವ ಕೆಲವು ಸಲಹೆಗಳು ಹೀಗಿವೆ...

- ಬಸ್ ತಂಗುದಾಣಗಳಲ್ಲಿ ರಸ್ತೆ ದಾಟಲು ಸುರಕ್ಷಿತ ವ್ಯವಸ್ಥೆ ಇರಲಿ
- ಸಂಚಾರ ದಟ್ಟಣೆ ನಿಯಂತ್ರಿಸುವುದು ಉತ್ತಮ
- ಬಸ್ ತಂಗುದಾಣಗಳನ್ನು ಸುಂದರಗೊಳಿಸಿ
- ಪಾದಚಾರಿ ಮಾರ್ಗಗಳಲ್ಲಿ ಹಸಿರೀಕರಣ ಹೆಚ್ಚಲಿ
- ರಸ್ತೆಗಳನ್ನು ಸ್ವಚ್ಛವಾಗಿಡಿ
- ಸಿ.ಸಿ. ಟಿ.ವಿ ಕ್ಯಾಮೆರಾಗಳು ಹೆಚ್ಚಾಗಲಿ
- ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಿ
- ರಸ್ತೆ ಚರಂಡಿ ವ್ಯವಸ್ಥೆ ಸರಿಪಡಿಸಿ
- ನಗರ ಅಭಿವೃದ್ಧಿಗೆ ಸಮರ್ಪಕ ಯೋಜನೆ ರೂಪಿಸಿ
- ಭ್ರಷ್ಟಾಚಾರವನ್ನು ಮೊದಲು ಕಡಿಮೆ ಮಾಡಿ

ಸೂರ್ಯನ ಮೊದಲ ಪೂರ್ಣ ಚಿತ್ರ ಸೆರೆಹಿಡಿದ 'ಆದಿತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯನ ಬಾಹ್ಯ ವಾತಾವರಣದ ಅಧ್ಯಯನ ನಡೆಸುತ್ತಿರುವ 'ಆದಿತ್ಯ-ಎಲ್1' ಬಾಹ್ಯಾಕಾಶ ನೌಕೆಯಲ್ಲಿ ಅಳವಡಿಸಿರುವ ಸೌರ ನೇರಳಾತೀತ ಇಮೇಜಿಂಗ್ ಟೆಲಿಸ್ಕೋಪ್ (ಎಸ್‌ಯುಐಟಿ) ಉಪಕರಣವು 200ರಿಂದ 400ರವರೆಗಿನ ಎನ್‌ಎಂ ತರಂಗಾಂತರ ವ್ಯಾಪ್ತಿಯಲ್ಲಿ ಸೂರ್ಯನ ಮೊದಲ ಪೂರ್ಣ ವೃತ್ತದ ಚಿತ್ರಗಳನ್ನು ಯಶಸ್ವಿಯಾಗಿ ಸೆರೆಹಿಡಿದಿದೆ.

ವಿವಿಧ ವೈಜ್ಞಾನಿಕ ಶೋಧಕಗಳನ್ನು ಬಳಸಿಕೊಂಡು ಈ ತರಂಗಾಂತರ ವ್ಯಾಪ್ತಿಯಲ್ಲಿ ಸೂರ್ಯನ ದ್ಯುತಿಗೋಳ ಮತ್ತು ವರ್ಣಗೋಳದ ಚಿತ್ರಗಳನ್ನು ಎಸ್‌ಯುಐಟಿ ಉಪಕರಣವು ಸೆರೆಹಿಡಿದಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆ (ಇಸ್ರೊ) ಶುಕ್ರವಾರ 'ಎಕ್ಸ್‌'ನಲ್ಲಿ ತಿಳಿಸಿದೆ.

2023ರ ನವೆಂಬರ್ 20ರಂದು ಎಸ್‌ಯುಐಟಿ ಪೇಲೋಡ್ ಅನ್ನು ಚಾಲನೆಗೊಳಿಸಲಾಗಿತ್ತು. ಯಶಸ್ವಿಯಾಗಿ ಚಾಲನೆಯಾದ ನಂತರ ದೂರದರ್ಶಕವು ತನ್ನ ಮೊದಲ ಬೆಳಕಿನ ವಿಜ್ಞಾನ ಚಿತ್ರಗಳನ್ನು ಇದೇ 6ರಂದು ಸೆರೆಹಿಡಿದಿದೆ. ಹನ್ನೊಂದು ವಿಭಿನ್ನ ಫಿಲ್ಟರ್‌ಗಳನ್ನು ಬಳಸಿ ತೆಗೆದ ಈ ಅಭೂತಪೂರ್ವ ಚಿತ್ರಗಳು, ಮೊದಲ ಬಾರಿಗೆ ಪೂರ್ಣ ವೃತ್ತವನ್ನು ಹೊಂದಿವೆ ಎಂದು ಇಸ್ರೊ ತಿಳಿಸಿದೆ.

ಈ ಉಪಕರಣವು ನಡೆಸಿರುವ ಅವಲೋಕನಗಳು ವಿಜ್ಞಾನಿಗಳಿಗೆ ಸೂರ್ಯನ ಕಾಂತೀಯ ಸೌರ ವಾತಾವರಣದ ಡೈನಾಮಿಕ್ ಜೋಡಣೆಯ ಅಧ್ಯಯನಕ್ಕೆ ನೆರವಾಗಲಿದೆ. ಭೂಮಿಯ ಹವಾಮಾನದ ಮೇಲೆ ಸೌರ ವಿಕಿರಣದ ಪರಿಣಾಮಗಳ ಅಧ್ಯಯನ ನಡೆಸಲು ಅನುಕೂಲವಾಗಲಿದೆ ಎಂದು ಇಸ್ರೊ ಹೇಳಿದೆ.

ಎಸ್‌ಯುಐಟಿ ಉಪಕರಣವನ್ನು ಇಸ್ರೊ ಮತ್ತು ಪುಣೆಯ ಖಗೋಳವಿಜ್ಞಾನ ಮತ್ತು ಖಗೋಳ ಭೌತವಿಜ್ಞಾನದ ಅಂತರ-ವಿಶ್ವವಿದ್ಯಾಲಯದ ಕೇಂದ್ರ (ಐಯುಸಿಎಎ) ನೇತೃತ್ವದಲ್ಲಿ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ (ಎಂಎಎಚ್‌ಇ), ಕೋಲ್ಕತ್ತದ ಐಐಎಸ್‌ಇಆರ್-ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಸ್ಪೇಸ್ ಸೈನ್ಸ್ ಇಂಡಿಯನ್ (ಸಿಇಎಸ್‌ಎಸ್‌ಐ), ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಆಸ್ಟ್ರೋ-ಫಿಸಿಕ್ಸ್, ಉದಯಪುರದ ಸೌರ ವೀಕ್ಷಣಾಲಯ (ಯುಎಸ್‌ಒ-ಪಿಆರ್‌ಎಲ್) ಮತ್ತು ಅಸ್ಸಾಂನ ತೇಜ್‌ಪುರ ವಿಶ್ವವಿದ್ಯಾಲಯ ಇವುಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿದೆ.




ಎಸ್‌ಯುಐಟಿ ಉಪಕರಣವು ಸೆರೆ ಹಿಡಿದಿರುವ ಸೂರ್ಯನ ಮೊದಲ ಪೂರ್ಣ ವೃತ್ತದ ಚಿತ್ರಗಳು

ಮಾರ್ಚ್ ಅಂತ್ಯಕ್ಕೆ ಆಸ್ತಿ ದಾಖಲೆ ಡಿಜಿಟಲೀಕರಣ

ಬೆಂಗಳೂರು: ನಗರದಲ್ಲಿರುವ ಆಸ್ತಿಗಳ ದಾಖಲೆಗಳನ್ನು ಮುಂದಿನ ವರ್ಷದ ಮಾರ್ಚ್ ಅಂತ್ಯಕ್ಕೆ ಡಿಜಿಟಲೀಕರಣ ಪೂರ್ಣಗೊಳಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ.

ಆಸ್ತಿಗಳ ದಾಖಲೆಗಳ ಸ್ಕ್ಯಾನಿಂಗ್ ಹಾಗೂ ಡಿಜಿಟಲೀಕರಣಕ್ಕೆ ಟೆಂಡರ್ ಆಹ್ವಾನಿಸಲಾಗಿದ್ದು, ಡಿ.22ರಿಂದ ಕೆಲಸ ಆರಂಭಿಸಲು ನಿರ್ಧರಿಸಲಾಗಿದೆ. ಡಿ.29ರ ವೇಳೆಗೆ ಸ್ಕ್ಯಾನಿಂಗ್ ಕೇಂದ್ರಗಳನ್ನು ಪ್ರಾರಂಭಿಸಲಾಗುತ್ತದೆ. ಸಹಾಯಕ ಕಂದಾಯ ಅಧಿಕಾರಿ (ಎಆರ್‌ಒ) ಕಚೇರಿಗಳಲ್ಲಿ 2024 ಫೆ.12ರೊಳಗೆ ಸ್ಕ್ಯಾನಿಂಗ್ ಚಟುವಟಿಕೆ ಮುಗಿಯಬೇಕು. ಮಾರ್ಚ್ 28ರ ವೇಳೆಗೆ ಡಿಜಿಟಲೀಕರಣ ಕಾರ್ಯ ಪೂರ್ಣಗೊಳ್ಳಬೇಕು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಎ ಮತ್ತು ಬಿ ರಿಜಿಸ್ಟರ್‌ಗಳು ಸೇರಿದಂತೆ ಆಸ್ತಿ ತೆರಿಗೆ ದಾಖಲೆಗಳನ್ನು ಒಳಗೊಂಡ 5,100 ಕೈಬರಹದ ರಿಜಿಸ್ಟರ್‌ಗಳಿವೆ. 11 ರಿಂದ 25 ವರ್ಷಗಳ ಹಿಂದಿನ ದಾಖಲೆಗಳಾಗಿದ್ದು, 21ರಿಂದ 30 ಮಾಹಿತಿಗಳಿವೆ. ಇವುಗಳನ್ನು 600 ಡಿಪಿಐ ರೆಸ್ಯುಲೂಷನ್‌ನಲ್ಲಿ 64 ಆರ್‌ಒ ಕಚೇರಿಗಳಲ್ಲಿ ಸ್ಕ್ಯಾನ್ ಮಾಡಬೇಕಿದೆ.



'ಸರ್ವರಿಗೂ ನ್ಯಾಯ' ಘೋಷ ವಾಕ್ಯದೊಂದಿಗೆ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ಆಯೋಜನೆ

ರಾಷ್ಟ್ರೀಯ ಲೋಕ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಇದೇ 9ರಂದು 'ಸರ್ವರಿಗೂ ನ್ಯಾಯ' ಎಂಬ ಘೋಷ ವಾಕ್ಯದೊಂದಿಗೆ ಪ್ರಕರಣಗಳ ತ್ವರಿತ ಇತ್ಯರ್ಥಕ್ಕೆ ರಾಜ್ಯವ್ಯಾಪಿ ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಿದೆ.

ಈ ವಿಷಯವನ್ನು ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರದ ನೂತನ ಕಾರ್ಯ ನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಗುರುವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದರು.

'ಪರಸ್ಪರ ರಾಜಿ-ಸಂಧಾನದ ಮೂಲಕ ಉಭಯ ಪಕ್ಷಕಾರರು ಒಪ್ಪಿ ತಮ್ಮ ವ್ಯಾಜ್ಯಗಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು. ವಾಜ್ಯಪೂರ್ವ ಮತ್ತು ಬಾಕಿ ಇರುವ ಪ್ರಕರಣಗಳನ್ನು ಇಲ್ಲಿ ಇತ್ಯರ್ಥಪಡಿಸಲಾಗುತ್ತದೆ. ಇದರಿಂದ ನ್ಯಾಯಾಲಯಗಳ ಮೇಲಿನ ಹೊರೆಯನ್ನು ಕಡಿಮೆ ಮಾಡಬಹುದು. ಸರ್ಕಾರ ಮತ್ತು ಕಕ್ಷಿದಾರರ ಆರ್ಥಿಕ ಹೊರೆಯೂ ಇಲ್ಲವಾಗುತ್ತದೆ' ಎಂದು ನ್ಯಾಯಮೂರ್ತಿ ದಿನೇಶ್ ಕುಮಾರ್ ತಿಳಿಸಿದರು.

2.60 ಲಕ್ಷ ಪ್ರಕರಣ: 'ರಾಜ್ಯದಾದ್ಯಂತ ಜಿಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ 19.93 ಲಕ್ಷ ಪ್ರಕರಣಗಳ ಪೈಕಿ 2.60 ಲಕ್ಷ ಪ್ರಕರಣಗಳನ್ನು ಗುರುತಿಸಲಾಗಿದೆ. ಈ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಪ್ರಮಾಣ ಇನ್ನಷ್ಟು ಏರಿಕೆಯಾಗಬಹುದು. ಇದೇ 9ರಂದು ಬೆಂಗಳೂರು, ಧಾರವಾಡ, ಕಲಬುರಗಿಯ ಹೈಕೋರ್ಟ್ ಪೀಠಗಳೂ ಸೇರಿದಂತೆ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯಗಳಲ್ಲಿ ಏಕಕಾಲಕ್ಕೆ ಸಾವಿರಕ್ಕೂ ಅಧಿಕ ವಿಚಾರಣಾ ಪೀಠಗಳಲ್ಲಿ ಲೋಕ ಅದಾಲತ್ ಕಲಾಪ ನಡೆಸಲಿದೆ' ಎಂದು ದಿನೇಶ್ ಕುಮಾರ್ ವಿವರಿಸಿದರು.

ಯಾವ ಪ್ರಕರಣಗಳು?

ಪ್ರಮುಖವಾಗಿ ಚೆಕ್ ಅಮಾನ್ಯಗೊಂಡ ಪ್ರಕರಣ, ವಿದ್ಯುತ್ ಹಾಗೂ ನೀರಿನ ಶುಲ್ಕಗಳು, ಬ್ಯಾಂಕ್ ವಸೂಲಾತಿ, ಉದ್ಯೋಗ ಕಾರ್ಮಿಕರಿಗೆ ಸಂಬಂಧಿಸಿದ, ರಾಜಿಯಾಗಬಲ್ಲ ಅಪರಾಧಿಕ, ಆಸ್ತಿ ಭಾಗ, ವೈವಾಹಿಕ ಹಾಗೂ ಇತರೆ ಸಿವಿಲ್ ಪ್ರಕರಣಗಳನ್ನು ನ್ಯಾಯಾಲಯದಲ್ಲಿ ದಾವೆ ಹೂಡುವ ಮೊದಲೇ ಪರಸ್ಪರ ರಾಜಿ-ಸಂಧಾನದ ಮೂಲಕ ಅದಾಲತ್‌ನಲ್ಲಿ ಬಗೆಹರಿಸಿಕೊಳ್ಳಬಹುದು. ನ್ಯಾಯಾಲಯದಲ್ಲಿ ಬಾಕಿ ಇರುವ, ರಾಜಿಯಾಗಬಲ್ಲ ಅಪರಾಧಿಕ ಮತ್ತು ಸಿವಿಲ್, ಅಪಘಾತ, ವಿಮೆ, ಪರಿಹಾರ ಪ್ರಕರಣಗಳು, ಭೂಸ್ವಾಧೀನ, ವೇತನ, ಭತ್ಯೆ, ಪಿಂಚಣಿ, ಬಾಡಿಗೆ ಅನುಭೋಗದ ಹಕ್ಕುಗಳಂತಹ ಸಿವಿಲ್ ಪ್ರಕರಣಗಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು.

'ಹೋರಾಟದ ಹಕ್ಕು ಕಸಿಯುವ ಪ್ರಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕರ ಹೋರಾಟದ ಹಕ್ಕುಗಳನ್ನು ದೇಶದಲ್ಲಿ ಪಕ್ಷಾತೀತವಾಗಿ ಕಸಿದುಕೊಳ್ಳಲಾಗುತ್ತಿದೆ. ಹೋರಾಟಗಳ ಮೇಲೆ ವಿಧಿಸಿರುವ ನಿರ್ಬಂಧ ತೆರವು ಮಾಡಬೇಕು' ಎಂದು ಆಮ್ನೆಸ್ಟಿ ಇಂಟರ್ ನ್ಯಾಷನಲ್ ವಕ್ತಾರ ಆಕಾರ್ ಪಟೇಲ್ ಆಗ್ರಹಿಸಿದರು.

ಬೆಂಗಳೂರು ನಗರ ವಿಶ್ವ ವಿದ್ಯಾಲಯದ ರಾಜ್ಯಶಾಸ್ತ್ರ,ಇತಿಹಾಸ ಹಾಗೂ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿಭಾಗ ಆಯೋಜಿಸಿದ್ದ 'ಸಮಕಾಲೀನ ಭಾರತದಲ್ಲಿ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ' ಕುರಿತು ಅವರು ಮಾತನಾಡಿದರು.

'ಉತ್ತರ ಅಮೆರಿಕ ಸೇರಿದಂತೆ ಹಲವು ದೇಶದಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು ಸಂಘಟನೆ ರಚಿಸಿಕೊಳ್ಳಬಹುದು. ಒಂದೆಡೆ ಸೇರಿಕೊಂಡು ಬೇಕುಬೇಡಗಳ ಕುರಿತು ಚರ್ಚಿಸಬಹುದು. ಆದರೆ, ಭಾರತದಲ್ಲಿ ಆ ಸ್ವಾತಂತ್ರ್ಯ ಇಲ್ಲ. ಅದರಲ್ಲೂ ಬೆಂಗಳೂರಿನಲ್ಲಿ ರ‍್ಯಾಲಿ, ಪ್ರತಿಭಟನೆ ನಡೆಸುವುದಕ್ಕೆ ಪೊಲೀಸರ ಅನುಮತಿ ಬೇಕಿದೆ. ನಮ್ಮ ಪ್ರತಿಭಟನಾ ಹಕ್ಕನ್ನು ಪೊಲೀಸರೇ ನಿರ್ಧರಿಸುತ್ತಿದ್ದಾರೆ. ಬಹುತೇಕ ಸಂದರ್ಭದಲ್ಲಿ ಅವರು ಪ್ರತಿಭಟನೆಗೆ ಅವಕಾಶವನ್ನೇ ನೀಡುತ್ತಿಲ್ಲ' ಎಂದು ಕಳವಳ ವ್ಯಕ್ತಪಡಿಸಿದರು.



ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಸಂವಾದದಲ್ಲಿ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಇಂಡಿಯಾದ ಮಂಡಳಿ ವಕ್ತಾರ ಆಕಾರ್ ಪಟೇಲ್ (ಎಡದಿಂದ ಮೂರನೆಯವರು) ಅವರನ್ನು ವಿಶ್ವವಿದ್ಯಾಲಯದ ಕುಲಪತಿ ಲಿಂಗರಾಜ ಗಾಂಧಿ ಸ್ವಾಗತಿಸಿದರು. ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಪ್ರೊ.ಎನ್. ನರಸಿಂಹ ಮೂರ್ತಿ ಪಾಲ್ಗೊಂಡಿದ್ದರು

'ಅಪಾರ ಸಂಖ್ಯೆಯಲ್ಲಿ ಜನರು ರಸ್ತೆಗಿಳಿದು ಹೋರಾಟ ನಡೆಸಿದರೆ ದೊಡ್ಡ ಬದಲಾವಣೆ ಕಾಣಲು ಸಾಧ್ಯವಿದೆ. ಹರಿಯಾಣ, ಪಂಜಾಬ್ ರೈತರು ಯಾವುದೇ ಅನುಮತಿ ಪಡೆಯದೆ ಹೋರಾಟ ನಡೆಸಿದ್ದರು. ಹೋರಾಟಕ್ಕೆ ಮಣಿದ ಕೇಂದ್ರ ಸರ್ಕಾರ ಕೃಷಿಕರಿಗೆ ಮಾರಕವಾಗಿದ್ದ ಕಾಯ್ದೆಗಳನ್ನು ವಾಪಸ್ ಪಡೆದಿತ್ತು. ಪೌರತ್ವ ತಿದ್ದುಪಡಿ ಕಾಯ್ದೆ ವಿರೋಧಿಸಿ, ದೇಶದಾದ್ಯಂತ ಮುಸ್ಲಿಮರು ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟಿಸಿದ್ದರು. ಆಗಲೂ ಸರ್ಕಾರ ಮಣಿಯಿತು. ಹೋರಾಟಕ್ಕೆ ಆ ತಾಕತ್ತಿದೆ' ಎಂದರು.

'ಸರ್ಕಾರ ಅಥವಾ ಒಂದು ಗುಂಪು ಜನರ ಸ್ವಾತಂತ್ರ್ಯ ಕಸಿದುಕೊಳ್ಳುತ್ತಲೇ ಇದೆ. ಸಾಮಾಜಿಕ ಕಳಕಳಿಯಿಂದ ಮಾತನಾಡಿದರೆ ಹೋರಾಟಗಾರರಿಗೆ ಬೆದರಿಕೆ ಹಾಕಲಾಗುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಬ್ರಿಟಿಷರ ಕಾಲದ ಕಾನೂನುಗಳು ಮತ್ತು ಪೊಲೀಸ್ ಬಲವನ್ನು ಬಳಸಿ ಭಿನ್ನಮತವನ್ನು ಹತ್ತಿಕ್ಕುವ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂಚಕಾರ ತಂದೊಡ್ಡಲಾಗಿದೆ. ಬಡತನ, ನಿರುದ್ಯೋಗ, ಅಸಮಾನತೆ ಹಾಗೂ ಭಯದ ವಾತಾವರಣವನ್ನು ಹಿಮ್ಮೆಟ್ಟಿಸಿ ಭಾರತದ ಪ್ರಜಾಪ್ರಭುತ್ವವನ್ನು ಅರ್ಥಪೂರ್ಣಗೊಳಿಸಲು ನಾಗರಿಕ ಸಮಾಜ, ಪ್ರತಿಪಕ್ಷಗಳು ಹಾಗೂ ನ್ಯಾಯಾಂಗ ಪ್ರಯತ್ನಿಸಬೇಕು' ಎಂದು ಕರೆ ನೀಡಿದರು.

'ಹಲವು ರಾಜ್ಯಗಳಲ್ಲಿ ಗೋಮಾಂಸ, ಹಿಜಾಬ್, ತಲಾಖ್ ವಿಚಾರದಲ್ಲಿ ಒಂದು ಧರ್ಮದ ಜನರನ್ನು ಗುರಿಯಾಗಿಸಿ ದೌರ್ಜನ್ಯ ಎಸಗಲಾಗುತ್ತಿದೆ. ಗುಜರಾತ್‌ನಲ್ಲಿ ವಿದೇಶಿಯರು ಬೇಕಾದರೆ ಆಸ್ತಿ ಖರೀದಿಸಲು ಸಾಧ್ಯವಿದೆ. ಅದೇ ಗುಜರಾತ್ ಮುಸ್ಲಿಮರಿಗೆ ಆ ಅವಕಾಶವಿಲ್ಲ. ಇದು ಯಾವ ನಿಯಮ' ಎಂದು ಪ್ರಶ್ನಿಸಿದರು.

'ಜಾತಿ ಪದ್ಧತಿ ವಿಷದ ಬಟ್ಟಲು'

ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಹಿತಿಗಳನ್ನು ಜಾತಿ, ಧರ್ಮಕ್ಕೆ ಸೀಮಿತಗೊಳಿಸಬಾರದು. ಬದಲಿಗೆ ಸಾಹಿತ್ಯದಿಂದಲೇ ಸಾಹಿತಿಗಳು ಜಗತ್ತಿನಲ್ಲಿ ಗುರುತಿಸಿಕೊಳ್ಳುವಂತೆ ಆಗಬೇಕು' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸಾಹಿತ್ಯ ಪರಿಷತ್ತು ಎಲ್ಲರನ್ನು ಗೌರವಿಸುವ ಮೂಲಕ ಸಾಹಿತ್ಯಕ್ಕೆ ಸಾಹಿತ್ಯವೇ ಸಾಟಿ ಎನ್ನುವ ತತ್ವವನ್ನು ಹೊಂದಿದೆ' ಎಂದರು.

'ಸಿದ್ದಲಿಂಗಯ್ಯ ಅವರನ್ನು ದಲಿತ ಕವಿ ಎಂದೇ ಗುರುತಿಸಿದ್ದರು. ದಲಿತ ಪರ ಹೋರಾಟ ಮತ್ತು ಸಾಮಾಜಿಕ ಸಮಾನತೆಗಾಗಿ ಸಾಹಿತ್ಯವನ್ನು ರಚಿಸಿದವರು. ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದರು' ಎಂದು ಹೇಳಿದರು.

'ಸಿದ್ದಲಿಂಗಯ್ಯ ಅವರು ಸಮಾಜದಲ್ಲಿರುವ ಮೌಢ್ಯವನ್ನು ದೂರ ಮಾಡುವುದರ ಜೊತೆಗೆ ಜೀವನದ ವಾಸ್ತವಿಕತೆಯನ್ನು ಮಾರ್ಮಿಕವಾಗಿ ತಿಳಿಸಿಕೊಟ್ಟವರು' ಎಂದು ಹೇಳಿದರು.



ನಗರದಲ್ಲಿ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಚ್‌.ಟಿ.ಪೋತೆ, ಇಂದುಮತಿ ಲಮಾಣಿ, ಕಾ.ವೆಂ.ಶ್ರೀನಿವಾಸಮೂರ್ತಿ, ಅರ್ಜುನ ಗೊಳಸಂಗಿ ಹಾಗೂ ನಾಗರಾಜ್ ಹೆತ್ತೂರು ಅವರಿಗೆ ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಮಹೇಶ ಜೋಶಿ, ಮೂಡ್ನಾಕೂಡು ಚಿನ್ನಸ್ವಾಮಿ, ರಮಾಕುಮಾರಿ ಸಿದ್ಧಲಿಂಗಯ್ಯ ಭಾಗವಹಿಸಿದ್ದರು

ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, 'ಸಿದ್ದಲಿಂಗಯ್ಯ ಅವರು ಕನ್ನಡ ಸಾಹಿತ್ಯದ ಮೂಲಕ ದಲಿತ ದಮನಿತರ ಧ್ವನಿಯಾದವರು. ಸಾಹಿತ್ಯ, ಸಂಗೀತ, ಹೋರಾಟ ಎಲ್ಲದರಲ್ಲಿಯೂ ತಮ್ಮನ್ನು ತಾವು ತೊಡಗಿಸಿಕೊಂಡ ಪ್ರಯೋಗಶಾಲಿ ಕವಿ ಆಗಿದ್ದರು. ಸರಳತೆ ಅವರ ಶಕ್ತಿಯಾಗಿತ್ತು' ಎಂದರು.

'ಜಾತಿ ಎನ್ನುವುದು ನಮ್ಮಲ್ಲಿ ಸಾಂಸ್ಕೃತಿಕ ಅಸ್ಮಿತೆಯಾಗಿದೆ. ಇದು ಅಳಿಯುವವರೆಗೂ ಸಾಹಿತ್ಯದಲ್ಲಿ ಕೂಡ ಪ್ರತ್ಯೇಕತೆ ಅನಿವಾರ್ಯವಾಗುತ್ತದೆ. ಜಾತಿ ಪದ್ಧತಿ ಎನ್ನುವುದು ಬರಿ ಭೂತವಲ್ಲ ಬದಲಿಗೆ ವಿಷದ ಬಟ್ಟಲು' ಎಂದು ಹೇಳಿದರು.

ಸಿದ್ದಲಿಂಗಯ್ಯ ಅವರ ಪುತ್ರಿ ಡಾ.ಮಾನಸಾ ಮಾತನಾಡಿದರು. ರಮಾಕುಮಾರಿ ಸಿದ್ದಲಿಂಗಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಆಲೂರು ಸುತ್ತಮುತ್ತ ಇಂದು ವಿದ್ಯುತ್ ವ್ಯತ್ಯಯ

ನೆಲಮಂಗಲ: 66/11 ಕೆ.ವಿ. ಆಲೂರು ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾರ್ಯ ಇರುವುದರಿಂದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 4ರವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು: ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ಆಲೂರು, ಆಲೂರು ಪಾಳ್ಯ, ಮಾಕಳಿ, ದಾಸನಪುರ, ಮಾದನಾಯಕಹನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳು, ಮಂತ್ರಿ ಬಡಾವಣೆ, ನರಸೀಪುರ, ಮತ್ತಹಳ್ಳಿ, ಹೊನ್ನಸಂದ್ರ, ಹೊನ್ನಸಂದ್ರ ಕಾಲೊನಿ, ಬಿಡಿಎ ಪ್ಲಾಟ್ಸ್, ನಗರೂರು, ನಗರೂರು ಕಾಲೊನಿ, ಎಪಿಎಂಸಿ, ಟಾಟಾ ಹೌಸಿಂಗ್, ಕೋಡಿಪಾಳ್ಯ, ಹೆಗ್ಗಡದೇವನಪುರ, ಅಡಕಮಾರನಹಳ್ಳಿ, ಅರೆಕ್ಯಾತನಹಳ್ಳಿ, ನಾರಾಯಣಪ್ಪನಪಾಳ್ಯ, ಗೌಡಹಳ್ಳಿ, ಗೌಡಹಳ್ಳಿ ಕಾಲೊನಿ, ಸಾಯಿ ಬಡಾವಣೆ, ಇ.ಕೆ.ಬಡಾವಣೆ, ಮಾತೃಶ್ರೀ ಬಡಾವಣೆ, ಸಂಜೀವಿನ ಬಡಾವಣೆ, ಹಿಮಾಲಯ ಡ್ರಗ್ಸ್ ಕಂಪನಿ, ಲಕ್ಷ್ಮೀಪುರ, ಲಕ್ಷ್ಮೀಪುರ ಕಾಲೊನಿ, ಸಿದ್ದನಹೊಸಹಳ್ಳಿ, ದೊಂಬರಹಳ್ಳಿ, ರಾಜೇಶ್ವರಿನಗರ, ಕದರನಹಳ್ಳಿ, ಕದರನಹಳ್ಳಿ ಕಾಲೊನಿ





ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶನ • ಖಾಸಗಿ ಕಂಪನಿಗಳು ಸಲ್ಲಿಸಿದ್ದ ರಿಟ್ ಅರ್ಜಿ

‘ಮಳೆ ನೀರು ಕಾಲುವೆ: ಸಮಿತಿ ರಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಮಳೆ ನೀರು ಕಾಲುವೆಗಳ ಸಮರ್ಪಕ ನಿರ್ವಹಣೆ ಮತ್ತು ಇವುಗಳ ಮೇಲ್ವಿಚಾರಣೆಗಾಗಿ ಬಿಬಿಎಂಪಿ ಮುಖ್ಯ ಆಯುಕ್ತರು ಸೇರಿದಂತೆ ಸಂಬಂಧಿಸಿದ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ’ ಎಂದು ಹೈಕೋರ್ಟ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿದೆ.

ಈ ಸಂಬಂಧ ‘ಡಿ-ಮಾರ್ಟ್’ ನಡೆಸುತ್ತಿರುವ ‘ಅವೆನ್ಯೂ ಸೂಪರ್ ಮಾರ್ಟ್ ಲಿಮಿಟೆಡ್ ಕಂಪನಿ’ ಸಲ್ಲಿಸಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ನಿರ್ದೇಶಿಸಿದೆ.

‘ಮಳೆ ನೀರು ಕಾಲುವೆ ನಿರ್ವಹಣೆಯ ಮೇಲ್ವಿಚಾರಣೆಗೆ ಸೂಕ್ತ ವ್ಯವಸ್ಥೆಯೊಂದರ ಅಗತ್ಯವಿದೆ. ಇದಕ್ಕಾಗಿ ಮೇಲ್ವಿಚಾರಣಾ ಸಮಿತಿ ರಚಿಸಬೇಕಿದೆ. ಈ ಸಮಿತಿಯಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ, ಕಂದಾಯ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳ ಪ್ರಧಾನ ಕಾರ್ಯದರ್ಶಿ ಹಾಗೂ ಸಂಬಂಧಿಸಿದ ಅಧಿಕಾರಿಗಳು ಇರಬೇಕು’ ಎಂದು ನ್ಯಾಯಪೀಠ ಸೂಚಿಸಿದ್ದು, ಈ ಕುರಿತಂತೆ ಅನುಪಾಲನಾ ವರದಿಯನ್ನು 2024ರ ಜನವರಿ 25ಕ್ಕೆ ಸಲ್ಲಿಸಿ ಎಂದು ನಿರ್ದೇಶಿಸಿದೆ.

‘ಬಿಬಿಎಂಪಿ ನಡೆಸಿದ ಜಲ ವಿಜ್ಞಾನದ (ಹೈಡ್ರೋಲಾಜಿಕಲ್ ಸರ್ವೆ) ಸಮೀಕ್ಷೆಯ ಆಧಾರದ ಮೇಲೆ ನಗರದಲ್ಲಿ ಯಾವುದೇ ಹೊಸ ಮಳೆನೀರು ಕಾಲುವೆ ನಿರ್ಮಿಸುವ ಅಗತ್ಯತೆ ಎದುರಾದಾಗ ರಾಜ್ಯ ಸರ್ಕಾರದ ಮೂಲಕ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಮತ್ತು ನಾಗರಿಕರ ಅನುಕೂಲಕ್ಕಾಗಿ ಮಳೆನೀರು ಕಾಲುವೆ ನಿರ್ಮಿಸುವ ಸಂದರ್ಭದಲ್ಲಿ ಈ ಸಮಿತಿಯ ಸಲಹೆ ಪಡೆಯಬಹುದಾಗಿದೆ’ ಎಂದು ನ್ಯಾಯಪೀಠ ಹೇಳಿದೆ.

ಮುಖ್ಯಾಂಶಗಳು

- ಅವೆನ್ಯೂ ಸೂಪರ್ ಮಾರ್ಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿ
- ಹದ್ದಿಗಿಡದ ಹಳ್ಳಕ್ಕೆ ಸೇರಿದ ರಾಜಕಾಲುವೆ ಒತ್ತುವರಿ ಆರೋಪ



ಆಕ್ಷೇಪಣೆ ಏನು?: ‘ರಾಜಕಾಲುವೆ ಮತ್ತು ಮಳೆನೀರು ಕಾಲುವೆಗಳ ಒತ್ತುವರಿ ಹಿನ್ನೆಲೆಯಲ್ಲಿ ನಮ್ಮ ಕಟ್ಟಡದ ನಕ್ಷೆ ಮಂಜೂರಾತಿ ರದ್ದುಪಡಿಸಲು ಬಿಬಿಎಂಪಿ ಶೋಕಾಸ್ ನೋಟಿಸ್ ಜಾರಿಗೊಳಿಸಿದೆ. ಅಂತೆಯೇ, ಭೂ ಸ್ವಾಧೀನಾನುಭವ ಪತ್ರ ಕೋರಿ ನಾವು ಸಲ್ಲಿಸಿದ್ದ ಅರ್ಜಿಯನ್ನು ಬಿಬಿಎಂಪಿ ಪರಿಗಣಿಸಿಲ್ಲ’ ಎಂಬುದು ಅರ್ಜಿದಾರರ ಆಕ್ಷೇಪ.

ಅರ್ಜಿದಾರರಿಗೆ ನೀಡಿದ್ದ ನೋಟಿಸ್ ರದ್ದು

ಅರ್ಜಿದಾರರಿಗೆ ನೀಡಿರುವ ನೋಟಿಸ್ ರದ್ದುಪಡಿಸಿರುವ ನ್ಯಾಯಪೀಠ, ‘ಅರ್ಜಿದಾರರಿಗೆ ನೀಡಲಾದ ನೋಟಿಸ್‌ಗಳು ಹದ್ದಿಗಿಡದ ಹಳ್ಳಕ್ಕೆ ಸೇರಿದ (ರಾಜಕಾಲುವೆ) ಯಾವು ಜಾಗವನ್ನು ಒತ್ತುವರಿ ಮಾಡಲಾಗಿದೆ ಎಂಬುದನ್ನು ಉಲ್ಲೇಖಿಸಿಲ್ಲ. ಕೇವಲ ರಾಜಕಾಲುವೆ ಜಾಗ ಅತಿಕ್ರಮಿಸಲಾಗಿದೆ ಎಂದಷ್ಟೇ ಉಲ್ಲೇಖಿಸಲಾಗಿದೆ. ಹಾಗಾಗಿ, ಮಳೆನೀರು ಕಾಲುವೆಯ ಜಾಗವನ್ನು ಅತಿಕ್ರಮಣವನ್ನು ಅಗತ್ಯ ದಾಖಲೆಗಳೊಂದಿಗೆ ಸಾಬೀತುಪಡಿಸುವಲ್ಲಿ ಬಿಬಿಎಂಪಿ ವಿಫಲವಾಗಿದೆ’ ಎಂದು ಅಭಿಪ್ರಾಯಪಟ್ಟಿದೆ.

‘ಈ ಪ್ರಕರಣದಲ್ಲಿ ಬಿಬಿಎಂಪಿ ಅರ್ಜಿದಾರರ ಮೇಲೆ ಸಳ್ಳು ಆರೋಪ ಹೊರಿಸಲು ಪ್ರಯತ್ನಿಸುತ್ತಿರುವಂತೆ ತೋರುತ್ತದೆ. ಹೀಗಾಗಿ, ಸ್ವಾಧೀನಾನುಭವ ಪತ್ರ ಮಂಜೂರಾತಿ ಕೋರಿ ಅರ್ಜಿದಾರರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಬೇಕು. ಒಂದೊಮ್ಮೆ ಕಟ್ಟಡ ನಿರ್ಮಾಣದಲ್ಲಿ ಯಾವುದೇ ನಿಯಮ ಉಲ್ಲಂಘನೆ ಆಗಿರುವುದು ಕಂಡು ಬಂದಲ್ಲಿ ಸ್ವಾಧೀನಾನುಭವ ಪತ್ರ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಬಿಬಿಎಂಪಿ ಹೊಂದಿರುತ್ತದೆ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಬಿಬಿಎಂಪಿ ವಾದ ಏನಿತ್ತು?

‘ಅರ್ಜಿದಾರರು ಹದ್ದಿನ ಹಳ್ಳದ 9 ಗುಂಟೆ ಜಾಗ ಒತ್ತುವರಿ ಮಾಡಿ, ಕಟ್ಟಡ ನಿರ್ಮಿಸಿದ್ದಾರೆ. ಇದರಿಂದ ಮಳೆ ನೀರು ಹರಿಯುವಿಕೆಗೆ ಅಡಚಣೆಯಾಗಿದೆ’ ಎಂದು ಬಿಬಿಎಂಪಿ ಪರ ವಕೀಲರು ವಾದ ಮಂಡಿಸಿದ್ದರು.

ಇದನ್ನು ಅಲ್ಲಗಳೆದಿದ್ದ ಅರ್ಜಿದಾರರ ಪರ ವಕೀಲರು, ‘ಪರಿಷ್ಕೃತ ಮಾಸ್ಟರ್ ಪ್ಲಾನ್‌ನಲ್ಲಿ ವಿವಾದಿತ ಜಾಗವನ್ನು ರಾಜಕಾಲುವೆ ಎಂಬುದಾಗಿ ತೋರಿಸಿಲ್ಲ. ಹೀಗಾಗಿ, ನಮ್ಮ ಕಕ್ಷಿದಾರರ ವಿರುದ್ಧ ಬಿಬಿಎಂಪಿ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದ್ದರು.

ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, ‘ನೀರಿನ ಹರಿವಿಗೆ ಅಡಚಣೆಗೆ ನಿಜವಾದ ಕಾರಣ ಏನೆಂಬುದನ್ನು ತಿಳಿಯಲು ಬಿಬಿಎಂಪಿ ಪಯತ್ನಿಸಬೇಕು. ಇದಕ್ಕಾಗಿಯೇ ಕಾಲುವೆಗಳ ಸಾಮರ್ಥ್ಯ, ಕಾಲುವೆಯಲ್ಲಿನ ಹೂಳು, ರಾಜಕಾಲುವೆಗೆ ಸಂಬಂಧಿಸಿದ ಹೈಡ್ರೋಲಾಜಿಕ್ ಸಮೀಕ್ಷೆ ಸೇರಿದಂತೆ ಇನ್ನಿತರ ಕಾರಣಗಳನ್ನು ಶೋಧಿಸಬೇಕು. ವಿವಾದಿತ ಜಾಗದ ಸುತ್ತಮುತ್ತಲಿನ ಎಲ್ಲಾ ಮಳೆನೀರು ಕಾಲುವೆಗಳ ಸಮೀಕ್ಷೆ ನಡೆಸಬೇಕು’ ಎಂದು ನಿರ್ದೇಶಿಸಿದೆ.

ಸುದ್ದಿ 2 ನಿಮಿಷ

ಮೆಟ್ರೊದಲ್ಲಿ ಕಿರುಕುಳ: ವಿಚಾರಣೆ

ಬೆಂಗಳೂರು: ಮೆಟ್ರೊ ರೈಲಿನಲ್ಲಿ ಯುವತಿಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪದಡಿ ಲೋಕೇಶ್ ಎಂಬುವವರನ್ನು ವಶಕ್ಕೆ ಪಡೆದಿರುವ ಉಪ್ಪಾರಪೇಟೆ ಠಾಣೆ ಪೊಲೀಸರು, ವಿಚಾರಣೆ ನಡೆಸಿ ಬಿಟ್ಟು ಕಳುಹಿಸಿದ್ದಾರೆ.

‘ನೆಲಮಂಗಲದ ನಿವಾಸಿ ಲೋಕೇಶ್, ಅಪರಾಧ ಹಿನ್ನೆಲೆಯುಳ್ಳವ (ಎಂಒಬಿ). ಮೊಬೈಲ್ ಕಳ್ಳತನ ಪ್ರಕರಣದಲ್ಲಿ ಕಳೆದ ವರ್ಷ ಜೈಲು ಸೇರಿ, ಜಾಮೀನು ಮೇಲೆ ಹೊರಗೆ ಬಂದಿದ್ದ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಮೆಟ್ರೊ ರೈಲಿನಲ್ಲಿ ರಾಜಾಜಿನಗರದಿಂದ ಎಂ.ಜಿ. ರಸ್ತೆ ನಿಲ್ದಾಣಕ್ಕೆ 22 ವರ್ಷದ ಯುವತಿಯೊಬ್ಬರು ಗುರುವಾರ (ಡಿ. 7) ಬೆಳಿಗ್ಗೆ ಪ್ರಯಾಣಿಸುತ್ತಿದ್ದರು. ಇದೇ ರೈಲಿನಲ್ಲಿ ಆರೋಪಿ ಲೋಕೇಶ್ ಸಹ ಇದ್ದ. ಮೈ ಕೈ ಮುಟ್ಟಿ ಕಿರುಕುಳ ನೀಡಿದ್ದಾನೆಂದು ಆರೋಪಿಸಿದ್ದ ಯುವತಿ, ಲೋಕೇಶ್‌ನನ್ನು ಹಿಡಿದುಕೊಳ್ಳುವಂತೆ ಕೂಗಿದ್ದರು. ಮೆಜೆಸ್ಟಿಕ್ ನಿಲ್ದಾಣದಲ್ಲಿ ಇಳಿದು ಓಡಲಾರಂಭಿಸಿದ್ದ ಲೋಕೇಶ್‌ನನ್ನು ಭದ್ರತಾ ಸಿಬ್ಬಂದಿ ಬೆನ್ನಟ್ಟಿ ಹಿಡಿದಿದ್ದರು. ನಂತರ, ಸ್ಥಳಕ್ಕೆ ಹೋದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಲೋಕೇಶ್‌ನನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು’ ಎಂದರು.

ದಾಖಲಾಗದ ದೂರು: ‘ಮೆಟ್ರೊ ರೈಲಿನಲ್ಲಿ ನಡೆದಿರುವ ಲೈಂಗಿಕ ಕಿರುಕುಳ ಸಂಬಂಧ ಯುವತಿ ಅಥವಾ ಬಿಎಂಆರ್‌ಸಿಎಲ್ ದೂರು ನೀಡಿಲ್ಲ. ಜೊತೆಗೆ, ಲೈಂಗಿಕ ಕಿರುಕುಳಕ್ಕೆ ಸಂಬಂಧಪಟ್ಟಂತೆ ಪುರಾವೆಗಳು ಲಭ್ಯವಾಗಿಲ್ಲ. ಹೀಗಾಗಿ, ಸದ್ಯಕ್ಕೆ ಯಾವುದೇ ದೂರು ದಾಖಲಿಸಿಕೊಂಡಿಲ್ಲ’ ಎಂದು ಪೊಲೀಸ್ ಅಧಿಕಾರಿ ಹೇಳಿದರು. ‘ಲೋಕೇಶ್‌ನನ್ನು ವಿಚಾರಣೆ ನಡೆಸಿದಾಗ, ಮೊಬೈಲ್ ಕಳ್ಳನೆಂಬುದು ತಿಳಿಯಿತು.

ಯುವತಿ ಬಳಿ ಮೊಬೈಲ್ ಕಳ್ಳತನ ಮಾಡಲು ಈತ ಯತ್ನಿಸಿದ್ದನೆಂದು ಗೊತ್ತಾಗಿದೆ. ಹೀಗಾಗಿ, ವಿಚಾರಣೆ ನಡೆಸಿ ನೋಟಿಸ್ ಕೊಟ್ಟು ಆರೋಪಿಯನ್ನು ಬಿಟ್ಟು ಕಳುಹಿಸಲಾಗಿದೆ’ ಎಂದಿದ್ದಾರೆ.



ದಾಬಸ್‌ಪೇಟೆ: ರಾಜಕಾಲುವೆ ಸರ್ವೆ ಮಾಡಿದ ಅಧಿಕಾರಿಗಳು

ದಾಬಸ್ ಪೇಟೆ: ರಾಜಕಾಲುವೆ ಒತ್ತುವರಿ ತೆರವು ಮಾಡುವಂತೆ ಸರ್ಕಾರಕ್ಕೆ ಹೈಕೋರ್ಟ್ ಆದೇಶ ನೀಡಿದ 6 ತಿಂಗಳ ನಂತರ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಧಿಕಾರಿಗಳು ಶುಕ್ರವಾರ ಸರ್ವೆ ನಡೆಸಿದರು.

ಪಟ್ಟಣದ ಅಗಳಕುಪ್ಪೆ ರಸ್ತೆಗೆ ಹೊಂದಿಕೊಂಡಂತೆ ಇರುವ ರಾಜಕಾಲುವೆಯನ್ನು ಪ್ರಭಾವಿಗಳು ಕಬಳಿಸಿ ಕಟ್ಟಡ ನಿರ್ಮಾಣ ಮಾಡಿಕೊಂಡಿದ್ದರು. ರಾಜಕಾಲುವೆ ಒತ್ತುವರಿಯಾಗಿರುವುದು ಬೆಳಕಿಗೆ ಬಂದು ಹಲವು ತಿಂಗಳು ಕಳೆದರೂ ಅಧಿಕಾರಿಗಳು ಯಾವುದೇ ಕ್ರಮ ವಹಿಸಿರಲಿಲ್ಲ. ಈ ಬಗ್ಗೆ ಕುಮಾರಯ್ಯ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಸರ್ವೆ ನಂಬರ್ 4ರಲ್ಲಿ ‘ಬ’ ಕರಾಬು ಸೇರಿದಂತೆ ಅಕ್ರಮವಾಗಿ ರಾಜಕಾಲುವೆ ಜಾಗವನ್ನೂ ಸೈಟ್‌ಗಳಾಗಿ ವಿಂಗಡಿಸಿ ಮಾರಾಟ ಮಾಡಲಾಗಿದೆ. ಒತ್ತುವರಿ ಸಾಬೀತಾಗಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ ಎಂದು ಅರ್ಜಿಯಲ್ಲಿ ತಿಳಿಸಿದ್ದರು.

ಇದರ ವಿಚಾರಣೆ ನಡೆಸಿದ ಹೈಕೋರ್ಟ್ ಒತ್ತುವರಿ ತೆರವುಗೊಳಿಸುವಂತೆ ಜೂನ್ 14ರಂದು ಆದೇಶ ಹೊರಡಿಸಿತ್ತು. ಇದೀಗ ನೆಲಮಂಗಲ ತಹಶೀಲ್ದಾರ್ ಕೆ.ಅರುಂಧತಿ, ತಾಲ್ಲೂಕು ಪಂಚಾಯಿತಿ ಇಒ ಎಸ್. ಮಧು, ಸರ್ವೆ ಇಲಾಖೆಯ ಎಡಿಎಲ್‌ಆರ್ ನಯನಾ, ಲೋಕೋಪಯೋಗಿ ಇಲಾಖೆಯ ನಟರಾಜು, ಉಪ ತಹಶೀಲ್ದಾರ್ ಬಿ.ಸಿ. ಶಶಿಧರ್, ದಾಬಸ್ ಪೇಟೆ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ರಾಜು, ಪಿಡಿಒ ರವಿಶಂಕರ್, ರಾಜಸ್ವ ನೀರಿಕ್ಷಕ ಎಚ್.ಎಂ.ಕುಮಾರಸ್ವಾಮಿ ನೇತೃತ್ವದಲ್ಲಿ ಸರ್ವೆ ನಡೆಸಲಾಯಿತು.

ಪೆಟ್ರೋಲ್ ಬಂಕ್‌ನಲ್ಲಿ ದುಷ್ಕರ್ಮಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕನ ಸೋಗಿನಲ್ಲಿ ಪೆಟ್ರೋಲ್ ಬಂಕ್‌ಗೆ ಬಂದಿದ್ದ ದುಷ್ಕರ್ಮಿಯೊಬ್ಬ ಸಿಬ್ಬಂದಿಯನ್ನು ಬೆದರಿಸಿ ಸುಲಿಗೆ ಮಾಡಿದ್ದು, ಈ ಸಂಬಂಧ ಮೈಕೊ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಬನ್ನೇರುಘಟ್ಟ ರಸ್ತೆಯ ಪೆಟ್ರೋಲ್ ಬಂಕ್‌ನಲ್ಲಿ ಗುರುವಾರ ರಾತ್ರಿ ಈ ಘಟನೆ ನಡೆದಿದೆ. ಬಂಕ್ ಸಿಬ್ಬಂದಿ ಸ್ವರಾಜ್ ದೂರು ನೀಡಿದ್ದು, ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದ್ವಿಚಕ್ರ ವಾಹನದಲ್ಲಿದ್ದ ಆರೋಪಿ, ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸಿಕೊಂಡಿದ್ದ. ಹಣ ನೀಡುವಂತೆ ಸಿಬ್ಬಂದಿ ಸ್ವರಾಜ್ ಕೇಳಿದ್ದರು. ಸಿಬ್ಬಂದಿಗೆ ಜೀವ ಬೆದರಿಕೆಯೊಡ್ಡಿದ್ದ ಆರೋಪಿ, ಅವರ ಬಳಿ ₹ 4,500 ಕಸಿದುಕೊಂಡಿದ್ದ. ಸಿಬ್ಬಂದಿ ಕೂಗಾಡುತ್ತಿದ್ದಂತೆ ಆರೋಪಿ ಸ್ಥಳದಿಂದ ಪರಾರಿಯಾಗಿದ್ದಾನೆ’ ಎಂದು ತಿಳಿಸಿದರು.

ಮಹಿಳೆಯರ ಮೇಲೆ ಹಲ್ಲೆ: ‘ರೀಲ್ಸ್’ ದಾಸ ಸೆರೆ

ರಿಯಲ್ ಎಸ್ಟೇಟ್ ಏಜೆಂಟರು, ರೌಡಿಗಳ ಜೊತೆ ನಂಟು • ಸಹಚರರ ಕಳುಹಿಸಿ ಜನರಿಗೆ ಬೆದರಿಕೆ

ಪ್ರಜಾವಾಣಿ ವಾರ್ತೆ



ದಾಸ

ಬೆಂಗಳೂರು: ಆಸ್ತಿ ವ್ಯಾಜ್ಯದಲ್ಲಿ ಮಧ್ಯ ಪ್ರವೇಶಿಸಿ ಮಹಿಳೆಯರಿಬ್ಬರ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಮಂಜುನಾಥ್ ಅಲಿಯಾಸ್ ದಾಸನನ್ನು ಯಲಹಂಕ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ದಾಸ, ಇನ್‌ಸ್ಟಾಗ್ರಾಮ್ ಹಾಗೂ ಫೇಸ್‌ಬುಕ್ ಸಾಮಾಜಿಕ ಮಾಧ್ಯಮಗಳಲ್ಲಿ ರೀಲ್ಸ್ ವಿಡಿಯೊ ಮಾಡುತ್ತಿದ್ದ. ಈತನ ವಿಡಿಯೊವನ್ನು ಹಲವರು ಲೈಕ್ ಮಾಡುತ್ತಿದ್ದರು. ಅಲ್ಲಾಳಸಂದ್ರದ ನಿವಾಸಿಯಾಗಿರುವ 45 ವರ್ಷದ ಮಹಿಳೆ ನೀಡಿರುವ ದೂರು ಆಧರಿಸಿ ದಾಸನನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಕೊಲೆ ಆರೋಪಿಗೆ ಜಾಮೀನು ಕೊಡಿಸುವುದಾಗಿ ಹೇಳಿ ಹಣ ವಸೂಲಿ ಮಾಡಿದ್ದ ಆರೋಪದಡಿ ದಾಸ ವಿರುದ್ಧ ಬಾಗಲಗುಂಟೆ ಠಾಣೆಯಲ್ಲಿ 2019ರಲ್ಲಿ ಪ್ರಕರಣ ದಾಖಲಾಗಿತ್ತು. ಮೈ ಮೇಲೆ ಹೆಚ್ಚಿನ ಪ್ರಮಾಣದಲ್ಲಿ ಚಿನ್ನಾಭರಣ ಧರಿಸುತ್ತಿದ್ದ ದಾಸ, ಉದ್ದನೆಯ ತಲೆಕೂದಲು ಬಿಟ್ಟಿದ್ದ. ಇದೇ ವೇಷದಲ್ಲಿ ವಿಡಿಯೊ ಮಾಡುತ್ತಿದ್ದ. ಈತನ ಹೆಸರಿನಲ್ಲಿ ಅಭಿಮಾನಿಗಳ ಸಂಘವೂ ಇದೆ’ ಎಂದು ಪೊಲೀಸರು ತಿಳಿಸಿದರು.

> ಅಪರಾಧ ಚಟುವಟಿಕೆಗಳಲ್ಲಿ ದಾಸ ಭಾಗಿಯಾಗುತ್ತಿದ್ದನೆಂಬ ಮಾಹಿತಿ ಇದೆ. ಈತನ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ಪರಿಶೀಲನೆ ನಡೆಸಲಾಗುವುದು
>
> **ಬಿ.ಎಂ. ಲಕ್ಷ್ಮಿಪ್ರಸಾದ್,** ಈಶಾನ್ಯ ವಿಭಾಗದ ಡಿಸಿಪಿ

‘ಯಲಹಂಕ ಹಾಗೂ ಸುತ್ತಮುತ್ತಲಿನ ರಿಯಲ್ ಎಸ್ಟೇಟ್ ಉದ್ಯಮಿಗಳು, ಏಜೆಂಟರು ಹಾಗೂ ರೌಡಿಗಳ ಜೊತೆ ದಾಸ ಒಡನಾಟ ಹೊಂದಿದ್ದ. ಈತ ಹಾಗೂ ಸಹಚರರು, ಆಸ್ತಿ ವ್ಯಾಜ್ಯಗಳಲ್ಲಿ ಮಧ್ಯ ಪ್ರವೇಶಿಸಿ ಅಮಾಯಕರಿಗೆ ಜೀವ ಬೆದರಿಕೆಯೊಡುತ್ತಿದ್ದರು. ಸ್ಥಳೀಯ ರಾಜಕಾರಣಿಗಳ ಜೊತೆಯೂ ದಾಸ ಗುರುತಿಸಿಕೊಂಡಿದ್ದ’ ಎಂದು ಹೇಳಿದರು.

ನಿವೇಶನ ಗೋಡೆ ಕೆಡವಿ ಜಾತಿ ನಿಂದನೆ: ‘ದೂರುದಾರ ಮಹಿಳೆಯ ತಾಯಿಗೆ ನ್ಯಾಯಾಲಯದ ಡಿಕ್ರಿ ಮೂಲಕ ನ್ಯಾಯಾಂಗ ಬಡಾವಣೆಯಲ್ಲಿ ನಿವೇಶನ ಲಭ್ಯವಾಗಿದೆ. ಅಕ್ಟೋಬರ್ 19ರಂದು ಬೆಳಿಗ್ಗೆ ನಿವೇಶನಕ್ಕೆ ನುಗ್ಗಿದ್ದ ಆರೋಪಿಗಳು, ಗೋಡೆ ಕೆಡವಿದ್ದರು. ಇದನ್ನು ಪ್ರಶ್ನಿಸಿದ್ದ ದೂರುದಾರ ಮಹಿಳೆ ಹಾಗೂ ಅವರ ತಾಯಿಗೆ ಬೈದಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಮಹಿಳೆಯರನ್ನು ಎಳೆದಾಡಿ ಬಟ್ಟೆ ಹರಿದಿದ್ದ ಆರೋಪಿಗಳು, ದೊಣ್ಣೆ ಹಾಗೂ ಕಲ್ಲುಗಳಿಂದ ಹಲ್ಲೆ ಮಾಡಿದ್ದರು. ಜಾತಿ ನಿಂದನೆ ಮಾಡಿ, ಜೀವ ಸಹಿತ ಬಿಡುವುದಿಲ್ಲವೆಂದು ಬೆದರಿಸಿದ್ದರು. ಹಲ್ಲೆಯಿಂದ ಗಾಯಗೊಂಡಿದ್ದ ಮಹಿಳೆಯರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡು, ನಂತರ ಠಾಣೆಗೆ ಬಂದು ದೂರು ನೀಡಿದ್ದಾರೆ’ ಎಂದರು.

ಕೃತ್ಯದಲ್ಲಿ ದಾಸ ಹುಡುಗರು ಭಾಗಿ: ‘ನ್ಯಾಯಾಂಗ ಬಡಾವಣೆಯ ನಿವಾಸಿ ರಾಮಮೂರ್ತಿ, ನಾಗರಾಜು, ಗೋಪಾಲ ಹಾಗೂ ದಾಸನ ಹುಡುಗರು ನಿವೇಶನಕ್ಕೆ ನುಗ್ಗಿ ಗಲಾಟೆ ಮಾಡಿದ್ದರು. ಅವರೆಲ್ಲರ ವಿರುದ್ಧ ಎಸ್.ಸಿ-ಎಸ್.ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ಸಹಚರರನ್ನು ಕಳುಹಿಸಿ ಬೆದರಿಕೆ ಹಾಕಿಸಿದ್ದ ಆರೋಪದಡಿ ಇದೀಗ ದಾಸನನ್ನು ಬಂಧಿಸಲಾಗಿದೆ. ಉಳಿದ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ದಾಸ, ತನ್ನ ಸಹಚರರನ್ನು ಬಳಸಿಕೊಂಡು ಅಮಾಯಕರನ್ನು ಬೆದರಿಸುತ್ತಿದ್ದ ಮಾಹಿತಿ ಇದೆ. ಆರೋಪಿಯಿಂದ ಯಾರಾದರೂ ತೊಂದರೆ ಅನುಭವಿಸಿದ್ದರೆ ಠಾಣೆಗೆ ದೂರು ನೀಡಬಹುದು’ ಎಂದರು.

ರಾಜಸ್ಥಾನದಿಂದ ಅಫೀಮು ತಂದು ಮಾರಾಟ: ಬಂಧನ

ಬೆಂಗಳೂರು: ರಾಜಸ್ಥಾನದಿಂದ ಅಫೀಮು ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಂಪಂಗಿ ರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘37 ವರ್ಷದ ಆರೋಪಿ ಹಲವು ತಿಂಗಳಿನಿಂದ ಅಫೀಮು ಮಾರುತ್ತಿದ್ದ. ಈತನನ್ನು ಬಂಧಿಸಿ, ₹2.80 ಲಕ್ಷ ಮೌಲ್ಯದ 1,850 ಗ್ರಾಂ ಅಫೀಮು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಿಷನ್ ರಸ್ತೆಯ ಸಿ.ಕೆ.ಸಿ ಉದ್ಯಾನ ಬಳಿ ಆರೋಪಿ ಓಡಾಡುತ್ತಿದ್ದ. ಪರಿಚಯಸ್ಥ ಗ್ರಾಹಕರಿಗೆ ಅಫೀಮು ಪೊಟ್ಟಣಗಳನ್ನು ನೀಡುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ವಶಕ್ಕೆ ಪಡೆಯಲಾಯಿತು. ಆತನ ಬಳಿಯ ಚೀಲದಲ್ಲಿ ಅಫೀಮು ಪೊಟ್ಟಣ ಹಾಗೂ ತೂಕದ ಯಂತ್ರವಿತ್ತು’ ಎಂದು ತಿಳಿಸಿದರು.

‘ಆರೋಪಿ ಜೊತೆ ಮತ್ತಷ್ಟು ಮಂದಿ ಭಾಗಿಯಾಗಿರುವ ಮಾಹಿತಿ ಇದೆ. ಹೀಗಾಗಿ, ಆರೋಪಿ ಹೆಸರು ಗೌಪ್ಯವಾಗಿರಿಸಲಾಗಿದೆ’ ಎಂದು ಹೇಳಿದರು.



ಬೆಸ್ಕಾಂ ಜಾಥಾ ವಿದ್ಯುತ್ ಅಪಘಾತವನ್ನು ತಡೆಗಟ್ಟಲು, ವಿದ್ಯುತ್ ಸುರಕ್ಷತಾ ನಿಯಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಬೆಸ್ಕಾಂನ ಬೆಂಗಳೂರು ನಗರ ಉತ್ತರ ವಲಯದಲ್ಲಿ (ಬಿಎಂಎಝುಡ್) ಜನಜಾಗೃತಿ ಜಾಥಾವನ್ನು ಶುಕ್ರವಾರ ನಡೆಸಲಾಯಿತು

ಎಟಿಎಂ ಕಳ್ಳತನ ಯತ್ನ: ಕರಕಲಾದ ₹4.60 ಲಕ್ಷ ನೋಟುಗಳು

ಪ್ರಜಾವಾಣಿ ವಾರ್ತೆ

ನೆಲಮಂಗಲ: ನಗರಸಭೆ ವ್ಯಾಪ್ತಿಯ ಅರಿಶಿನಕುಂಟೆಯ ಎಟಿಎಂ ಕೇಂದ್ರವೊಂದರಲ್ಲಿ ಕಳ್ಳರು ಹಣ ಕದಿಯಲು ಗ್ಯಾಸ್ ಕಟರ್‌ನಿಂದ ಯಂತ್ರ ಕೊರೆಯುವ ವೇಳೆ ಬೆಂಕಿ ಹೊತ್ತಿಕೊಂಡು ನೋಟುಗಳು ಸುಟ್ಟು ಕರಕಲಾಗಿವೆ.

ಗುರುವಾರ ರಾತ್ರಿ ನಡೆದಿರುವ ಕಳ್ಳತನ ಯತ್ನ ಸಂಬಂಧ ನೆಲಮಂಗಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಅರಿಶಿನಕುಂಟೆಯ ಬ್ಯಾಂಕ್‌ವೊಂದರ ಎಟಿಎಂ ಕೇಂದ್ರಕ್ಕೆ ದುಷ್ಕರ್ಮಿಗಳು ನುಗ್ಗಿದ್ದರು. ಗ್ಯಾಸ್ ಕಟರ್ ಬಳಸಿ ಎಟಿಎಂ ಯಂತ್ರವನ್ನು ತುಂಡರಿಸಿ ಹಣ ದೋಚುವುದು ಅವರ ಉದ್ದೇಶವಾಗಿತ್ತು. ಆದರೆ, ಯಂತ್ರದ ಮೇಲ್ಭಾಗಕ್ಕೆ ಗ್ಯಾಸ್ ಕಟರ್ ತಾಗುತ್ತಿದ್ದಂತೆ ಸೈರನ್ ಮೊಳಗಿತ್ತು’ ಎಂದು ಪೊಲೀಸರು ಹೇಳಿದರು.

‘ಬ್ಯಾಂಕ್‌ನ ಕಚೇರಿಗೆ ಕಳ್ಳತನದ ಬಗ್ಗೆ ಎಚ್ಚರಿಕೆ ಸಂದೇಶ ರವಾನೆಯಾಗಿತ್ತು. ಎಚ್ಚೆತ್ತ ಬ್ಯಾಂಕ್ ನೌಕರು, ಘಟಕಕ್ಕೆ ಬಂದಿದ್ದರು. ಅಷ್ಟರಲ್ಲೇ ದುಷ್ಕರ್ಮಿಗಳು ಸ್ಥಳದಿಂದ ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

‘ದುಷ್ಕರ್ಮಿಗಳು ಗ್ಯಾಸ್ ಕಟರ್‌ನಿಂದ ಯಂತ್ರ ತುಂಡರಿಸುವ ವೇಳೆ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ನಗದು ಪೆಟ್ಟಿಗೆಗೆ ಬೆಂಕಿ ತಾಗಿತ್ತು. ಅದರಲ್ಲಿದ್ದ ₹ 500 ಹಾಗೂ ₹ 100 ಮುಖಬೆಲೆಯ ₹ 4.60 ಲಕ್ಷ ನೋಟುಗಳು ಸುಟ್ಟು ಕರಕಲಾಗಿವೆ’ ಎಂದರು.



ಸುಟ್ಟು ಕರಕಲಾಗಿರುವ ನೋಟುಗಳು

‘ಕಳ್ಳತನ ಯತ್ನ ಸಂಬಂಧ ಬ್ಯಾಂಕ್ ಅಧಿಕಾರಿಗಳು ದೂರು ನೀಡಿದ್ದಾರೆ. ಹಲವು ದಿನಗಳಿಂದ ಸಂಚು ರೂಪಿಸಿ ದುಷ್ಕರ್ಮಿಗಳು ಕೃತ್ಯ ಎಸಗಿರುವ ಮಾಹಿತಿ ಇದೆ. ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಹದೇವಪುರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ

ಅತ್ಯಾಚಾರ: ಆರೋಪಿ ದುಬೈನಲ್ಲಿ ಸೆರೆ

ಪ್ರಜಾವಾಣಿ ವಾರ್ತೆ



ಮಿದುನ್ ಚಂದ್ರನ್

ಬೆಂಗಳೂರು: ಸಹೋದ್ಯೋಗಿ ಯುವತಿ ಮೇಲೆ ಅತ್ಯಾಚಾರ ಎಸಗಿ ಪರಾರಿಯಾಗಿದ್ದ ಆರೋಪಿ ಮಿದುನ್ ವಿ. ಚಂದ್ರನ್ ಎಂಬಾತನನ್ನು ದುಬೈನಲ್ಲಿ ಬಂಧಿಸಿ ನಗರಕ್ಕೆ ಶುಕ್ರವಾರ ಕರೆತರಲಾಗಿದೆ.

‘ಮಹದೇವಪುರ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಪ್ರಕರಣ ತನಿಖೆ ಕೈಗೊಂಡಿದ್ದ ಪೊಲೀಸರು, ಖಚಿತ ಮಾಹಿತಿ ಮೇರೆಗೆ ದುಬೈಗೆ ಹೋಗಿ ಮಿದುನ್ ಚಂದ್ರನ್‌ನನ್ನು ಸೆರೆ ಹಿಡಿದಿದ್ದಾರೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಕಂಪನಿಯೊಂದರ ಉದ್ಯೋಗಿ 30 ವರ್ಷದ ಯುವತಿಯನ್ನು ಪರಿಚಯ ಮಾಡಿಕೊಂಡಿದ್ದ ಮಿದುನ್, ಮದುವೆಯಾಗುವುದಾಗಿ ಹೇಳಿ ಹಲವು ಬಾರಿ ಅತ್ಯಾಚಾರ ಎಸಗಿದ್ದ. ಹಣವನ್ನೂ ಪಡೆದುಕೊಂಡಿದ್ದ. ಕೆಲ ತಿಂಗಳ ನಂತರ ಮದುವೆಯಾಗಲು ನಿರಾಕರಿಸಿದ್ದ. ಮಧ್ಯ ಪ್ರವೇಶಿಸಿದ್ದ ಆರೋಪಿ ತಾಯಿ, ಮದುವೆ ಮಾಡಿಸುವುದಾಗಿ ಹೇಳಿದ್ದರು. ನಂತರ, ತಾಯಿ-ಮಗ ಇಬ್ಬರೂ ಯುವತಿಗೆ ಕಿರುಕುಳ ನೀಡಲಾರಂಭಿಸಿದ್ದರು. ನೊಂದ ಯುವತಿ, ದೂರು ನೀಡಿದ್ದರು. ಅತ್ಯಾಚಾರ, ನಂಬಿಕೆ ದ್ರೋಹ ಹಾಗೂ ಹಲ್ಲೆ ಆರೋಪದಡಿ ಮಿದುನ್ ಹಾಗೂ ತಾಯಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು’ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

‘2020ರಲ್ಲಿಯೇ ಮಿದುನ್‌ನನ್ನು ಬಂಧಿಸಲಾಗಿತ್ತು. ಪ್ರಕರಣದಲ್ಲಿ ಜಾಮೀನು ಪಡೆದಿದ್ದ ಈತ, ದೇಶ ಬಿಟ್ಟು ದುಬೈಗೆ ಹೋಗಿದ್ದ. ಅಲ್ಲಿಯ ಕಂಪನಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ತನ್ನ ಸುಳಿವು ಸಿಗದಂತೆ ಪದೇ ಪದೇ ವಾಸಸ್ಥಳ ಬದಲಿಸುತ್ತಿದ್ದ.’

‘ಪ್ರಕರಣದ ತನಿಖೆ ಪೂರ್ಣಗೊಳಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಷರತ್ತು ಬದ್ಧ ಜಾಮೀನು ಪಡೆದಿದ್ದ ಆರೋಪಿ, ಒಂದು ಬಾರಿಯೂ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗಿರಲಿಲ್ಲ. ಆರೋಪಿ ದುಬೈನಲ್ಲಿರುವ ಬಗ್ಗೆ ಮಾಹಿತಿ ತಿಳಿದಿದ್ದ ಸಂತ್ರಸ್ತ ಯುವತಿ, ನ್ಯಾಯಾಲಯದ ಗಮನಕ್ಕೆ ತಂದಿದ್ದರು. ನ್ಯಾಯಾಧೀಶರು, ಆರೋಪಿ ಬಂಧನಕ್ಕೆ ಜಾಮೀನು ರಹಿತ ವಾರಂಟ್ ಹೊರಡಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

ಸಿಬಿಐ, ಇಂಟರ್‌ಪೋಲ್ ಸಹಾಯ: ‘ಆರೋಪಿ ಬಂಧನಕ್ಕೆ ಕಾರ್ಯಾಚರಣೆ ಆರಂಭಿಸಿದ್ದ ಪೊಲೀಸರು, ಸಿಬಿಐ ಅಧಿಕಾರಿಗಳ ಸಹಾಯದಿಂದ ರೆಡ್ ಕಾರ್ನರ್ ನೋಟಿಸ್ ಹೊರಡಿಸಿದ್ದರು. ಇಂಟರ್‌ಪೋಲ್ ಪೊಲೀಸರಿಗೆ ಮಾಹಿತಿ ರವಾನಿಸಿದ್ದರು’ ಎಂದು ತಿಳಿಸಿದರು.

ವಶಕ್ಕೆ ಪಡೆದಿದ್ದ ದುಬೈ ಪೊಲೀಸರು: ‘ಆರೋಪಿ ಮಿದುನ್ ದಾಖಲೆ ನವೀಕರಣಕ್ಕೆಂದು ದುಬೈನಲ್ಲಿರುವ ಕಚೇರಿಯೊಂದಕ್ಕೆ ಹೋಗಿದ್ದ. ರೆಡ್ ಕಾರ್ನರ್ ನೋಟಿಸ್ ಇರುವುದನ್ನು ಗಮನಿಸಿದ್ದ ಅಲ್ಲಿಯ ಪೊಲೀಸರು, ಮಿದುನ್‌ನನ್ನು ವಶಕ್ಕೆ ಪಡೆದಿದ್ದರು. ಈ ಬಗ್ಗೆ ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

‘ಡಿಸಿಪಿ ಸಾಹಿಲ್ ಬಾಗ್ಲಾ, ಇನ್‌ಸ್ಪೆಕ್ಟರ್ ಪ್ರವೀಣ್ ಬಾಬು ಹಾಗೂ ನಹೀಂ ನೇತೃತ್ವದ ತಂಡ ಇತ್ತೀಚೆಗೆ ದುಬೈಗೆ ಹೋಗಿತ್ತು. ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತರುವಲ್ಲಿ ಯಶಸ್ವಿಯಾಗಿದೆ’ ಎಂದು ತಿಳಿಸಿದರು.

ಉರುಳಿಬಿದ್ದ ಮೊಬೈಲ್ ಟವರ್ 11 ಮಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೇ ಕಟ್ಟಡದ ತೆರವು ಕಾರ್ಯಾಚರಣೆ ವೇಳೆ ದೊಡ್ಡ ಗಾತ್ರದ ಮೊಬೈಲ್ ಟವರ್ ಉರುಳಿಬಿದ್ದಿದ್ದು, ಅಕ್ಕಪಕ್ಕದ ಮನೆಗಳಲ್ಲಿ ಸಿಲುಕಿದ್ದ 11 ಮಂದಿಯನ್ನು ಸ್ಥಳೀಯರು ರಕ್ಷಿಸಿದ್ದಾರೆ.

ಲಗ್ಗೆರೆ ಬಳಿಯ ಪಾರ್ವತಿನಗರದಲ್ಲಿ ಶುಕ್ರವಾರ ಈ ಅವಘಡ ಸಂಭವಿಸಿದೆ. ಸ್ಥಳೀಯರ ಸಮಯಪ್ರಜ್ಞೆಯಿಂದ ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಉಂಟಾಗಿಲ್ಲ.

‘ಶಿಥಿಲಗೊಂಡಿದ್ದ ಹಳೇ ಕಟ್ಟಡವನ್ನು ತೆರವುಗೊಳಿಸಿ ಜೆಸಿಬಿ ಯಂತ್ರದ ಸಹಾಯದಿಂದ ಅವಶೇಷಗಳನ್ನು ಸಾಗಿಸಲಾಗುತ್ತಿತ್ತು. ಪಕ್ಕದ ಕಟ್ಟಡದ ಚಾವಣಿಯಲ್ಲಿ ಮೊಬೈಲ್ ಟವರ್ ಇತ್ತು. ಜೆಸಿಬಿ ಯಂತ್ರದ ಬಕೆಟ್ ಟವರ್‌ಗೆ ತಾಗಿತ್ತು. ದಿಢೀರ್ ಮೊಬೈಲ್ ಟವರ್ ಉರುಳಿಬಿದ್ದಿತ್ತು’ ಎಂದು ಸ್ಥಳೀಯರು ಹೇಳಿದರು.

‘ಟವರ್‌ನ ಕಬ್ಬಿಣದ ಅವಶೇಷಗಳು ಮನೆಗಳ ಮೇಲೆ ಬಿದ್ದಿದ್ದವು. ಮನೆಗಳು ಭಾಗಶಃ ಕುಸಿದಿದ್ದವು. ಮನೆಯಲ್ಲಿ 11 ಮಂದಿ ವಾಸವಿದ್ದರು. ಸ್ಥಳದಲ್ಲಿ ಸೇರಿದ್ದ ಸ್ಥಳೀಯರು, ಮನೆಗಳಲ್ಲಿ ಸಿಲುಕಿದ್ದ 11 ಮಂದಿಯನ್ನೂ ಹೊರಗೆ ಕರೆತಂದು ರಕ್ಷಿಸಿದ್ದಾರೆ. ಎರಡು ಅಂಗಡಿಗಳ ಮೇಲೂ ಟವರ್ ಅವಶೇಷಗಳು ಬಿದ್ದಿದ್ದವು’ ಎಂದು ತಿಳಿಸಿದರು.



ಉರುಳಿಬಿದ್ದ ಮೊಬೈಲ್ ಟವರ್

‘ಘಟನೆ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಬಿಬಿಎಂಪಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮುಂಜಾಗ್ರತಾ ಕ್ರಮ ಕೈಗೊಳ್ಳದೇ ಹಳೇ ಕಟ್ಟಡ ತೆರವು ಮಾಡುತ್ತಿದ್ದ ಮಾಲೀಕರ ವಿರುದ್ಧ ಠಾಣೆಗೆ ದೂರು ನೀಡುವುದಾಗಿ ತಿಳಿಸಿದರು’ ಎಂದು ಸ್ಥಳೀಯರು ಮಾಹಿತಿ ನೀಡಿದರು.

ನಂದಿನಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಈ ಅವಘಡ ಸಂಭವಿಸಿದ್ದು, ಶುಕ್ರವಾರ ತಡರಾತ್ರಿಯವರೆಗೂ ಯಾವುದೇ ದೂರು ದಾಖಲಾಗಿಲ್ಲ.

ನಗರದಲ್ಲಿ ಇಂದು

ವಾರ್ಷಿಕ ಅಥ್ಲೆಟಿಕ್ ಕೂಟ: ಮುಖ್ಯ ಅತಿಥಿ: ಬಿಂದುರಾಣಿ ಜಿ., ಅಧ್ಯಕ್ಷತೆ: ಜಿಯಾವುಲ್ಲಾ ಷರೀಫ್, ಆಯೋಜನೆ ಹಾಗೂ ಸ್ಥಳ: ಎ.ಕೆ. ಕಾಲೇಜ್ ಫಾರ್ ವುಮನ್, ಕಬ್ಬನ್ ಪೇಟೆ, ಬೆಳಿಗ್ಗೆ 9.30

ಉತ್ತಮ ಆರೋಗ್ಯಕ್ಕಾಗಿ ಜಡ್‌ಎಸ್ ಬೆಂಗಳೂರು ವಾಕಥಾನ್: ಮುಖ್ಯ ಅತಿಥಿಗಳು: ಮನಿಷ್ ಮೆನನ್, ದಿನೇಶ್ ಗುಂಡೂರಾವ್, ರಾಮಲಿಂಗಾರೆಡ್ಡಿ, ಸಿ.ಕೆ. ರಾಮಮೂರ್ತಿ, ಎನ್. ನಾಗರಾಜು, ಆಯೋಜನೆ: ಜಡ್‌ಎಸ್ ಅಸೋಸಿಯೇಷನ್, ಸಮರ್ಥನಂ ಅಂಗವಿಕಲರ ಸಂಸ್ಥೆ, ಸ್ಥಳ: ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣ, ಜಯನಗರ 3ನೇ ಬ್ಲಾಕ್, ಬೆಳಿಗ್ಗೆ 9.30

ಎಸ್‌ಜೆಆರ್‌ಸಿಎಲ್ ಹಳೆ ವಿದ್ಯಾರ್ಥಿಗಳ ಒಕ್ಕೂಟ ಉದ್ಘಾಟನೆ: ನ್ಯಾ.ಎಸ್. ವಿ. ಭಟ್ಟಿ, ಗೌರವ ಅತಿಥಿ: ನ್ಯಾ.ವಿ. ಗೋಪಾಲಗೌಡ, ಆಯೋಜನೆ ಹಾಗೂ ಸ್ಥಳ: ಶ್ರೀ ಜಗದ್ಗುರು ರೇಣುಕಾಚಾರ್ಯ ಕಾನೂನು ವಿದ್ಯಾಲಯ, ಆನಂದರಾವ್ ವೃತ್ತ, ಬೆಳಿಗ್ಗೆ 10

ನಮ್ಮ ಜಾತ್ರೆ: ಜಾನಪದ ಕಲಾ ಪ್ರದರ್ಶನ ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

ಸಿರಿಧಾನ್ಯ, ಸಾವಯವ ಮತ್ತು ನೈಸರ್ಗಿಕ ಕೃಷಿ ಉತ್ಪನ್ನಗಳ ಮೇಳ: ಉದ್ಘಾಟನೆ: ಚಲುವರಾಯಸ್ವಾಮಿ, ಆಯೋಜನೆ: ಆರ್ಟ್ ಆಫ್ ಲಿವಿಂಗ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ಆರ್ಟ್ ಆಫ್ ಲಿವಿಂಗ್, ಕನಕಪುರ ರಸ್ತೆ, ಬೆಳಿಗ್ಗೆ 11

68 ಕನ್ನಡ ಪುಸ್ತಕಗಳ ಲೋಕಾರ್ಪಣೆ: ಸುಧಾ ಮೂರ್ತಿ, ಸಾನ್ನಿಧ್ಯ: ವೀರೇಶಾನಂದ ಸರಸ್ವತಿ ಸ್ವಾಮೀಜಿ, ‘ನಾಡು–ನುಡಿಯ ದೃಷ್ಟಿಯಲ್ಲಿ ಪುಸ್ತಕಗಳು’ ವಿಷಯದ ಬಗ್ಗೆ ಉಪನ್ಯಾಸ: ಯೋಗರಾಜ್ ಭಟ್, ಕೃತಿ ಬಗ್ಗೆ ಮಾತು: ಮಲ್ಲೇಪುರಂ ಜಿ. ವೆಂಕಟೇಶ, ಅಧ್ಯಕ್ಷತೆ: ಕೆ. ಮರುಳಸಿದ್ದಪ್ಪ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 9.30



ಸುಧಾ ಮೂರ್ತಿ

ದಾಸ ಗಾನ ಮಂಜರಿ: ಉದ್ಘಾಟನೆ: ಸೌಮ್ಯನಾಥ ಸ್ವಾಮೀಜಿ, ಅಧ್ಯಕ್ಷತೆ: ಕೆ.ಬಿ. ಲೋಕೇಶ್, ಮುಖ್ಯ ಅತಿಥಿ: ಬಂಡ್ಲಹಳ್ಳಿ ವಿಜಯಕುಮಾರ್, ಗೌರವ ಉಪಸ್ಥಿತಿ: ಆರ್. ಕೃಷ್ಣಮೂರ್ತಿ, ಆಯೋಜನೆ: ರಂಗ ಸಂಸ್ಥಾನ, ಸ್ಥಳ: ಹೊಂಬೇಗೌಡ ಪದವಿ ಪೂರ್ವ ಕಾಲೇಜು, ಮಹಾಕವಿ ಕುವೆಂಪು ರಸ್ತೆ, ಗಾಯಿತ್ರಿನಗರ, ಬೆಳಿಗ್ಗೆ 10.30

ಶಂಕರ ಕೆ. ಪ್ರಸಾದ್ ಅವರ ‘21ನೇ ಶತಮಾನದ ಆತ್ಮನಿರ್ಭರ ಗ್ರಾಮ ಪಂಚಾಯಿತಿ’ ಮತ್ತು ‘ರಿಬೂಟಿಂಗ್ ಡೆಮಾಕ್ರಸಿ ಇನ್ ಗ್ರಾಮ್ ಪಂಚಾಯತ್ಸ್’ ಪುಸ್ತಕ ಬಿಡುಗಡೆ: ಬಿ.ಕೆ. ಚಂದ್ರಶೇಖರ್, ಮುಖ್ಯ ಅತಿಥಿ: ಬಿ.ಎಲ್. ಶಂಕರ್, ಗೌರವ ಅತಿಥಿಗಳು: ಶಾಮ್ ಕಶ್ಯಪ್, ಎಂ.ವಿ.ಎನ್. ರಾವ್, ಅಧ್ಯಕ್ಷತೆ: ಸದಾನಂದ ಜಾನೆಕೆರೆ, ಆಯೋಜನೆ: ಸಂಪೂರ್ಣ ಸ್ವರಾಜ್ ಫೌಂಡೇಷನ್, ಸ್ಥಳ: ಗಾಂಧಿ ಭವನ, ಬೆಳಿಗ್ಗೆ 10.30

ಪಾಂಚಜನ್ಯ ಪುರಸ್ಕಾರ ಪ್ರದಾನ ಸಮಾರಂಭ: ಪ್ರದಾನ: ಟಿ.ವಿ. ರಾಜು, ಮುಖ್ಯ ಅತಿಥಿ: ಕೆ.ಎಸ್. ಸಮೀರ ಸಿಂಹ, ಪ್ರಶಸ್ತಿ ಪುರಸ್ಕೃತರು: ಸುರೇಶ್ ವಿ. ಕುಲಕರ್ಣಿ, ಉಪಸ್ಥಿತಿ: ಎಚ್.ಎಸ್. ಗಣೇಶ ಭಟ್ಟ, ಆಯೋಜನೆ: ಪಾಂಚಜನ್ಯ ಪ್ರತಿಷ್ಠಾನ, ಸ್ಥಳ: ವಿವೇಕ ಆಡಿಟೋರಿಯಂ, ಯುವಪಥ, ಜಯನಗರ 4ನೇ ಬಡಾವಣೆ, ಮಧ್ಯಾಹ್ನ 12

ಕರ್ನಾಟಕ ಸುವರ್ಣ ಸಂಭ್ರಮ 50: ಮುಖ್ಯ ಅತಿಥಿಗಳು: ನಾ. ಸೋಮೇಶ್ವರ, ಗೌರವ ಅತಿಥಿ: ಬೆಂ.ಸ್ವಾ. ನಾಗರಾಜ್, ಅಧ್ಯಕ್ಷತೆ: ನಾ.ರಾ. ಹೆಗಡೆ, ಆಯೋಜನೆ: ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆಗಳು ಜಿಲ್ಲೆ 317ಎಫ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಮಹಾರಾಣಿ ಕಾಲೇಜಿನ ಸಮೀಪ, ಮಧ್ಯಾಹ್ನ 3

ಭರತನಾಟ್ಯ ರಂಗ ಪ್ರವೇಶ: ಜೆ. ಜಶ್ವಂತ್, ಮುಖ್ಯ ಅತಿಥಿಗಳು: ಶೇಷಾದ್ರಿ ಐಯ್ಯಂಗಾರ್, ಎಂ.ಕೆ. ಭಾಸ್ಕರ್, ಎಂ.ಆರ್. ಕಮಲ, ಆಯೋಜನೆ: ಜೆ. ಜಯ ಕುಮಾರಿ, ಜೆ. ರಾಜೇಂದ್ರನ್, ಸ್ಥಳ: ಕೃಷ್ಣದೇವರಾಯ ಕಲಾಮಂದಿರ, ಮಲ್ಲೇಶ್ವರ, ಸಂಜೆ 5

> ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಡಾ.ಎಚ್. ಗಿರಿಜಮ್ಮ ಪ್ರಶಸ್ತಿ ಪ್ರದಾನ: ಚಂದ್ರಶೇಖರ ಕಂಬಾರ, ಪ್ರಶಸ್ತಿ ಪುರಸ್ಕೃತರು: ಪ್ರೇಮಲತಾ ಬಿ., ಕೆ. ಸುಶೀಲಾ, ಅಭಿನಂದನಾ ನುಡಿ: ನಾ. ಸೋಮೇಶ್ವರ, ಮುಖ್ಯ ಅತಿಥಿಗಳು: ಆರ್. ಕೆ. ಸರೋಜ, ನಾಗತಿಹಳ್ಳಿ ಚಂದ್ರಶೇಖರ, ಅಧ್ಯಕ್ಷತೆ: ಡಾ.ಸಿ.ಆರ್. ಚಂದ್ರಶೇಖರ್, ಆಯೋಜನೆ: ಡಾ.ಎಚ್. ಗಿರಿಜಮ್ಮ ಸ್ನೇಹ ಬಳಗ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರ ಪಾರ್ಕ, ಸಂಜೆ 5

ಬಿ.ಎಸ್. ವೆಂಕಟೇಶ ರಾವ್ ಅವರ ‘ಸಿನಿ ಮಾಯೆ’ ಕೃತಿ ಲೋಕಾರ್ಪಣೆ: ಗಣೇಶ್ ಕಾಸರಗೋಡು, ಅಧ್ಯಕ್ಷತೆ: ಬಿ.ಎಸ್. ಮನೋಹರ್, ಪುಸ್ತಕ ಪರಿಚಯ: ಹೃದಯ ಶಿವ, ಆಯೋಜನೆ: ಸ್ನೇಹ ಬುಕ್ ಹೌಸ್, ಸ್ಥಳ: ಸುಚಿತ್ರ ನಾಣಿ ಅಂಗಳ, ಬನಶಂಕರಿ 2ನೇ ಹಂತ, ಸಂಜೆ 5.30

ನೃತ್ಯ ನೀರಾಜನ ನೃತ್ಯ ಉತ್ಸವ: ಮುಖ್ಯ ಅತಿಥಿ: ವೀಣಾ ಮೂರ್ತಿ ವಿಜಯ್, ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿಯಿಂದ ‘ಪಂಚವಟಿ’ ಯಕ್ಷಗಾನ ಪ್ರದರ್ಶನ, ಆಯೋಜನೆ: ಅನನ್ಯ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 5.30

ರಂಗೋತ್ಸವ: ನಾಟಕ ಪ್ರದರ್ಶನ: ಪ್ರಮೀಳಾರ್ಜುನೀಯಂ, ಆಯೋಜನೆ: ಸಾಫಲ್ಯ ರಂಗತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಳ್ಳಿ, ಸಂಜೆ 5.30

ಕೋಟ ಶಿವರಾಮ ಕಾರಂತ ಸ್ಮರಣೆ ಹಾಗೂ ನುಡಿ ನಮನ: ಮನು ಬಳಿಗಾರ್, ಟಿ.ಜಿ. ಶ್ರೀನಿಧಿ, ಅಧ್ಯಕ್ಷತೆ: ಶ್ರೀರಾಮೇಗೌಡ, ಮುಖ್ಯ ಅತಿಥಿ: ಜಗದೀಶ ನಾಯ್ಕ್, ತಾಳಮದ್ದಳೆ: ‘ಪಂಚವಟಿ’, ಆಯೋಜನೆ ಹಾಗೂ ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

‘ನಿವೇದನಂ’ ವಾರ್ಷಿಕ ಪ್ರಶಸ್ತಿ ಪ್ರದಾನ: ಅತಿಥಿಗಳು: ನ್ಯಾ.ಕೆ.ಆರ್. ಶ್ರೀರಾಮ್, ಭಾಸ್ಕರ್ ಬಾರ್ಯ, ಶುಭಾ ಧನಂಜಯ್, ಪ್ರಶಸ್ತಿ ಪುರಸ್ಕೃತರು: ಪಿಸುವಟಿ ಎಸ್. ವೆಂಕಟಸುಬ್ರಮಣ್ಯನ್, ಎಚ್. ದಾಸಪ್ಪ ರೈ, ತಂಜಾವೂರು ಬಾಲಕೃಷ್ಣನ್, ಆಯೋಜನೆ: ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ ದಕ್ಷಿಣ ವಲಯ ಕಚೇರಿ, ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ, ಸ್ಥಳ: ಯುವನಿಕ, ನೃಪತುಂಗ ರಸ್ತೆ, ಸಂಜೆ 6

ಕಾರ್ತಿಕ ಮಾಸದ ದೀಪೋತ್ಸವ: ಉದ್ಘಾಟನೆ: ರೂಪಾ ಅಯ್ಯರ್, ಮಹೇಂದ್ರ ಮುನ್ನೋಟ್, ಮುಖ್ಯ ಅತಿಥಿಗಳು: ಸಿ.ಕೆ. ರಾಮಮೂರ್ತಿ, ಬಿ. ಸೋಮಶೇಖರ್, ಆರ್.ಎನ್. ಸ್ವಾಮಿ, ಶ್ರೀವತ್ಸ, ಆಯೋಜನೆ: ವಿನಾಯಕ ಮಿತ್ರ ಮಂಡಳಿ, ಜಯರಾಮ ಸೇವಾ ಮಂಡಳಿ, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವರು ನೀಡಿರುವ ಉತ್ತರ

2 ರಾಜ್ಯಕ್ಕಷ್ಟೇ ಎನ್‌ಡಿಆರ್‌ಎಫ್ ಹಣ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಹೆಚ್ಚಿನ ರಾಜ್ಯಗಳು ಈ ವರ್ಷ ಅತಿವೃಷ್ಟಿ ಹಾಗೂ ಬರದಿಂದ ತತ್ತರಿಸಿವೆ. ಆದರೆ, ಕೇಂದ್ರ ಸರ್ಕಾರ ಈ ಸಾಲಿನಲ್ಲಿ ಈವರೆಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ನಿಧಿಯಿಂದ (ಎನ್‌ಡಿಆರ್‌ಎಫ್) ಎರಡು ರಾಜ್ಯಗಳಿಗಷ್ಟೇ ಹಣ ಬಿಡುಗಡೆ ಮಾಡಿದೆ.

ರಾಜ್ಯಸಭೆಯಲ್ಲಿ ಕಾಂಗ್ರೆಸ್‌ನ ಸದಸ್ಯ ಸಯ್ಯದ್ ನಾಸಿರ್ ಹುಸೇನ್ ಕೇಳಿರುವ ಪ್ರಶ್ನೆಗೆ ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವರು ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ. ಜುಲೈ ಹಾಗೂ ಆಗಸ್ಟ್‌ನಲ್ಲಿ ಸುರಿದ ಭಾರಿ ಮಳೆಯಿಂದ ಸಂಕಷ್ಟಕ್ಕೆ ಒಳಗಾಗಿದ್ದ ಹಿಮಾಚಲ ಪ್ರದೇಶಕ್ಕೆ ₹389 ಕೋಟಿ ಹಾಗೂ ಸಿಕ್ಕಿಂಗೆ ₹46 ಕೋಟಿ ಬಿಡುಗಡೆಗೊಳಿಸಿದೆ. ಬರಪೀಡಿತ ಜನರಿಗೆ ನೆರವಾಗಲು ತುರ್ತಾಗಿ ಅನುದಾನ ಬಿಡುಗಡೆ ಮಾಡುವಂತೆ ಕರ್ನಾಟಕ ಸೇರಿ ಹಲವು ರಾಜ್ಯಗಳು ಮನವಿ ಸಲ್ಲಿಸಿದರೂ ಕೇಂದ್ರ ಸರ್ಕಾರ ಈತನಕ ಹಣ ಬಿಡುಗಡೆ ಮಾಡಿಲ್ಲ. ಕೇಂದ್ರದ ಅಧ್ಯಯನ ತಂಡವು ಸಲ್ಲಿಸಿದ ವರದಿಗಳನ್ನು ಉನ್ನತ ಮಟ್ಟದ ಸಚಿವರ ತಂಡವು ಪರಾಮರ್ಶೆ ನಡೆಸಿದ ಬಳಿಕ ರಾಜ್ಯಗಳಿಗೆ ಈ ಅನುದಾನ ನೀಡಲಾಗುತ್ತದೆ ಎಂದು ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.

ಭಾಗಶಃ ಪಾವತಿ: ರಾಜ್ಯ ವಿಪತ್ತು ಸ್ಪಂದನೆ ನಿಧಿಯಿಂದ (ಎಸ್‌ಡಿಆರ್‌ಎಫ್) ಈ ವರ್ಷ 28 ರಾಜ್ಯಗಳಿಗೆ ಈ ವರ್ಷ ₹25,565 ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಕೇಂದ್ರದ ಪಾಲು ₹19,572 ಕೋಟಿ. ರಾಜ್ಯದ್ದು ₹5,992 ಕೋಟಿ. ಗೃಹ ಸಚಿವಾಲಯದ ಶಿಫಾರಸಿನ ಮೇರೆಗೆ ಕೇಂದ್ರ ಹಣಕಾಸು ಸಚಿವಾಲಯವು ಜುಲೈ ತಿಂಗಳಿನಲ್ಲೇ ಮೊದಲ ಕಂತನ್ನು (₹10,031 ಕೋಟಿ) ರಾಜ್ಯಗಳಿಗೆ ಬಿಡುಗಡೆಗೊಳಿಸಿತ್ತು. ಕರ್ನಾಟಕಕ್ಕೆ ಬರಬೇಕಿದ್ದ ₹928 ಕೋಟಿ ಪೈಕಿ ₹348 ಕೋಟಿ ಬಿಡುಗಡೆಯಾಗಿತ್ತು. ಹಿಮಾಚಲ ಪ್ರದೇಶ ಹಾಗೂ ಸಿಕ್ಕಿಂ ರಾಜ್ಯಗಳಿಗೆ ಎರಡನೇ ಕಂತು ಬಂದಿದೆ.

15ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಕೇಂದ್ರವು ಎಸ್‌ಡಿಆರ್‌ಎಫ್‌ಗೆ 2021–22ರಿಂದ 2025–26ರ ಅವಧಿಗೆ ₹1,28,122 ಕೋಟಿ ಹಂಚಿಕೆ ಮಾಡಿದೆ. ಇದರಲ್ಲಿ ಕೇಂದ್ರ ಸರ್ಕಾರದ ಪಾಲು ₹98,080 ಕೋಟಿ. ಕೇಂದ್ರವು ಇಲ್ಲಿಯವರೆಗೆ ₹42,566 ಕೋಟಿಯನ್ನು ರಾಜ್ಯಗಳಿಗೆ ಪಾವತಿಸಿದೆ ಎಂದು ತಿಳಿಸಿವೆ.

ಕುಡಿಯುವ ನೀರು: ರಾಜ್ಯದ ಹೊಣೆ

‘ಕುಡಿಯುವ ನೀರು ರಾಜ್ಯದ ವಿಷಯ. ಬರಪೀಡಿತ ಪ್ರದೇಶಗಳನ್ನು ಒಳಗೊಂಡಂತೆ ನೀರು ಸರಬರಾಜು ಯೋಜನೆಗಳನ್ನು ಯೋಜಿಸುವ, ವಿನ್ಯಾಸಗೊಳಿಸುವ, ಅನುಮೋದಿಸುವ, ಅನುಷ್ಠಾನಗೊಳಿಸುವ ಮತ್ತು ನಿರ್ವಹಿಸುವ ಜವಾಬ್ದಾರಿ ರಾಜ್ಯಗಳ ಮೇಲಿದೆ’ ಎಂದು ಕೇಂದ್ರ ಜಲಶಕ್ತಿ ಸಚಿವರು ಸ್ಪಷ್ಟಪಡಿಸಿದ್ದಾರೆ.

‘ಕರ್ನಾಟಕದಲ್ಲಿ ಬರದಿಂದ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿರುವುದು ಕೇಂದ್ರದ ಗಮನಕ್ಕೆ ಬಂದಿದೆಯೇ? ಇದಕ್ಕೆ ಕೇಂದ್ರ ಅನುದಾನ ಬಿಡುಗಡೆ ಮಾಡಿದೆಯೇ?’ ಎಂದು ಸಂಸದರಾದ ಡಿ.ಕೆ. ಸುರೇಶ್ ಹಾಗೂ ಸುಮಲತಾ ಅಂಬರೀಷ್ ಅವರು ಲೋಕಸಭೆಯಲ್ಲಿ ಸಚಿವರಿಗೆ ಪ್ರಶ್ನೆ ಕೇಳಿದ್ದರು. ಇದಕ್ಕೆ ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಉತ್ತರಿಸಿದ್ದಾರೆ. ‘ಬರಪೀಡಿತ ಪ್ರದೇಶಗಳಲ್ಲಿ ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಗಳನ್ನು ನಡೆಸಲು ಅನುವು ಮಾಡಿಕೊಡಲಾಗಿದೆ’ ಎಂದೂ ಹೇಳಿದ್ದಾರೆ.

ಬೆಂಗಳೂರು–ಚೆನ್ನೈ ಹೈ ಸ್ಪೀಡ್ ರೈಲಿಗೆ ಡಿಪಿಆರ್

ಪ್ರಜಾವಾಣಿ ವಾರ್ತೆ

ನವದೆಹಲಿ: ಚೆನ್ನೈ–ಬೆಂಗಳೂರು–ಮೈಸೂರು ಹೈ ಸ್ಪೀಡ್ ರೈಲು ಕಾರಿಡಾರ್ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗುತ್ತಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಸದಸ್ಯ ಡಾ. ಡಿ.ವೀರೇಂದ್ರ ಹೆಗ್ಗಡೆ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ‘ಅಂತಿಮ ಸ್ಥಳ ಸಮೀಕ್ಷೆ, ವೆಚ್ಚದ ಅಂದಾಜುಗಳು, ಅನುಷ್ಠಾನ ಮಾದರಿ ಮತ್ತು ಹಣಕಾಸು ಆಯ್ಕೆಗಳು ಸೇರಿದಂತೆ ಎಲ್ಲ ಅಗತ್ಯ ಅಂಶಗಳನ್ನು ಡಿಪಿಆರ್ ಒಳಗೊಂಡಿರುತ್ತದೆ’ ಎಂದು ತಿಳಿಸಿದ್ದಾರೆ.

ಸೆಮಿ ಹೈ ಸ್ಪೀಡ್ ರೈಲು ಯೋಜನೆಯ ಸಂಬಂಧ ಕರ್ನಾಟಕ ಸರ್ಕಾರದಿಂದ ಯಾವುದೇ ಪ್ರಸ್ತಾವನೆ ಬಂದಿಲ್ಲ ಎಂದೂ ಅವರು ಹೇಳಿದ್ದಾರೆ.

12ರಿಂದ ಗ್ರಾಮೀಣ ಅಂಚೆ ಸೇವಕರ ಮುಷ್ಕರ

ಬೆಂಗಳೂರು: ಮುಂಬಡ್ತಿ, ವೈದ್ಯಕೀಯ ಸೌಲಭ್ಯ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿರುವ ಅಖಿಲ ಭಾರತ ಗ್ರಾಮೀಣ ಅಂಚೆ ಸೇವಕರ ಒಕ್ಕೂಟ (ಎಐಜಿಡಿಎಸ್‌ಯು) ಹಾಗೂ ಗ್ರಾಮೀಣ ಅಂಚೆ ಸೇವಕರ ರಾಷ್ಟ್ರೀಯ ಒಕ್ಕೂಟ (ಎನ್‌ಯುಜಿಡಿಎಸ್), ಜಂಟಿಯಾಗಿ ಇದೇ 12ರಿಂದ ಮುಷ್ಕರ ನಡೆಸಲು ನಿರ್ಧಾರ ಕೈಗೊಂಡಿವೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಐಜಿಡಿಎಸ್‌ಯು ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಮಹದೇವಯ್ಯ, ‘ಗ್ರಾಮೀಣ ಅಂಚೆ ಸೇವಕರು ಅಂಚೆ ಸೇವೆಗಳನ್ನು ಪೂರ್ಣ ಪ್ರಮಾಣದಲ್ಲಿ ಗ್ರಾಮೀಣ ಜನರಿಗೆ ತಲುಪಿಸುತ್ತಿದ್ದಾರೆ. ರಾಜ್ಯದಲ್ಲಿ 16.5 ಸಾವಿರ ಗ್ರಾಮೀಣ ಅಂಚೆ ಸೇವಕರು ಕಾರ್ಯನಿರ್ವಹಿಸುತ್ತಿದ್ದಾರೆ. ಮುಷ್ಕರದ ಅವಧಿಯಲ್ಲಿ ಸೇವೆಯನ್ನು ಸ್ಥಗಿತಗೊಳಿಸಿ, ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುತ್ತದೆ’ ಎಂದು ಹೇಳಿದರು.

‘ಈ ಮುಷ್ಕರ ಏಕಕಾಲದಲ್ಲಿ ದೇಶದಾದ್ಯಂತ ನಡೆಯಲಿದೆ. ದೇಶದಲ್ಲಿ ಶೇ 80ರಷ್ಟು ಅಂಚೆ ಕಚೇರಿಗಳು ಗ್ರಾಮೀಣ ಭಾಗದಲ್ಲಿಯೇ ಕಾರ್ಯ ನಿರ್ವಹಿಸುತ್ತಿವೆ. 3.16 ಲಕ್ಷ ಗ್ರಾಮೀಣ ಅಂಚೆ ಸೇವಕರು ಇದ್ದಾರೆ. ಇವರಿಗೆ ನಾಗರಿಕ ನೌಕರರ ಸ್ಥಾನಮಾನ ನೀಡಬೇಕು. 5 ಗಂಟೆಗಳ ಕರ್ತವ್ಯದ ಮಿತಿ ತೆಗೆದು, ಪ್ರತ್ಯೇಕ ವರ್ಗೀಕರಣ ನೀಡುವ ಮೂಲಕ ಪೌರಕಾರ್ಮಿಕರ ಸ್ಥಾನಮಾನ ಒದಗಿಸಬೇಕು. ಕಮಲೇಶ್ ಚಂದ್ರ ಸಮಿತಿಯ ಶಿಫಾರಸ್ಸಿನಂತೆ 12, 24 ಮತ್ತು 36 ವರ್ಷಗಳ ಸೇವೆ ಪೂರ್ಣಗೊಳಿಸಿದ ಬಳಿಕ ಮುಂಬಡ್ತಿ ನೀಡಬೇಕು’ ಎಂದು ಆಗ್ರಹಿಸಿದರು.

‘ಕಡಿಮೆ ಸಂಬಳ ಪಡೆಯುವ ಗ್ರಾಮೀಣ ಅಂಚೆ ಸೇವಾ ನೌಕರರಿಗೆ ಯಾವುದೇ ವೈದ್ಯಕೀಯ ಸೌಲಭ್ಯವಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ (ಸಿಜಿಎಚ್‌ಎಸ್) ವೈದ್ಯಕೀಯ ಸೌಲಭ್ಯ ಒದಗಿಸಬೇಕು. ಗ್ರ್ಯಾಚುಟಿ ಸೇರಿ ವಿವಿಧ ಸೌಲಭ್ಯ ನೀಡಬೇಕು’ ಎಂದು ಒತ್ತಾಯಿಸಿದರು.



ಎಳ್ಳೆಣ್ಣೆ ಅಭ್ಯಂಜನ

ಬಸವನಗುಡಿ ಕಡಲೆಕಾಯಿ ಪರಿಷೆಯ ಅಂಗವಾಗಿ ದೊಡ್ಡಬಸವಣ್ಣ ದೇವಸ್ಥಾನದ ನಂದಿ ವಿಗ್ರಹಕ್ಕೆ ಶುಕ್ರವಾರ ಎಳ್ಳೆಣ್ಣೆ ಅಭ್ಯಂಜನ ಮಾಡಿಸಲಾಯಿತು –ಪ್ರಜಾವಾಣಿ ಚಿತ್ರ

ರಾಜ್ಯ ಬಿಜೆಪಿ ಘಟಕಗಳ ಪುನರ್‌ರಚನೆಗೆ ಒಲವು

ಅರುಣ್ ಸಿಂಗ್– ಬಿವೈವಿ ಚರ್ಚೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಕರ್ನಾಟಕ ರಾಜ್ಯ ಘಟಕದ ಎಲ್ಲ ಘಟಕಗಳ ಪುನರ್ ರಚನೆ ಸಂಬಂಧ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಜತೆಗೆ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಶುಕ್ರವಾರ ಸಮಾಲೋಚನೆ ನಡೆಸಿದರು.

ಈ ಹಿಂದಿನ ಅವಧಿಯಲ್ಲಿ ಬಿಜೆಪಿ ಯಾವುದೇ ಘಟಕಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿರಲಿಲ್ಲ. ಸಕ್ರಿಯವಾಗಿ ಕಾರ್ಯ ನಿರ್ವಹಿಸುವವರು ಮತ್ತು ಕ್ರಿಯಾಶೀಲರಿಗೆ ಹೆಚ್ಚಿನ ಆದ್ಯತೆ ನೀಡಲು ಘಟಕಗಳ ಪುನರ್ ರಚನೆಗೆ ನಿರ್ಧರಿಸಲಾಗಿದೆ. ಈ ಕುರಿತು ಅರುಣ್ ಸಿಂಗ್ ಜತೆಗೆ ಚರ್ಚಿಸುವಂತೆ ವಿಜಯೇಂದ್ರ ಅವರಿಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೂಚಿಸಿದ್ದರು.



ಅರುಣ್ ಸಿಂಗ್ ಅವರಿಗೆ ಬಿ.ವೈ.ವಿಜಯೇಂದ್ರ ಹೂಗುಚ್ಛ ನೀಡಿದರು

‘ಪಕ್ಷದ ಹಿರಿಯ ನಾಯಕರೊಂದಿಗೆ ಸಮಾಲೋಚಿಸಿ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಈ ಪಟ್ಟಿಯನ್ನು ಅರುಣ್ ಸಿಂಗ್ ಅವರಿಗೆ ನೀಡಲಾಗಿದೆ. ಅವರು ವರಿಷ್ಠರೊಂದಿಗೆ ಸಮಾಲೋಚನೆ ನಡೆಸುವರು. ಮಧ್ಯ ಪ್ರದೇಶ, ರಾಜಸ್ಥಾನ, ಛತ್ತೀಸಗಢ ರಾಜ್ಯಗಳಿಗೆ ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಮುಗಿದ ಬಳಿಕ ವರಿಷ್ಠರು ಚರ್ಚಿಸಿ ಪಟ್ಟಿಗೆ ಅಂತಿಮ ರೂಪ ನೀಡಲಿದ್ದಾರೆ’ ಎಂದು ವಿಜಯೇಂದ್ರ ತಿಳಿಸಿದರು.

ಎರಡು ಸ್ಕ್ಯಾನಿಂಗ್ ಕೇಂದ್ರಗಳಿಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯಾಧಿಕಾರಿಗಳ ತಂಡವು ನಗರದ ವಿವಿಧ ಸ್ಕ್ಯಾನಿಂಗ್ ಕೇಂದ್ರಗಳಿಗೆ ಶುಕ್ರವಾರ ದಿಢೀರ್ ಭೇಟಿ ನೀಡಿದ್ದು, ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಭ್ರೂಣಲಿಂಗ ಪತ್ತೆ ಕಾಯ್ದೆ (ಪಿಸಿಪಿಎನ್‌ಡಿಟಿ) ಅಡಿ ದಾಖಲಾತಿಗಳನ್ನು ಸಮರ್ಪಕವಾಗಿ ನಿರ್ವಹಿಸದ ಎರಡು ಕೇಂದ್ರಗಳಿಗೆ ಬೀಗ ಹಾಕಿದೆ.

ಜಿಲ್ಲಾ ಪಿಸಿಪಿಎನ್‌ಡಿಟಿ ಸಕ್ಷಮ ಪ್ರಾಧಿಕಾರ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ. ರವೀಂದ್ರನಾಥ್ ಎಂ. ಮೇಟಿ ಅವರ ನೇತೃತ್ವದಲ್ಲಿ ಅಧಿಕಾರಿಗಳು ವಿವಿಧ ಸ್ಕ್ಯಾನಿಂಗ್ ಸೆಂಟರ್ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಭೇಟಿ ನೀಡಿದ್ದರು. ಈ ವೇಳೆ ಕಗ್ಗದಾಸಪುರದ ಎಸ್.ಎಸ್. ಲ್ಯಾಬ್ಸ್ ಆ್ಯಂಡ್ ಡಯಾಗ್ನಾಸ್ಟಿಕ್ಸ್ ಮತ್ತು ಮೆಡ್‌ಝೋನ್ ಡಯಾಗ್ನಾಸ್ಟಿಕ್ಸ್ ಕೇಂದ್ರವು ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸದಿರುವುದು ಕಂಡುಬಂದಿದೆ. ಇದರಿಂದ ಈ ಕೇಂದ್ರಗಳಿಗೆ ಬೀಗ ಹಾಕಿ, ಮುಚ್ಚಲಾಗಿದೆ.

ತಂಡದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ. ನದೀಮ್ ಅಹಮದ್, ಬೆಂಗಳೂರು ಪೂರ್ವ ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಕೋಮಲ ಎಚ್.ಟಿ. ಹಾಗೂ ವಿಕಿರಣ ತಜ್ಞೆ ಡಾ. ಲೀಲಾ ಆರ್.ಪಿ. ಇದ್ದರು.



ನಿಷ್ಕಾರಣ ಪ್ರೀತಿಯ ಹುಡುಕುತ್ತಾ...

ನಿರಂತರವಾಗಿ ಬೈಕ್ ಓಡಿಸುವುದು ಸುಲಭವಂತೂ ಅಲ್ಲ. ಈಚೆಗೆ ದಶಮಿರಾಣಿ ಅವರು ತಮಿಳುನಾಡು ಹಾಗೂ ಕೇರಳದ ಮೂಲಕ ಹಾದುಹೋಗುವ ಹೊಸದೊಂದು ಯಾತ್ರೆಯನ್ನು ಮುಗಿಸಿ ಬಂದಿದ್ದಾರೆ.

ಅಮೃತ್ ಕಿರಣ್ ಬಿ.ಎಂ



ದಶಮಿ ರಾಣಿ

ಇಡೀ ಬೆಂಗಳೂರು ಕತ್ತಲೆಯಲ್ಲಿ ಮುಳುಗಿ, ಜನರೆಲ್ಲ ಸಕ್ಕರೆ ನಿದ್ದೆಯ ಸುಖವನ್ನು ಸವಿಯುತ್ತಿದ್ದರು. ಸಮಯ ಸರಿಯಾಗಿ ಮೂರು ಗಂಟೆ. ರಾತ್ರಿಯೂ ಅಲ್ಲದ, ಬೆಳಗೂ ಅಲ್ಲದ ಆ ನಸುಕಿನ ನಿಶ್ಶಬ್ದ ಗಳಿಗೆಯಲ್ಲಿ ಬುಡ್ ಬುಡ್ ಬುಡ್ ಎಂಬ ಸೌಂಡು..


ಬೈಕ್ ಇನ್ನೇನು ಹೊರಡಲು ಅಣಿಯಾಯ್ತು. ಹೆಲ್ಮೆಟ್ ಒಳಗಿನಿಂದ ಕಂಡ ಕಂಗಳು, ದೂರದೂರಿನ ಅವಿರತ ಪಯಣ ಹಾಗೂ ಅದನ್ನು ಸಾಧ್ಯವಾಗಿಸುವ ವಿಶ್ವಾಸದಿಂದ ಬೆಳಗುತ್ತಿದ್ದವು.

ಬೆಂಗಳೂರಿನ ಬೈಕರ್ ದಶಮಿ ರಾಣಿ ಈ ಬಾರಿ ಮತ್ತೊಂದು ಜೈತ್ರಯಾತ್ರೆಗೆ ಹೊರಟರು. ಲೇಹ್ ಲಡಾಕ್, ಈಶಾನ್ಯ ಭಾರತಗಳನ್ನು ಏಕಾಂಗಿಯಾಗಿ ಸುತ್ತಿ ಸೈ ಎನಿಸಿಕೊಂಡಿರುವ ಅವರ ಪಯಣ ದಕ್ಷಿಣದ ರಾಜ್ಯಗಳತ್ತ ಸಾಗಿತು.

ಇಲ್ಲೇ ಪಕ್ಕದ ರಾಜ್ಯವಾದರೂ ತಲುಪುವ ಗಮ್ಯ ಹತ್ತಿರದ್ದಾಗಿರಲಿಲ್ಲ. ಉದಯವಾಗಲಿದ್ದ ಸೂರ್ಯನನ್ನು ಇನ್ನಷ್ಟು ಬೇಗ ಎದುರುಗೊಳ್ಳುವ ತವಕದಲ್ಲಿ ಮೂಡಣ ದಿಕ್ಕಿನೆಡೆಗೆ ಅವರ ಪ್ರಯಾಣ ಶುರುವಾಯಿತು.

'ಬೆಳಿಗ್ಗೆ ಎದ್ದು ಹಲ್ಲುಜ್ಜಲು ಬ್ರಷ್‌ಗೆ ತಡಕಾಡುವ ಹೊತ್ತಿಗೆ, ನಾನು 600 ಕಿಲೋಮೀಟರ್ ದೂರದ ತಮಿಳುನಾಡಿನ ಮಧುರೈ ನಗರ ತಲುಪಿದ್ದೆ. ಅಂದು ನಾನು ಮತ್ತೆ ವಿಶ್ರಾಂತಿ ಅಂತ ಪಡೆದಿದ್ದು ಕನ್ಯಾಕುಮಾರಿಯಲ್ಲಿ. ಅದೂ ರಾತ್ರಿ ಒಂಬತ್ತು ಗಂಟೆಗೆ. 24 ಗಂಟೆಯ ಪೈಕಿ 18ಗಂಟೆಗಳನ್ನು ನಾನು ಬೈಕ್‌ನಲ್ಲಿ ಕಳೆದಿದ್ದೆ... ಅದೂ ಒಬ್ಬೊಂಟಿಯಾಗಿ...' ಎಂದು ಹೇಳುವಾಗ ಅವರ ಗಂಟಲು ಉಬ್ಬಿಬಂತು.

ಒಬ್ಬ ಮಹಿಳೆಯಾಗಿ ನಿರಂತರವಾಗಿ ಬೈಕ್ ಓಡಿಸುವುದು ಸುಲಭವಂತೂ ಅಲ್ಲ. ಈಚೆಗೆ ಅವರು ತಮಿಳುನಾಡು ಹಾಗೂ ಕೇರಳದ ಮೂಲಕ ಹಾದುಹೋಗುವ ಹೊಸದೊಂದು ಯಾತ್ರೆಯನ್ನು ಮುಗಿಸಿ ಬಂದಿದ್ದಾರೆ. ತಮ್ಮ 'ಸೋಲೊ ಬೈಕ್ ಜರ್ನಿ'ಯನ್ನು ವಿವರಿಸುತ್ತಿದ್ದ ದಶಮಿ, ಪಯಣದ ಹಾದಿಯ ಆಯಾಸದ ಸೆಳಕನ್ನು ಮಾತಿನಲ್ಲಿ ಒಂದಿನಿತೂ ಬಿಟ್ಟುಕೊಡಲಿಲ್ಲ.



ಕಾಪರ್ ಪ್ಲೇಟ್ ಸರ್ಕ್ಯೂಟ್ ನಕ್ಷೆ

'ನಸುಕಿನಲ್ಲಿ ಬೈಕ್ ಹತ್ತಿ ಹೊರಟರೆ, ಸೂರ್ಯನನ್ನು ಎದುರುಗೊಳ್ಳುತ್ತಾ, ಅವನ ಜತೆ ಊರೂರು ಸುತ್ತುತ್ತಾ, ಇಡೀ ದಿನ ಜೊತೆಯಾಗಿದ್ದ ಅವನಿಗೆ ಸಂಜೆ ಒಂದು ವಿದಾಯ ಹೇಳಿ, ಪಯಣದ ಮಧ್ಯದಲ್ಲಿ ಸೇರಿಕೊಳ್ಳುವ ಚಂದಿರನ ಜೊತೆ ಹರಟುತ್ತಾ, ಗೊತ್ತಿಲ್ಲದ ಊರಿನ ಜನಸಂಸ್ಕೃತಿಯ ಸಿರಿವಂತಿಕೆಯನ್ನು ಅರಿಯುತ್ತಾ, ಹೀಗೆ ಇಡೀ ದಿನ ದೊರೆತ ಎಲ್ಲ ಅನುಭವ ಮೆಲುಕುಹಾಕುತ್ತಾ ರಾತ್ರಿ ಹಾಯಾಗಿ ನಿದ್ದೆಗೆ ಜಾರುವ ಸುಖವೇ ಬೇರೆ' ಎನ್ನುತ್ತಾರೆ ದಶಮಿ.

ಪ್ರವಾಸ ಎಂದರೆ ಪ್ರಸಿದ್ಧ ಸ್ಮಾರಕಗಳನ್ನು ನೋಡಿ ಬರುವವರೇ ಹೆಚ್ಚು. ಅವುಗಳಾಚೆಗೂ, ಮುಖ್ಯರಸ್ತೆಗಳಿಂದ ಬಿಡಿಸಿಕೊಂಡು, ಒಳರಸ್ತೆಗಳಲ್ಲಿ ಸಿಗುವ ಅದೆಷ್ಟೋ ಪುಟ್ಟ ಹಳ್ಳಿಗಳ ಒಡಲಲ್ಲಿ, ಕಾಡಿನ ಮಡಿಲಲ್ಲಿ ಎಲೆಮರೆಯ ಕಾಯಿಯಂತೆ ಅಡಗಿ ಕೂತಿರುವ ಸ್ಮಾರಕಗಳು ಕುತೂಹಲಿಗರಿಗಷ್ಟೇ ದರ್ಶನ ನೀಡುತ್ತವೆ.

ನಿರ್ಲಕ್ಷಿತ ಸ್ಮಾರಕಗಳ ಐತಿಹಾಸಿಕ ಮಹತ್ವ, ಅವುಗಳ ಭವ್ಯತೆ, ಅವುಗಳಿಂದ ದೊರೆಯುವ ದಿವ್ಯಾನುಭೂತಿಯನ್ನು ಪ್ರವಾಸಿಗರಿಗೆ ಕಾಣಿಸುವ ಮಹತ್ವಾಕಾಂಕ್ಷೆಯ 'ಕಾಪರ್‌ಪ್ಲೇಟ್ ಸರ್ಕ್ಯೂಟ್' ಯೋಜನೆ ತಮಿಳುನಾಡು ಹಾಗೂ ಕೇರಳ ರಾಜ್ಯಗಳಲ್ಲಿ ಜನ್ಮತಳೆದಿದೆ. ಈ ವಿನೂತನ ಯೋಜನೆಯನ್ನು ರಾಜ್ಯದ ಸೊಲೊ ಬೈಕರ್ ಒಬ್ಬರಿಂದ ಆರಂಭಿಸಲು ರವಿಜ್ ಹೋಟೆಲ್ ಆ್ಯಂಡ್ ರೆಸಾರ್ಟ್ ಸಂಸ್ಥೆ ಇಚ್ಛಿಸಿದ್ದಾಗ, ಅವರ ಮೊದಲ ಆಯ್ಕೆ ದಶಮಿ ಆಗಿದ್ದರು.

ದಶಮಿ ಅವರಿಗೆ ಎರಡೂ ರಾಜ್ಯಗಳ ಸುಪ್ತ ಸ್ಮಾರಕ, ದೇಗುಲ, ಕೋಟೆಗಳನ್ನು ಅನ್ವೇಷಿಸುತ್ತಾ, ಅವುಗಳ ಮಹತ್ವವನ್ನು ವಿವರಿಸುತ್ತಾ ಸಾಗುವ ಮಹತ್ವದ ಜವಾಬ್ದಾರಿ ನೀಡಲಾಗಿತ್ತು.

ಪ್ರವಾಸಿ ಜಗತ್ತಿಗೆ ನಿಗೂಢವೇ ಎನಿಸಿರುವ ತಿರುಚಂಡೂರ್, ತೆಂಕಾಶಿ, ಶ್ರೀವಿಲ್ಲಿ ಪುತ್ತೂರು ಮೊದಲಾದ 46 ಸ್ಥಳಗಳನ್ನು ಕೇವಲ ಮೂರು ದಿನಗಳಲ್ಲಿ ಅನ್ವೇಷಿಸುವ ಸವಾಲನ್ನು ಅವರು ಯಶಸ್ವಿಯಾಗಿ ಮಾಡಿ ಮುಗಿಸಿದರು. ಮೂರು ದಿನಗಳಲ್ಲಿ ಅವರು ಸಾವಿರಕ್ಕೂ ಹೆಚ್ಚು ಕಿಲೋಮೀಟರ್ ಪಯಣಿಸಿ, ಕಡಲತಡಿ, ಜಲಧಾರೆ, ಕೋಟೆ, ದೇಗುಲಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪರಿಚಯಿಸುತ್ತಾ ಹೋದರು.

'ಈ ಪಯಣ ದಾರಿಯಲ್ಲಿ ಸಿಗುವ ಹಳ್ಳಿಗಳಲ್ಲಿ ಒಂದಿಷ್ಟು ಹೊತ್ತು ಕಾಲಕಳೆದೆ. ಮಹಿಳೆಯಾಗಿ ಒಬ್ಬರೇ ಬೈಕ್‌ನಲ್ಲಿ ಸುತ್ತುವ ಪರಿಗೆ ಹಲವರು ಬೆರಗಾದರು. ಕೆಲವರು ಸುರಕ್ಷತೆಯ ಪಾಠ ಹೇಳಿದರು. ಹಿರಿಯರು ಆಶೀರ್ವದಿಸಿದರು. ನಿಷ್ಕಾರಣ ಪ್ರೀತಿ ತೋರಿದವರಿಗೆ ಲೆಕ್ಕವಿಲ್ಲ. ಹಳ್ಳಿಗರ ಪ್ರೀತಿ, ಕಾಳಜಿ, ಅಭಿಮಾನದ ಸುಖವುಣ್ಣುತ್ತಾ ಬೆಂಗಳೂರಿಗೆ ವಾಪಸಾದೆ' ಎನ್ನುವಾಗ ಅವರ ಕಂಗಳಲ್ಲಿ ದಿವ್ಯ ಅನುಭೂತಿಯನ್ನೊಂದನ್ನು ಸಾಕ್ಷಾತ್ಕರಿಸಿಕೊಂಡ ಧನ್ಯತೆ ಕಾಣುತ್ತಿತ್ತು. ❖

ಗುಳೇದಗುಡ್ಡದ ಖಣ





ಎಚ್.ಎಸ್.ಘಂಟಿ



ಖಣ ಹೊದಿಕೆಯ ಡೈರಿ

ವಸ್ತ್ರ ವೈಭವ

ಉಟ್ಟರೆ ಇಳಕಲ್ ಸೀರೇನೆ ಉಡಬೇಕು, ತೊಟ್ಟರೆ ಗುಳೇದಗುಡ್ಡ ಖಣನೆ ತೊಡಬೇಕು ಎನ್ನುವ ಗಾದೆ ಪ್ರಚಲಿತದಲ್ಲಿದೆ. ಮೈಗುಣಕ್ಕೆ ಅನುಗುಣವಾಗಿ ಹಿತ ನೀಡುವ ಈ ಕುಬಸಗಳನ್ನು ತೊಡುವುದೇ ಒಂದು ಸಂಭ್ರಮ.

ಖಣಗಳ ವಿನ್ಯಾಸವು ಕೋಲುಗಳನ್ನು ಆಧರಿಸಿರುತ್ತದೆ. ನಾಲ್ಕು ಕೋಲಿನಲ್ಲಿ ತೆಂಗಿನಗರಿ, ಬಾರಕೋಲ. ಐದು ಕೋಲಿನಲ್ಲಿ ತೇರು, ರುದ್ರಾಕ್ಷೀ, ಆರು ಕೋಲಿನಲ್ಲಿ ಏಲಕ್ಕಿ, ಕರಿಮನಿ, ಬಳ್ಳಿ. ಏಳು ಕೋಲಿನಲ್ಲಿ ಕಳವಾರ, ಹೂ, ಸೂಜಿ ಮಲ್ಲಿಗೆ, ದೊಡ್ಡ ಹರಡಿ, ಎಂಟು ಕೋಲಿನಲ್ಲಿ ತೇರು, ಪಿಟ್ಟ ತೇರು, ಗೊಡ್ಡ ಯಾಲಕ್ಕಿ, ಬಳ್ಳಿ ಕವರ, ಸಿತಾರಿ ಇತ್ಯಾದಿ, ಒಂಭತ್ತು ಕೋಲಿನಲ್ಲಿ ತುಳಸಿಪಾನ, ನವಲಪರಿ, ಇತ್ಯಾದಿ. ಹತ್ತು ಕೋಲಿನಲ್ಲಿ ಕ್ಯಾದಗಿ, ತೇರು, ಕಳವರ. ಸೂಜಿ ಮಲ್ಲಿಗಿ, ರುಂಡಮಾಲಿ, ಸಿದ್ದೇಶ್ವರ ಮುಕುಟ ಇತ್ಯಾದಿ. ಹದಿನೈದು ಕೋಲಿನಲ್ಲಿ ಸುದರ್ಶನ ಚಕ್ರ, ಕಳಾವರ, ಸುರ್ಯನಾರಾಯಣ, ಬಳ್ಳಿ ಹದಿನೆಂಟು ಕೋಲಿನಲ್ಲಿ ನವಿಲು, ಆನೆ, ಬಾತುಕೋಳಿ, ಈಶ್ವರ, ಬಸವಣ್ಣ ಇತ್ಯಾದಿ.ಇಪ್ಪತ್ತೈದನೇ ಕೋಲಿನಲ್ಲಿ ಭಾವೈಕ್ಯ ಬಿಂಬಿಸುವ ಜೈ ಹಿಂದ್, ಭಾರತ ಮಾತಾ ಚಿತ್ತಾರಗಳನ್ನು ಖಣಗಳಲ್ಲಿ ಮೂಡಿಸಲಾಗುತ್ತದೆ.

ಖಣದಲ್ಲಿ ಸಣ್ಣ ದಡಿ, ದೊಡ್ಡ ದಡಿಯೆಂದು ಎರಡು ಬಗೆ. ಸಣ್ಣ ದಡಿಯಲ್ಲಿ ವಡ್ಡಗಲದ ಗಾತ್ರ ದೊಡ್ಡದಾಗಿರುತ್ತದೆ. ದೊಡ್ಡ ದಡಿ(ಅಂಚು)ಯ ಭಾಗ ಅಗಲವಾಗಿರುತ್ತದೆ. ಖಣ ತಯಾರಿಕೆಯಲ್ಲಿ ಪುರುಷನು ಮಗ್ಗದಲ್ಲಿ ಕುಳಿತು ನೇಯುತ್ತಿದ್ದರೆ, ಅದಕ್ಕೆ ಪೂರಕವಾಗಿ ಉಂಕಿ ಹೂಡುವುದು,ಹಣಗಿ ಕೆಚ್ಚುವುದು, ಬಣ್ಣ ಎದ್ದುವುದು, ನೂಲು ತೆಗೆಯುವುದು, ಎಳೆ ಜೋಡಿಸುವುದು.ಕಂಡಿಕೆ ಸುತ್ತುವುದು ಬಹು ಮುಖ್ಯ ಹಂತ ಇದನ್ನು ಕುಟುಂಬದ ಮಹಿಳೆಯರು ಮಾಡುತ್ತಾರೆ.

ಖಣದ ಸ್ವರೂಪದಲ್ಲಿ ಬದಲಾವಣೆ: ಆಧುನಿಕತೆಗೆ ತಕ್ಕಂತೆ ಖಣಗಳ ಸ್ವರೂಪವನ್ನು ನೇಕಾರರು ಬದಲಾಯಿಸಿಕೊಳ್ಳುತ್ತಿದ್ದಾರೆ. ರೇಷ್ಮೆ ಖಣ ನೇಯುತ್ತಾರೆ. ಅದರಲ್ಲಿಯೇ ಸೀರೆ, ಸನ್ಮಾನದ ಶಾಲು, ಚೂಡಿದಾರ ಮುಂತಾದ ರೀತಿಯಲ್ಲಿ ಬದಲಾಯಿಸಿ ನೇಯುತ್ತಿದ್ದಾರೆ. ಈ ನಿಟ್ಟಿನಲ್ಲಿ ಗುಳೇದಗುಡ್ಡ ಪಟ್ಟಣದ ಎಂಜಿನಿಯರ್ ರಮೇಶ ಅಯೋದಿ ಖಣದಲ್ಲಿ ಡೈರಿ, ವ್ಯಾನಿಟಿ ಬ್ಯಾಗ್, ಕರವಸ್ತ್ರ, ಮೊಬೈಲ್ ಪೌಚ್ ಮುಂತಾದವುಗಳನ್ನು ತಯಾರಿಸುತ್ತಿದ್ದಾರೆ.

ವ್ಯಾಪಾರ : ಮಹಾರಾಷ್ಟದ ನಾಸಿಕ, ಪುಣೆ, ಸೋಲಾಪುರ, ಕೊಲ್ಹಾಪೂರ, ಫಂಡರಾಪೂರ, ನಿಪ್ಪಾಣಿ, ಮುಂಬಯಿ ಮುಂತಾದ ನಗರ ಹಾಗೂ ಕೋಲ್ಕತ್ತ, ಹೈದರಾಬಾದ್, ಗುಜರಾತ್ ಮತ್ತು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಖಣಗಳಿಗೆ ಬೇಡಿಕೆ ಇದೆ. ಎಲ್ಲ ಪ್ರದೇಶಗಳಿಗೂ ಕೈ ಮಗ್ಗದಿಂದ ತಯಾರಾದ ರೇಷ್ಮೆ ಖಣಗಳನ್ನು ತಯಾರಿಸಿ ಸರಬರಾಜು ಮಾಡಲಾಗುತ್ತಿದೆ.

ಜಿಐ ಟ್ಯಾಗ್ 210 : ಗುಳೇದಗುಡ್ಡದ ಖಣಕ್ಕೆ ಭಾರತ ಸರ್ಕಾರದಿಂದ ಜಿಐ ಟ್ಯಾಗ್ 210 ಸಂಕೇತವನ್ನು ನೀಡಲಾಗಿದೆ. ಮಾರುಕಟ್ಟೆಗೆ ಉತ್ತೇಜನ ದೊರೆತಂತೆ ಆಗಿದೆ. ಗುಳೇದಗುಡ್ಡ ಖಣದ ಚಿತ್ರ ಇರುವ ಲಕೋಟೆಯನ್ನು ಭಾರತೀಯ ಅಂಚೆ ಇಲಾಖೆ ಹೊರ ತಂದಿದೆ. ❖



ನಯವಂಚನೆಯ ಕ್ರಿಪ್ಟೊ ಜಾಲ

ಸಂತೋಷ ಜಿಗಳಿಕೊಪ್ಪ

'ವಿಶ್ವದ ಎಲ್ಲ ದೇಶಗಳು ತಮ್ಮ ವಹಿವಾಟಿಗೆ ಅನುಕೂಲವಾಗಲೆಂದು ಕರೆನ್ಸಿಗಳನ್ನು ರೂಪಿಸಿಕೊಂಡಿವೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಇತ್ತೀಚಿನ ದಿನಗಳಲ್ಲಿ 'ಕ್ರಿಪ್ಟೊ' ಕರೆನ್ಸಿ ಹೆಚ್ಚು ಪರಿಚಯಕ್ಕೆ ಬಂದಿದೆ. 2022 ಜನವರಿಯಲ್ಲಿ ಸ್ನೇಹಿತೆಯೊಬ್ಬರು ಕ್ರಿಪ್ಟೊ ಬಗ್ಗೆ ತಿಳಿಸಿದ್ದರು. ಕ್ರಿಪ್ಟೊದಲ್ಲಿರುವ ಬಿಟ್ ಕಾಯಿನ್, ಥೆರಮ್, ಎಕ್ಸ್‌ಆರ್‌ಪಿ, ಬಿಎನ್‌ಬಿ, ಟಿಥರ್, ಕಾರ್ಡನೊ, ಲೈಟ್‌ಕಾಯಿನ್, ಸೋಲಾನ ಹಾಗೂ ಇತರೆ ಪ್ರಕಾರಣಗಳ ಬಗ್ಗೆ ಮಾಹಿತಿ ನೀಡಿದ್ದರು. 1 ಬಿಟ್ ಕಾಯಿನ್ ಬೆಲೆ ₹ 20 ಲಕ್ಷದಿಂದ ₹ 25 ಲಕ್ಷವೆಂದು (ಸದ್ಯ ಬೆಲೆ ₹ 36 ಲಕ್ಷವಿದೆ) ಹೇಳಿದ್ದರು. ಕ್ರಿಪ್ಟೊ ಹೂಡಿಕೆಗೆ ತೀರ್ಮಾನಿಸಿ, ಅದರ ವ್ಯವಹಾರದ ಬಗ್ಗೆ ಜಾಲತಾಣಗಳಲ್ಲಿ ಹುಡುಕಾಟ ಆರಂಭಿಸಿದ್ದೆ.'

'ಈ ನಡುವೆ ಕ್ರಿಪ್ಟೊ ಹೂಡಿಕೆ ನಿರ್ವಹಿಸುವ ಕಂಪನಿಯಿಂದ ನನ್ನ ಮೊಬೈಲ್‌ಗೆ ಸಂದೇಶ ಬಂದಿತ್ತು. 'ಕ್ರಿಪ್ಟೊ ಹೂಡಿಕೆ ಮಾಡಿ, ಕೆಲವೇ ದಿನಗಳಲ್ಲಿ ದುಪ್ಪಟ್ಟು ಲಾಭ ಗಳಿಸಿ' ಎಂದು ಬರೆಯಲಾಗಿತ್ತು. ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ನನಗೆ ಬರುವ ವೇತನ ತಿಂಗಳಿಗೆ ₹85 ಸಾವಿರ. ಖರ್ಚಿಗೆ ₹ 25 ಸಾವಿರ ಸಾಕಾಗುತ್ತದೆ. ಉಳಿದ ಹಣವನ್ನು ಕ್ರಿಪ್ಟೊಗೆ ಹೂಡಿಕೆ ಮಾಡಲು ನಿರ್ಧರಿಸಿ, ಕರೆ ಮಾಡಿದವರನ್ನು ಸಂಪರ್ಕಿಸಿದೆ. ಬಿಟ್ ಕಾಯಿನ್ ಹಾಗೂ ಬಿಎನ್‌ಬಿ ಮೇಲೆ ಹೂಡಿಕೆ ಮಾಡಲು ಸಲಹೆ ನೀಡಿದರು. ನೋಂದಣಿಗಾಗಿ ಟೆಲಿಗ್ರಾಂ ಆ್ಯಪ್ ಲಿಂಕ್ ಕಳುಹಿಸಿದರು. ವೈಯಕ್ತಿಕ ಮಾಹಿತಿ ಭರ್ತಿ ಮಾಡಿ, ಆರಂಭದಲ್ಲಿ ₹ 5 ಲಕ್ಷ ಹೂಡಿಕೆ ಮಾಡಿದ್ದೆ.'

'15 ದಿನ ಬಿಟ್ಟು ಕರೆ ಮಾಡಿದ್ದ ಆರೋಪಿಗಳು, 'ನಿಮ್ಮ ಹಣ ದುಪ್ಪಟ್ಟು ಆಗಿದೆ. ಇದೇ ಹಣವನ್ನು ಮರು ಹೂಡಿಕೆ ಮಾಡಿದರೆ, 15 ದಿನ ಬಿಟ್ಟು ₹ 20 ಲಕ್ಷ ಆಗುತ್ತದೆ' ಎಂದಿದ್ದರು. ಅವರ ಮಾತಿಗೆ ಒಪ್ಪಿದೆ. ಜೊತೆಗೆ, ಪ್ರತ್ಯೇಕವಾಗಿ ಪುನಃ ₹ 10 ಲಕ್ಷ ಜಮೆ ಮಾಡಿದೆ. ತಿಂಗಳ ನಂತರ ಮತ್ತೆ, ಹಣ ದುಪ್ಪಟ್ಟಾಗುವ ಆಸೆ ತೋರಿಸಿ ಹೂಡಿಕೆಗೆ ಪ್ರಚೋದಿಸಿದ್ದರು. ಒಂದೂವರೆ ವರ್ಷದವರೆಗೆ ಹೂಡಿಕೆ ಹೆಸರಿನಲ್ಲಿ ಹಂತ ಹಂತವಾಗಿ ನನ್ನಿಂದ ₹ 56 ಲಕ್ಷ ಪಡೆದಿದ್ದರು.'

'ನನ್ನ ವೇತನದಲ್ಲಿ ಉಳಿಸಿದ್ದ ಹಣ ಹಾಗೂ ಸ್ನೇಹಿತರ ಬಳಿ ಸಾಲ ಪಡೆದಿದ್ದೆ. 2023ರ ಅಕ್ಟೋಬರ್‌ನಲ್ಲಿ ಹಣದ ಅವಶ್ಯಕತೆ ಇತ್ತು. ಹೀಗಾಗಿ, ನನ್ನ ಹಣವನ್ನು ವಾಪಸು ನೀಡುವಂತೆ ಆರೋಪಿಗಳನ್ನು ಕೋರಿದ್ದೆ. 'ಸದ್ಯದಲ್ಲೇ ಕ್ರಿಪ್ಟೊ ಕರೆನ್ಸಿ ಬೆಲೆ ಶೇ 300ರಷ್ಟು ಏರಿಕೆ ಆಗಲಿದೆ. ಸ್ವಲ್ಪ ದಿನ ಕಾಯಿರಿ' ಎಂದಿದ್ದರು. 15 ದಿನಗಳಾದರೂ ಉತ್ತರ ಬರಲಿಲ್ಲ. ಕರೆ ಮಾಡಲು ಯತ್ನಿಸಿದಾಗ, ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಈ ಬಗ್ಗೆ ಸ್ನೇಹಿತರಿಗೆ ವಿಷಯ ತಿಳಿಸಿದ್ದೆ. ಇದೊಂದು ಕ್ರಿಪ್ಟೊ ಮೋಸದ ಜಾಲವೆಂದು ಹೇಳಿದರು. ಪತಿಗೆ ವಿಷಯ ಗೊತ್ತಾಗುತ್ತಿದ್ದಂತೆ ಬೈದರು. ಠಾಣೆಗೆ ಹೋಗಿ ದೂರು ನೀಡಿದೆವು. ಈ ವರೆಗೂ ಆರೋಪಿಗಳು ಸಿಕ್ಕಿಲ್ಲ. ದುಡಿದು ಉಳಿಸಿದ್ದ ಹಣ ವಂಚಕರ ಪಾಲಾಯಿತು. ಸ್ನೇಹಿತರಿಂದ ಪಡೆದಿರುವ ಸಾಲವನ್ನು ಪ್ರತಿ ತಿಂಗಳು ಕಂತಿನಲ್ಲಿ ಕೊಟ್ಟು ತೀರಿಸುತ್ತಿದ್ದೇನೆ. ಹೆಚ್ಚು ಹಣ ಗಳಿಸಬೇಕು ಎಂಬ ಆಸೆಯಿಂದ ₹ 56 ಲಕ್ಷ ಕಳೆದುಕೊಂಡಿದ್ದೇನೆ. ನೀವು ಎಚ್ಚರಿಯಿಂದ ಇರಿ'

ನೊಂದ ಮಹಿಳೆ

'ಕ್ರಿಪ್ಟೊ' ಕರೆನ್ಸಿ ಹೆಸರಿನಲ್ಲಿ ನಾನಾ ಆಮಿಷ

'ಕಡಿಮೆ ಸಮಯದಲ್ಲಿ ಹೆಚ್ಚು ಹಣ ಗಳಿಸಬೇಕೆಂದು ಹಲವರು ಯೋಚಿಸುತ್ತಿದ್ದಾರೆ. ಇಂಥವರನ್ನೇ ಗುರಿಯಾಗಿಸಿ ಸೈಬರ್ ವಂಚಕರು, ಕ್ರಿಪ್ಟೊ ಕರೆನ್ಸಿ ಅಸ್ತ್ರ ಬಳಸಿ ಹಣ ದೋಚುತ್ತಿದ್ದಾರೆ. 2023ರಲ್ಲಿ ಕ್ರಿಪ್ಟೊ ವಂಚನೆಗೆ ಸಂಬಂಧಪಟ್ಟಂತೆ 200ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಹೊರ ರಾಜ್ಯ ಹಾಗೂ ಹೊರ ದೇಶಗಳಲ್ಲಿರುವ ಆರೋಪಿಗಳು, ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಜನರನ್ನು ಬಲೆಗೆ ಬೀಳಿಸಿಕೊಳ್ಳುತ್ತಿದ್ದಾರೆ. ಇಂಥ ಜಾಲದ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು. ಯಾರಾದರೂ ಹಣ ದುಪ್ಪಟ್ಟು ಮಾಡುವ ಆಮಿಷವೊಡ್ಡಿದರೆ, ಸಮೀಪದ ಠಾಣೆಗೆ ದೂರು ನೀಡಿ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸೈಬರ್ ಅಪರಾಧವಾದರೆ ದೂರು ನೀಡಿ: **112 ಅಥವಾ 1930**
ಜಾಲತಾಣ: https://cybercrime.gov.in/

ನಿಮಿರುವಿಕೆಯ ಸಮಸ್ಯೆ

ಸ್ಪಂದನ



ಡಾ. ವೀಣಾ ಎಸ್. ಭಟ್

1. ನಾನು ಮದುವೆಯಾಗಿ 7 ವರ್ಷಗಳು ಕಳೆದಿವೆ. ಆದರೆ ಮಗುವಾಗಿಲ್ಲ. ನನ್ನ ಪತಿಯ ಅಧಿಕ ತೂಕದಿಂದಾಗಿ ನಿಮಿರುವಿಕೆಯ ಸಮಸ್ಯೆಯಿಂದ (erectile dysfunction (ED), premature ejaculation) ಬಳಲುತ್ತಿದ್ದಾರೆ. ಅವರ ವಯಸ್ಸು 35 ವರ್ಷ.

ಉತ್ತರ:-ನಿಮಗೀಗಾಗಲೇ ಮದುವೆಯಾಗಿ ಏಳು ವರ್ಷಗಳೇ ಸಂದಿವೆ. ನಿಮ್ಮ ವಯಸ್ಸು ತಿಳಿಸಿಲ್ಲ. ನಿಮ್ಮ ಪತಿಗೆ ಅಧಿಕ ತೂಕ ಎಂದು ತಿಳಿಸಿದ್ದೀರಿ. ಆದರೆ ನಿಮಿರುವಿಕೆಯ ಸಮಸ್ಯೆ ಮೊದಲಿನಿಂದಲೇ ಇತ್ತೆ? ಸ್ಥೂಲಕಾಯ ಮದುವೆಯ ನಂತರ ಆಗಿದೆಯೇ ಮುಂತಾದ ವಿವರಗಳಿಲ್ಲ. ನಿಮ್ಮ ಪತಿಗೆ ಶೀಘ್ರಸ್ಖಲನವಾಗುತ್ತದೆ ಎಂದು ತಿಳಿಸಿದ್ದೀರಿ. ಅತಿಯಾದ ಉದ್ವೇಗದಿಂದಾಗಿ ಶೀಘ್ರ ಸ್ಖಲನವಾಗಬಹುದು. ಲೈಂಗಿಕಕ್ರಿಯೆಗೆ ಸಜ್ಜಾಗುತ್ತಿದ್ದ ಹಾಗೆ ಅದಕ್ಕೂ ಮುನ್ನವೇ ಸ್ಖಲಿಸುತ್ತಾರೆ. ನಿಮ್ಮಿಬ್ಬರಿಗೂ ಬಂಜೆತನ ಮತ್ತು ಷಂಡತನಕ್ಕೆ ಇರುವ ವ್ಯತ್ಯಾಸ ತಿಳಿದಿರಲಿ.

ಮಕ್ಕಳಾಗುವ ಪ್ರಕ್ರಿಯೆಯಲ್ಲಿ ಹೆಣ್ಣಿನಲ್ಲಿ ಫಲವಂತಿಕೆಯೆಂದರೆ ಪ್ರತಿತಿಂಗಳು ಅಂಡಾಶಯದಿಂದ ಅಂಡೋತ್ಪತ್ತಿಯಾಗುವುದು, ಗರ್ಭನಾಳ ಗರ್ಭಕೋಶದ ಕಾರ್ಯಕ್ಷಮತೆ ಸರಿ ಇರುವುದು, ಪೂರಕ ಹಾರ್ಮೋನುಗಳ ಮಟ್ಟ ಸರಿಯಾಗಿರುವುದು ಇವೆಲ್ಲ ಇದ್ದರೆ ಬಂಜೆತನಕ್ಕೆ ಸ್ತ್ರೀಯರು ಕಾರಣರಲ್ಲ.

ಪುರುಷರಲ್ಲಿ ಸಶಕ್ತ ವೀರ್ಯಾಣುಗಳಿರದೇ ಇದ್ದಲ್ಲಿ ಅದನ್ನು ಪುರುಷ ಬಂಜೆತನ ಎನ್ನುತ್ತಾರೆ. ಷಂಡತನ ಎಂದರೆ ಲೈಂಗಿಕ ಸಂಪರ್ಕ ಸಾಧ್ಯವಾಗದೇ ಇರುವುದು. ಯೋನಿಪ್ರವೇಶ ಸರಿಯಾಗಿ ಸಾಧ್ಯವಿಲ್ಲದಿದ್ದರೂ ವೀರ್ಯವು ಯೋನಿತುಟಿಗಳ ಬಳಿ ಚೆಲ್ಲಿದರೂ ವೀರ್ಯಾಣಗಳು ಯೋನಿಯಿಂದ ಗರ್ಭಕೋಶದೊಳಗೆ ಚಲಿಸುವ ಸಾಮರ್ಥ್ಯ ಹೊಂದಿದ್ದು, ಗರ್ಭಧಾರಣೆಯಾಗಬಹುದು.

ಈಗ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಬಂಜೆತನ ತಜ್ಞರು ಮತ್ತು ಬಂಜೆತನಕ್ಕೆ ಚಿಕಿತ್ಸೆ ಕೊಡುವ ಚಿಕಿತ್ಸಾಲಯಗಳು ಸಾಕಷ್ಟು ಇವೆ. ನೀವು ಅಂಥ ತಜ್ಞವೈದ್ಯರನ್ನು ಸಂಪರ್ಕಿಸಿ. ನಿಮ್ಮ ಪತಿಯಲ್ಲಿ ಆರಂಭದಿಂದಲೇ ನಿಮಿರು ದೌರ್ಬಲ್ಯ ಇದ್ದರೆ ಪರೀಕ್ಷಿಸಿಕೊಳ್ಳಿ. ಲೈಂಗಿಕ ಬೆಳವಣಿಗೆಯಲ್ಲೇನಾದರೂ ವ್ಯತ್ಯಾಸವಿದೆಯೇ? ಹಾರ್ಮೋನುಗಳ ತೊಂದರೆಯಿದೆಯೇ ಎಂದು ತಪಾಸಣೆಗೆ ಒಳಪಡಲಿ.

ಇತ್ತೀಚೆಗೆ ಏನಾದರೂ ಈ ರೀತಿ ನಿಮಿರುದೌರ್ಬಲ್ಯದಿಂದ ಬಳಲುತ್ತಿದ್ದರೆ ಅವರಿಗಿರುವ ಬೊಜ್ಜು ಜೊತೆಗೆ ಮಧುಮೇಹದಿಂದಲೂ ಬಂದಿರಬಹುದು. ನಿಮಿರುವಿಕೆಗೆ ಶಿಶ್ನಕ್ಕಾಗುವ ರಕ್ತಸಂಚಾರ, ನರಮಂಡಲದ ಕಾರ್ಯಕ್ಷಮತೆ, ಹಾರ್ಮೋನುಗಳ ಪ್ರಮಾಣ ಎಲ್ಲವೂ ಸರಿಯಾಗಿ ಇರಬೇಕು. ಯಾವುದೇ ಹಂತದಲ್ಲಿ ವ್ಯತ್ಯಾಸ ಆದರೂ ನಿಮಿರುದೌರ್ಬಲ್ಯ ಉಂಟಾಗಬಹುದು.

ತಜ್ಞರ ಸಲಹೆಮೇರೆಗೆ ಅವರು ಜೀವನಶೈಲಿ ಬದಲಾಯಿಸಿಕೊಳ್ಳಲಿ. ಸೂಕ್ತಆಹಾರ ಹಾಗೂ ಉತ್ತಮವಾದ ನಿಯಮಿತ ದೈಹಿಕ ಚಟುವಟಿಕೆಗಳಿಂದ ಅದು ಖಂಡಿತ ಸಾಧ್ಯವಾಗುತ್ತದೆ.

ಧೂಮಪಾನ, ಮದ್ಯಪಾನಗಳಿದ್ದರೂ ಅತಿಯಾಗಿ ಗುಟ್ಕಾ ಇನ್ನಿತರ ತಂಬಾಕುಯುಕ್ತ ವಸ್ತುಗಳನ್ನು ಹೆಚ್ಚು ಹೆಚ್ಚು ಬಳಸುತ್ತಿದ್ದರೂ ಷಂಡತನ ಬರಬಹುದು. ದೈಹಿಕ ತಪಾಸಣೆಯೂ ಆಗಬೇಕು. ❖

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ.
ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ರಸಸ್ವಾದ

ನಾಲಿಗೆಗೆ ಖುಷಿ ಕೊಡುವ 'ಮಟನ್' ಖಾದ್ಯಗಳು

ಈಗ ಚಳಿಗಾಲ. ಚಳಿಗಾಲದಲ್ಲಿ ಖಾರದ ಖಾದ್ಯಗಳು ಬಾಯಿಗೂ ದೇಹಕ್ಕೂ ಹಿತವೆನ್ನಿಸುತ್ತವೆ. ಅದರಲ್ಲೂ ಮಾಂಸಾಹಾರಗಳಂತೂ ಚಳಿಗಾಲಕ್ಕೆ ಹೇಳಿ ಮಾಡಿಸಿದಂತಹವು. ಖಾರ, ಖಾರವಾಗಿ ಮಸಾಲೆ ಅರೆದು ಮಾಡಿದ ಖಾದ್ಯಗಳು ಚಳಿಯನ್ನು ಓಡಿಸುತ್ತವೆ. ನಾಲಿಗೆಗೆ ಮತ್ತಷ್ಟು ರುಚಿ ಕೊಡುವ ಮಟನ್ ಬಿರಿಯಾನಿ, ಮಟನ್ ಕರಿ, ಕೋಳಿ ಸಾರಿನ ರೆಸಿಪಿ ನೀಡಿದ್ದಾರೆ ದೀಪಕ್ ಎನ್



ಮಟನ್ ಬಿರಿಯಾನಿ

ಬೇಕಾಗುವ ಸಾಮಗ್ರಿಗಳು: ಕುರಿ ಮಾಂಸ – ಅರ್ಧ ಕೆ.ಜಿ, ಬಾಸುಮತಿ ಅಕ್ಕಿ – 1/2 ಕೆ.ಜಿ, ಶುಂಠಿ - ಬೆಳ್ಳುಳ್ಳಿ ಪೇಸ್ಟ್ 2 ಚಮಚ, ಕೊತ್ತಂಬರಿಸೊಪ್ಪು, ಪುದಿನಸೊಪ್ಪು, ಹಸಿಮೆಣಸಿನಕಾಯಿ – 15, ಮೊಸರು – 2 ಚಮಚ, ಖಾರದಪುಡಿ – 2 ಚಮಚ, ಕೊತ್ತಂಬರಿಪುಡಿ – 1 ಚಮಚ, ಅರಿಸಿನ ಪುಡಿ – ಸ್ವಲ್ಪ, ಬಿರಿಯಾನಿ ಮಸಾಲೆ – 2 ಚಮಚ, ಪತ್ರೆ – 2 ಎಸಳು, ಗೋಡಂಬಿ – 10, ಕಾಳುಮೆಣಸು – 20, ಏಲಕ್ಕಿ – 2, ಲವಂಗ – 5, ಚಕ್ಕೆ – 2 ಇಂಚು ಉದ್ದದ್ದು, ಪಲಾವ್ ಎಲೆ – 2, ಮೊರಾಠಿ ಮೊಗ್ಗು – 2, ಈರುಳ್ಳಿ – 5, ಟೊಮೆಟೊ – 3, ಎಣ್ಣೆ, ತುಪ್ಪ, ಸಾಸಿವೆ, ಉಪ್ಪು ರುಚಿಗೆ ತಕ್ಕಷ್ಟು.

ತಯಾರಿಸುವ ವಿಧಾನ: ಚೆನ್ನಾಗಿ ತೊಳೆದ ಮಾಂಸಕ್ಕೆ, ನೀರು, ಅರಿಸಿನ ಪುಡಿ, ಸ್ವಲ್ಪ ಉಪ್ಪನ್ನು ಬೆರೆಸಿ ಕುಕರ್‌ನಲ್ಲಿ ಚೆನ್ನಾಗಿ ಬೇಯಿಸಿಕೊಳ್ಳಿ. ಈರುಳ್ಳಿ, ಹಸಿಮೆಣಸಿನಕಾಯಿ, ಟೊಮೆಟೊ, ಕೊತ್ತಂಬರಿ ಮತ್ತು ಪುದಿನ ಕತ್ತರಿಸಿಟ್ಟುಕೊಳ್ಳಿ. ಅಗಲವಾದ ತೆರೆದ ಪಾತ್ರೆಗೆ ಎಣ್ಣೆ ಮತ್ತು ತುಪ್ಪ ಸಮ ಪ್ರಮಾಣದಲ್ಲಿ ಹಾಕಿ ಕಾದ ನಂತರ ಸಾಸಿವೆ ಸಿಡಿಸಿ ಚಕ್ಕೆ, ಲವಂಗ, ಮೆಣಸು, ಏಲಕ್ಕಿ, ಪತ್ರೆ, ಪಲಾವ್ ಎಲೆ, ಮರಾಠಿ ಮೊಗ್ಗು, ಹಸಿಮೆಣಸಿನಕಾಯಿ, ಗೋಡಂಬಿ, ಈರುಳ್ಳಿ ಹಾಕಿ ಕಂದು ಬಣ್ಣ ಬರುವರೆಗೆ ಹುರಿದುಕೊಳ್ಳಿ. ನಂತರ ಬೇಯಿಸಿದ ಮಾಂಸ, ಶುಂಠಿ - ಬೆಳ್ಳುಳ್ಳಿ ಪೇಸ್ಟ್, ಉಪ್ಪು, ಬಿರಿಯಾನಿ ಮಸಾಲೆ, ಖಾರದ ಪುಡಿ, ಕೊತ್ತಂಬರಿ ಪುಡಿ, ಅರಿಸಿನ ಪುಡಿ, ರುಬ್ಬಿದ ಕೊತ್ತಂಬರಿ ಮತ್ತು ಪುದಿನ, 2 ಕಪ್ ಮೊಸರು ಹಾಕಿ ಹಸಿ ವಾಸನೆ ಹೋಗುವತನಕ ಹುರಿದುಕೊಳ್ಳಿ. ನಂತರ ಟೊಮೆಟೊ ಹಾಕಿ ಮತ್ತೆ ಹುರಿಯಿರಿ. ಎಣ್ಣೆ ಬಿಡುವವರೆಗೂ ಕುದಿಸಿ. ಅಗತ್ಯಕ್ಕೆ ತಕ್ಕಷ್ಟು ಮಾಂಸ ಬೇಯಿಸಿದ ನೀರನೇ ಬಳಸಿಕೊಳ್ಳಿ. ಅಕ್ಕಿಯನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿ ನೋಡಿ ಉಪ್ಪು, ಖಾರ ಕಡಿಮೆಯಿದ್ದನ್ನು ಸೇರಿಸಿ. ಅಕ್ಕಿ ಮುಕ್ಕಾಲು ಭಾಗ ಬೆಂದಾಗ (ನೀರು ಕಡಿಮೆಯಾದಾಗ) ಕತ್ತರಿಸಿದ ಕೊತ್ತಂಬರಿ ಮತ್ತು ಪುದಿನವನ್ನು ಉದುರಿಸಿ ಮುಚ್ಚಳ ಮುಚ್ಚಿ ಕುಕರ್ ಅನ್ನು ಬೇಯಲು ಇಡಿ. 15ರಿಂದ 20 ನಿಮಿಷದ ನಂತರ ಮುಚ್ಚಳ ತೆಗೆದು ಚೆನ್ನಾಗಿ ಮಿಶ್ರಣ ಮಾಡಿ.



ಮಟನ್ ಕರಿ

ಬೇಕಾಗುವ ಸಾಮಗ್ರಿಗಳು: ಈರುಳ್ಳಿ – 2, ಟೊಮೆಟೊ – 2, ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 3 ಚಮಚ, ಗರಂಮಸಾಲೆ – 2 ಚಮಚ, ಕೊತ್ತಂಬರಿ ಪುಡಿ – 2 ಚಮಚ, ಜೀರಿಗೆ ಪುಡಿ – 2 ಚಮಚ, ಅರಿಸಿನ – ಅರ್ಧ ಚಮಚ, ಖಾರದಪುಡಿ – ಅರ್ಧ ಚಮಚ, ಕುರಿ ಮಾಂಸ – ಅರ್ಧ ಕೆ.ಜಿ, ಉಪ್ಪು – ರುಚಿಗೆ, ಎಣ್ಣೆ– ಸ್ವಲ್ಪ, ಕೊತ್ತಂಬರಿ ಸೊಪ್ಪು.

ತಯಾರಿಸುವ ವಿಧಾನ: ಕುಕರ್‌ನಲ್ಲಿ 1 ಕೆ.ಜಿ ಮಟನ್, 2 ಕಪ್ ನೀರು ಅದಕ್ಕೆ ಸ್ವಲ್ಪ ಉಪ್ಪು ಮತ್ತು ಅರಿಸಿನ ಪುಡಿ ಹಾಕಿ ಬೇಯಿಸಿ ಇಟ್ಟುಕೊಳ್ಳಿ. ಪಕ್ಕದಲ್ಲಿ ಮತ್ತೊಂದು ಪಾತ್ರೆಯಲ್ಲಿ ಎಣ್ಣೆ ಹಾಕಿ ಮಧ್ಯಮ ಉರಿಯಲ್ಲಿ ಬಿಸಿ ಮಾಡಿ. ಅದಕ್ಕೆ ಈರುಳ್ಳಿ ಹಾಕಿ ಬಣ್ಣ ಬದಲಾಗುವವರೆಗೂ ಹುರಿಯಿರಿ. ನಂತರ ಟೊಮೆಟೊ, ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಬೆರೆಸಿ ಹುರಿದುಕೊಳ್ಳಿ. ಇದಕ್ಕೆ ಯಾವುದೇ ರೀತಿಯ ಮಸಾಲೆ ರುಬ್ಬುವ ಅಗತ್ಯ ಇರುವುದಿಲ್ಲ. ಅದಕ್ಕೆ ಅರ್ಧ ಚಮಚ ಅರಿಸಿನ ಪುಡಿ, 1 ಚಮಚ ದನಿಯಾ ಪುಡಿ, 2 ಚಮಚ ಕಾರದ ಪುಡಿ, ಅರ್ಧ ಚಮಚ ಗರಂಮಸಾಲೆ, ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ, ಎಣ್ಣೆ ಬಿಡುವವರೆಗೂ ಕುದಿಸಿ. ಕುರಿ ಮಾಂಸವನ್ನು ಈ ಮಿಶ್ರಣಕ್ಕೆ ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ. ಮಸಾಲೆ ಹೋಳುಗಳಿಗೆ ಹಿಡಿಯುವವರೆಗೆ ಕೈಯಾಡಿಸಿ. ನಂತರ ಒಂದು ಕಪ್ ನೀರು ಹಾಕಿ ಮತ್ತೆ ಎಲ್ಲವನ್ನೂ ಮಿಶ್ರಣ ಮಾಡಿ ಸಣ್ಣ ಉರಿಯಲ್ಲಿ ಕುರಿ ಮಾಂಸ ಬೇಯುವವರೆಗೆ ಬೇಯಿಸಿ. ಚೆನ್ನಾಗಿ ಕುದಿದು, ಮಾಂಸ ಬೆಂದು ಮಂದ ಆಗುವವರೆಗೂ ಕುದಿಸಿ ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿ. ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಚಪ್ಪಾತಿ, ದೋಸೆ, ಮುದ್ದೆ, ಅನ್ನದ ಜೊತೆಗೆ ಗ್ರೇವಿ ಬೆರೆಸಿಕೊಳ್ಳಬೇಕಾದರೆ ಮಾತ್ರ 2 ಕಪ್ ಮಟನ್ ಬೇಯಿಸಿದ ನೀರನ್ನು ಹಾಕಿಕೊಂಡು ಕುದಿಸಬೇಕು. ತಳ ಹಿಡಿಯದಂತೆ ಕೈಯಾಡಿಸುತ್ತಾ ಇರಬೇಕು.

ಕೋಳಿ ಸಾರು

ಸಾಮಗ್ರಿ: ಚಿಕನ್ 1 ಕೆ.ಜಿ, ಶುಂಠಿ 2 ಇಂಚು ಉದ್ದದ್ದು, ಬೆಳ್ಳುಳ್ಳಿ 2 ಉಂಡೆ, ಕೊತ್ತಂಬರಿ ಸ್ವಲ್ಪ, ಪುದೀನ ಸೊಪ್ಪು ಸ್ವಲ್ಪ, ದನಿಯಾಪುಡಿ 2 -ಚಮಚ, ಖಾರದಪುಡಿ 2 -ಚಮಚ, ಅರಿಶಿನ ಪುಡಿ ಸ್ವಲ್ಪ, ಪೆಪ್ಪರ್ (ಕಾಳುಮೆಣಸು) 5, ಲವಂಗ 3, ಚಕ್ಕೆ 1 ಇಂಚು ಉದ್ದದ್ದು, ಈರುಳ್ಳಿ 2, ಟೊಮೆಟೊ 1, ಕಾಯಿ ಅರ್ಧ ಹೋಳು, ಸಾಸಿವೆ, ಎಣ್ಣೆ, ತುಪ್ಪ, ರುಚಿಗೆ ತಕ್ಕಷ್ಟು ಉಪ್ಪು.

ತಯಾರಿಸುವ ವಿಧಾನ: ಈರುಳ್ಳಿ, ಟೊಮೆಟೊ ಕೊತ್ತಂಬರಿ, ಪುದೀನ, ಅರಿಶಿನ ಪುಡಿ, ಪೆಪ್ಪರ್, ಚಕ್ಕೆ- ಲವಂಗ ಶುಂಠಿ, ಬೆಳ್ಳುಳ್ಳಿ, ದನಿಯಾಪುಡಿ, ಖಾರದಪುಡಿಗೆ ನೀರು ಹಾಕಿ ರುಬ್ಬಿಟ್ಟುಕೊಳ್ಳಿ. ಕುಕ್ಕರ್‌ಗೆ ಎಣ್ಣೆ ಹಾಕಿ ಕಾದ ನಂತರ ಸಾಸಿವೆ ಸಿಡಸಿ ನಂತರ ತೊಳೆದ ಚಿಕನ್ ಹಾಕಿ ಸ್ವಲ್ಪ ಫ್ರೈ ಮಾಡಿ. ನಂತರ ರುಬ್ಬಿದ ಖಾರದ ಮಿಶ್ರಣವನ್ನು ಹಾಕಿ, ಸ್ವಲ್ಪ ಪ್ರಮಾಣದಲ್ಲಿ ನೀರು ಹಾಕಿ ಕುಕ್ಕರ್ ಮುಚ್ಚಳ ಮುಚ್ಚಿ ಮೂರು ವಿಷಲ್ ಹಾಕಿಸಿ, ಮುಚ್ಚಳ ತೆಗೆದು ಮಸಾಲೆ ಹಾಕಿ ಚೆನ್ನಾಗಿ ಬೇಯಿಸಿ, ಬೆಂದ ನಂತರ ಬೇಕೆಂದರೆ ಕೊತ್ತಂಬರಿ ಉದುರಿಸಿ.



ಎಂಜಿನಿಯರ್ ಕುಟುಂಬಕ್ಕೆ ₹1 ಕೋಟಿ ಪರಿಹಾರ

ವಾಡಿ (ಕಲಬುರಗಿ ಜಿಲ್ಲೆ): ವಾಡಿಯಲ್ಲಿರುವ ಎಸಿಸಿ ಸಿಮೆಂಟ್ ಕಂಪನಿ ತಮಗೆ ಸ್ವಯಂ ನಿವೃತ್ತಿಗೆ ಒತ್ತಡ ಹಾಕುತ್ತಿದೆ ಎಂದು ಆರೋಪಿಸಿ ಗುರುವಾರ ವಿಡಿಯೊ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದ ಎಂಜಿನಿಯರ್ ರಮೇಶ ಪವಾರ ಅವರ ಕುಟುಂಬಕ್ಕೆ ಕಂಪನಿಯ ಆಡಳಿತ ಮಂಡಳಿ ₹1 ಕೋಟಿ ಪರಿಹಾರ ಘೋಷಿಸಿದೆ.

ಮಾಜಿ ಶಾಸಕ ದಿ. ವಾಲ್ಮೀಕಿ ನಾಯಕ ಅವರ ಪುತ್ರಿಯ ಪತಿಯಾಗಿದ್ದ ರಮೇಶ ಪವಾರ ಅವರು ಕಂಪನಿ ತಮಗೆ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಈ ಬಗ್ಗೆ ವಿಡಿಯೊ ಮಾಡಿದ್ದಲ್ಲದೇ, ಡೆತ್‌ನೋಟ್ ಬರೆದಿಟ್ಟು ನೇಣು ಹಾಕಿಕೊಂಡಿದ್ದರು. ಆಡಳಿತ ಮಂಡಳಿಯವರು ಬಂದು ಮಾತುಕತೆ ನಡೆಸುವವರೆಗೂ ಶವ ಇಳಿಸಬಾರದು ಎಂದು ಕುಟುಂಬದ ಸದಸ್ಯರು ಹಾಗೂ ಸ್ಥಳೀಯರು ಪಟ್ಟು ಹಿಡಿದಿದ್ದರಿಂದ ಶವವು ಸುಮಾರು 16 ಗಂಟೆ ನೇಣು ಬಿಗಿದ ಸ್ಥಿತಿಯಲ್ಲೇ ಇತ್ತು.

ಎಸಿಸಿ ವಾಡಿ ಘಟಕದ ಮುಖ್ಯಸ್ಥ ಅನಿಲ್ ಗುಪ್ತಾ ಹಾಗೂ ಇನ್ನಿತರ ಅಧಿಕಾರಿಗಳು ಬಂದು ಮಾತುಕತೆ ನಡೆಸಿದರು. ರಮೇಶ ಅವರ ಪತ್ನಿ ಸುನೀತಾ ಅವರಿಗೆ ₹1 ಕೋಟಿ ಪರಿಹಾರ ನೀಡುವುದಾಗಿ ಹಾಗೂ ಕಾರ್ಮಿಕರು ಸಲ್ಲಿಸುವ ಬೇಡಿಕೆಗಳ ಪಟ್ಟಿಯನ್ನು ಪರಿಶೀಲಿಸಿ ಈಡೇರಿಸುವುದಾಗಿ ಭರವಸೆ ನೀಡಿದ ಬಳಿಕ ಗುರುವಾರ ತಡರಾತ್ರಿ ಶವ ಇಳಿಸಲು ಅವಕಾಶ ಮಾಡಿಕೊಡಲಾಗಿತ್ತು. ಶುಕ್ರವಾರ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ನಡೆಸಲಾಯಿತು.

ಸಾಗುವಳಿ ಹಕ್ಕಿಗೆ ಆಗ್ರಹಿಸಿ ಹೋರಾಟ: ರಾಷ್ಟ್ರೀಯ ಹೆದ್ದಾರಿ ಬಂದ್, 55 ಮಂದಿ ವಶಕ್ಕೆ

ರೈತರು, ಪೊಲೀಸರ ಮಧ್ಯೆ ಜಟಾಪಟಿ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): 'ತಾಲ್ಲೂಕಿನ ಕುಲವಳ್ಳಿ ಗುಡ್ಡದ ಪ್ರದೇಶದಲ್ಲಿ ರೈತರಿಗೆ ಸಾಗುವಳಿ ಹಕ್ಕು ನೀಡಬೇಕು' ಎಂದು ಆಗ್ರಹಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ರೈತರು, ರೈತ ಮಹಿಳೆಯರು ಹಾಗೂ ರೈತರ ಮಕ್ಕಳು ಶುಕ್ರವಾರ ಪ್ರತಿಭಟನೆ ನಡೆಸಿದರು. ಹೋರಾಟ ವಿಕೋಪಕ್ಕೆ ತಿರುಗುತ್ತಿದ್ದಂತೆಯೇ ಪೊಲೀಸರು 55 ಮಂದಿಯನ್ನು ವಶಕ್ಕೆ ಪಡೆದರು. ಒಂದು ಹಂತದಲ್ಲಿ ಕೋಪಗೊಂಡ ಎಸ್‌ಪಿ ರೈತರಿಗೆ ತೊಡೆ ತಟ್ಟಿದರು.

ಹೆದ್ದಾರಿ ಬಂದ್ ಮಾಡಿದ ರೈತರು, ಅಲ್ಲೇ ಅಡುಗೆ ಮಾಡಲು ಮುಂದಾದಾಗ ಪೊಲೀಸರು ತಡೆದರು. ರಸ್ತೆ ಮೇಲೆ ಮಲಗಿದ ಮಹಿಳೆಯರನ್ನು ಎಳೆದೊಯ್ದರು. ಇದರಿಂದ ಪ್ರತಿಭಟನಕಾರರು ಮತ್ತು ಪೊಲೀಸರ ನಡುವೆ ನೂಕಾಟ– ತಳ್ಳಾಟ ನಡೆಯಿತು. ಧರಣಿಯಲ್ಲಿ ಭಾಗವಹಿಸಿದ್ದ ಮೂವರು ಮಕ್ಕಳಿಗೆ ಗಾಯಗಳಾದವು.

ಕೆಲವರು ಟ್ರ್ಯಾಕ್ಟರ್, ಜಾನುವಾರುಗಳನ್ನು ತಂದು ಹೆದ್ದಾರಿ ಮೇಲೆ ನಿಲ್ಲಿಸಿ, ವಾಹನಗಳ ಸಂಚಾರ ಬಂದ್ ಮಾಡಿದರು. ಆಗ ಪೊಲೀಸರು 55ಕ್ಕೂ ಹೆಚ್ಚು ರೈತರನ್ನು ಬಂಧಿಸಿದರು. ಇದರಿಂದ ಸಿಟ್ಟಿಗೆದ್ದ ಮಕ್ಕಳು ತಮ್ಮ ಪಾಲಕರನ್ನು ಬಿಡುಗಡೆ ಮಾಡುವಂತೆ ಆಗ್ರಹಿಸಿ ಹೆದ್ದಾರಿ ಮೇಲೆಯೇ ಮತ್ತೆ ಧರಣಿ ನಡೆಸಿದರು. ಈ ವೇಳೆ ಪೊಲೀಸರು ಮಕ್ಕಳನ್ನು ಎತ್ತಿ ರಸ್ತೆ ಬದಿಗೆ ಕರೆದೊಯ್ಯಲು ಮುಂದಾದರು. ಮಕ್ಕಳು ವಿರೋಧ ವ್ಯಕ್ತಪಡಿಸಿದ್ದರಿಂದ ನೂಕಾಟದಲ್ಲಿ ಕೆಲವರಿಗೆ ಪೆಟ್ಟಾಗಿದೆ ಎಂದು ರೈತ ಮಹಿಳೆಯರು ಕಿಡಿ ಕಾರಿದರು. ಮಕ್ಕಳು ಹೆದ್ದಾರಿಯಲ್ಲೇ ಕುಳಿತು ಬಿಕ್ಕಿಬಿಕ್ಕಿ ಅತ್ತರು.

ಇದಕ್ಕೂ ಮುನ್ನ ರಾಣಿ ಚನ್ನಮ್ಮ ವೃತ್ತದಲ್ಲಿ ಅವರು ಪ್ರತಿಭಟಿಸಿದರು. ತಹಶೀಲ್ದಾರ್ ಹಾಗೂ ಉಪವಿಭಾಗಾಧಿಕಾರಿ ವಿರುದ್ಧ ಘೋಷಣೆ ಕೂಗಿದರು.

'ಭೂಮಿ ನಕ್ಷೆ ಒದಗಿಸಬೇಕು ಮತ್ತು ಭೂ ನ್ಯಾಯ ಮಂಡಳಿಯ ಆದೇಶ ಪ್ರತಿಗಳನ್ನು ಕೊಡಬೇಕು ಎಂದು ವರ್ಷಗಳಿಂದ ಕೇಳುತ್ತಿದ್ದೇವೆ. ಹಲವು ಬಾರಿ ಪ್ರತಿಭಟನೆ ನಡೆಸಿದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಕುಲವಳ್ಳಿ ಗುಡ್ಡದಲ್ಲಿ ಸಾಗುವಳಿ ಕಾದು ಕೂತ 9 ಗ್ರಾಮಗಳ ರೈತರಿಗೆ ಅನ್ಯಾಯವಾಗುತ್ತಿದೆ' ಎಂದರು.

ರೈತರು ಹಾಗೂ ಪೊಲೀಸರ ಮಧ್ಯೆ ನಡೆದ ಈ ಜಟಾಪಟಿಯ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು.



ಸಾಗುವಳಿ ಹಕ್ಕಿಗೆ ಆಗ್ರಹಿಸಿ ಚನ್ನಮ್ಮನ ಕಿತ್ತೂರು ಬಳಿ ರಾಷ್ಟ್ರೀಯ ಹೆದ್ದಾರಿ ಮೇಲೆ ರೈತರು ಶುಕ್ರವಾರ ನಡೆಸಿದ ಧರಣಿಯಲ್ಲಿ ರೈತರ ಮಕ್ಕಳೂ ಪಾಲ್ಗೊಂಡರು

ಪ್ರಜಾವಾಣಿ ಚಿತ್ರ: ಪ್ರದೀಪ ಮೇಲಿನಮನಿ

ರೈತರಿಗೆ ತೊಡೆ ತಟ್ಟಿದ ಎಸ್‌ಪಿ

ವಾಹನದಿಂದ ಇಳಿದು ಬಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಅವರು ಹೋರಾಟಗಾರರ ಮೇಲೆ ಹರಿಹಾಯ್ದು ತೊಡೆತಟ್ಟಿದರು.

ಹೋರಾಟಗಾರರಾದ ಬಿಷ್ಟಪ್ಪ ಶಿಂದೆ, ಹಬೀಬ್ ಶಿಲೇದಾರ, ಅರ್ಜುನ ಮಡಿವಾಳರ, ಮಹಾಂತೇಶ ಎಮ್ಮಿ, ನಾಗಪ್ಪ ಅಸಲನ್ನವರ, ದಶರಥ ಮಡಿವಾಳರ ಮುಂತಾದವರನ್ನು ಪೊಲೀಸರು ಮೊದಲು ಬಂಧಿಸಿದರು. ಆಗ ರೈತರ ಆಕ್ರೋಶ ತೀವ್ರಗೊಂಡಿತು. ಇದರಿಂದ ಕೋಪಗೊಂಡ ಎಸ್‌ಪಿ ಹೆದ್ದಾರಿ ಮೇಲೆ ನಿಂತು ತೊಡೆ ತಟ್ಟಿದರು.

'ಪಾಲಕರ ಬೆಂಬಲಕ್ಕೆ ನಿಂತಿದ್ದ ಮಕ್ಕಳ ಮೇಲೆ ಪೊಲೀಸರು ದರ್ಪ ತೋರಿದ್ದಾರೆ. ನಿಂಗಾಪುರದ ಜೋಯಾ ತಹಶೀಲ್ದಾರ್, ಪ್ರಿಯಾ ಕಾಳಾರ ಹಾಗೂ ಲಕ್ಷ್ಮಿ ಮಳಗಲಿ ಅವರಿಗೆ ಗಾಯಗಳಾಗಿವೆ. ಮಹಿಳಾ ಕಾನ್‌ಸ್ಟೆಬಲ್‌ಗಳು ತಮ್ಮ ಬೆರಳು ತಿರಿವಿದ್ದಾರೆ' ಎಂದು ಮಕ್ಕಳು ತಿಳಿಸಿದರು.

'ಮಕ್ಕಳಿಗೆ ಚಿಕಿತ್ಸೆ, ರೈತರ ಮೇಲೆ ಕೇಸ್'

'ಪ್ರತಿಭಟನೆಗೆ ಕೂತಿದ್ದ ಮಕ್ಕಳನ್ನು ಹೆದ್ದಾರಿಯಿಂದ ಪಕ್ಕಕ್ಕೆ ಕರೆತರುವಾಗ ಮಕ್ಕಳು ವಿರೋಧ ವ್ಯಕ್ತಪಡಿಸಿದ್ದಾರೆ. ಆ ಸಂದರ್ಭದಲ್ಲಿ ಮೂವರಿಗೆ ಸಣ್ಣಪುಟ್ಟ ತರಚಿದ ಗಾಯಗಳಾಗಿವೆ. ಅವರಿಗೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಕೊಡಿಸಲಾಗಿದೆ. ಅವರಿಗೆ ಯಾವುದೇ ಅಪಾಯ ಇಲ್ಲ ಎಂದು ವೈದ್ಯರು ತಿಳಿಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಪ್ರತಿಕ್ರಿಯಿಸಿದ್ದಾರೆ.

'ತಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ಪ್ರತಿಭಟನಾಕಾರರಿಗೆ ಮನವರಿಕೆ ಮಾಡಲಾಯಿತು. ಆದರೂ ಅವರು ಮಕ್ಕಳನ್ನು ಮುಂದಿಟ್ಟು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿದರು. ಮಕ್ಕಳನ್ನು ಧರಣಿಗೆ ಬಳಸಿದ್ದು ದುರದೃಷ್ಟಕರ ಸಂಗತಿ. ಇದರಲ್ಲಿ ಮಕ್ಕಳ ಮೇಲೆ ಪೊಲೀಸರು ಯಾವುದೇ ರೀತಿಯ ಬಲ ಪ್ರಯೋಗ ಮಾಡಿಲ್ಲ' ಎಂದೂ ಹೇಳಿದ್ದಾರೆ.

'ಕೆಲವು ಪ್ರತಿಭಟನಾಕಾರರು ಪೊಲೀಸರನ್ನು ತಳ್ಳಿದ್ದಾರೆ. ಆಗ ಕೆಲ ಪೊಲೀಸರೂ ಗಾಯಗೊಂಡಿದ್ದಾರೆ. ಮಹಿಳಾ ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದಾರೆ. ಅದ್ದರಿಂದ 'ಹಲ್ಲೆ ಮತ್ತು ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಪ್ರಕರಣ' ದಾಖಲಿಸುತ್ತೇವೆ. ಲಭ್ಯ ಪುರಾವೆಗಳ ಪ್ರಕಾರ ಬಂಧಿಸಲಾಗುವುದು' ಎಂದೂ ಅವರು ಹೇಳಿದ್ದಾರೆ.



ಕೊಡಗು ಜಿಲ್ಲೆಯ ಮಡಿಕೇರಿ, ನಾಪೋಕ್ಲು ಹೋಬಳಿಯ ಕೆಲವೆಡೆ ಶುಕ್ರವಾರ ಬಿರುಸಿನ ಮಳೆಯಾಗಿದ್ದು, ಮಡಿಕೇರಿ ನಗರದ ಮುಖ್ಯ ಬೀದಿಯಲ್ಲಿ ವಾಹನ ಸವಾರರು ಮತ್ತು ಜನರು ಮಳೆಯಲ್ಲೇ ಸಂಚರಿಸಿದರು

ತಾಳಿ ಕಟ್ಟುವಾಗ ಮದುವೆಗೆ ವಧು ನಕಾರ

ಹೊಸದುರ್ಗ (ಚಿತ್ರದುರ್ಗ): ತಾಲ್ಲೂಕಿನ ಚಿಕ್ಕಬ್ಯಾಲದಕೆರೆ ಗ್ರಾಮದಲ್ಲಿ ತಾಳಿ ಕಟ್ಟುವ ಸಂದರ್ಭದಲ್ಲಿ ವಧು ಮದುವೆಯನ್ನು ನಿರಾಕರಿಸಿದ ಪ್ರಸಂಗ ಗುರುವಾರ ನಡೆದಿದೆ.

ಚಿಕ್ಕಕೆರೆಯ ಯಮುನಾ ಜಿ.ಎಂ ಹಾಗೂ ಚಿಕ್ಕಬ್ಯಾಲದಕೆರೆಯ ಮಂಜುನಾಥ್ ಅವರ ವಿವಾಹ ಗ್ರಾಮದ ಕಲ್ಯಾಣ ಮಂಟಪವೊಂದರಲ್ಲಿ ನಿಶ್ಚಯವಾಗಿತ್ತು. ಒಂದು ವರ್ಷದಿಂದ ವಧು ಹಾಗೂ ವರನ ನಡುವೆ ಉತ್ತಮ ಒಡನಾಟವಿತ್ತು. ಯಮುನಾ ಶಿಕ್ಷಣದ ಕಾರಣಕ್ಕೆ ಮದುವೆಯನ್ನು ಒಂದು ವರ್ಷ ಮುಂದೂಡುವಂತೆ ಮನೆಯವರಿಗೆ ತಿಳಿಸಿದ್ದರು. ಒಂದು ವರ್ಷದ ನಂತರವೇ ಎಲ್ಲರೂ ಒಪ್ಪಿಗೆಯಂತೆ ಬುಧವಾರ ಅದ್ದೂರಿಯಾಗಿ ಆರತಕ್ಷತೆಯೂ ನಡೆದಿತ್ತು.

ಆದರೆ, ಗುರುವಾರ ಬೆಳಿಗ್ಗೆ 9.30ಕ್ಕೆ ತಾಳಿ ಕಟ್ಟುವ ವೇಳೆ ವಧು ತಾಳಿಯನ್ನು ನಯವಾಗಿ ತಳ್ಳಿ, 'ನನಗೆ ಈ ಮದುವೆ ಬೇಡ' ಎಂದು ನಿರಾಕರಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಮದುವೆಯಲ್ಲಿ ವರನ ಕಡೆಯವರು ಎಲ್ಲ ಸಿದ್ಧತೆ ಮಾಡಿಕೊಂಡಿದ್ದರು. ಮದುವೆ ಶಾಸ್ತ್ರಗಳಲ್ಲಿ ವಧು-ವರ ಸಕ್ರಿಯವಾಗಿ ಭಾಗಿಯಾಗಿದ್ದರು. ಆದರೆ ತಾಳಿ ಕಟ್ಟುವ ಸಮಯದಲ್ಲಿ ವಧು ಮದುವೆ ಬೇಡ ಎಂದು ಹಟ ಹಿಡಿದಿದ್ದರಿಂದ ಎಲ್ಲರೂ ಗೊಂದಲಕ್ಕೀಡಾದರು. ಹಿರಿಯರು, ಸಂಬಂಧಿಕರು ಎಷ್ಟೇ ಮನವೊಲಿಸಿದರೂ ವಧು ಮಾತ್ರ ತಾಳಿ ಕಟ್ಟಿಸಿಕೊಳ್ಳಲು ಒಪ್ಪಿಕೊಳ್ಳದ ಕಾರಣ, ಕೊನೆಗೆ ಮದುವೆ ಮುರಿದುಬಿದ್ದಿದೆ.

ವಧು ಮದುವೆಗೆ ದಿಢೀರ್ ನಿರಾಕರಿಸಿದ್ದಕ್ಕೆ ನಿಖರ ಕಾರಣ ತಿಳಿದುಬಂದಿಲ್ಲ.

ಗ್ಯಾರಂಟಿಗೆ ಬಳಕೆ: ಬಿಜೆಪಿ–ಜೆಡಿಎಸ್ ಸದಸ್ಯರ ಧರಣಿ • ನಿಯಮದಂತೆಯೇ ಹಣ ಬಳಕೆ– ಮಹದೇವಪ್ಪ ಸ್ಪಷ್ಟನೆ

ಪರಿಶಿಷ್ಟರ ಹಣ ಮರಳಿಸಲು ಪಟ್ಟು

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡ ಎಸ್‌ಸಿಎಸ್‌ಪಿ–ಟಿಎಸ್‌ಪಿಯ ₹11 ಸಾವಿರ ಕೋಟಿಯನ್ನು ಮರಳಿ ನೀಡಬೇಕು ಎಂದು ವಿರೋಧ ಪಕ್ಷ ಬಿಜೆಪಿ–ಜೆಡಿಎಸ್ ಸದಸ್ಯರು ಪಟ್ಟುಹಿಡಿದು, ಧರಣಿ ನಡೆಸಿದರು.

ಇದರಿಂದ ಎರಡು ಬಾರಿ ಕಲಾಪವನ್ನು ಮುಂದೂಡಲಾಯಿತು. ಧರಣಿ ವಾಪಸ್ ಪಡೆಯುವಂತೆ ಸಭಾಪತಿಯವರ ಮನವಿಗೂ ಕಿವಿಗೊಡಲಿಲ್ಲ. ಗದ್ದಲ, ವಾಗ್ವಾದದ ಮಧ್ಯೆ ಚುಕ್ಕಿಗುರುತಿನ ಒಂದೇ ವಿಷಯದ ಮೇಲೆ ಎರಡು ಗಂಟೆ ಚರ್ಚೆ ನಡೆಯಿತು.

ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ, ಎಸ್‌ಸಿಎಸ್‌ಪಿ–ಟಿಎಸ್‌ಪಿ ನಿಯಮದಂತೆಯೇ ಹಣ ಬಳಕೆ ಮಾಡಲಾಗಿದೆ. ಗ್ಯಾರಂಟಿ ಯೋಜನೆಗಳಲ್ಲಿನ ಪರಿಶಿಷ್ಟ ಫಲಾನುಭವಿಗಳಿಗೇ ಈ ಹಣ ವಿನಿಯೋಗವಾಗಿದೆ. ಯಾವುದೇ ದುರುಪಯೋಗ ನಡೆದಿಲ್ಲ. ಪರಿಶಿಷ್ಟರ ಕಲ್ಯಾಣ ಕಾರ್ಯಕ್ರಮಗಳ ಹೊರತಾಗಿ ಅನ್ಯ ಉದ್ದೇಶಗಳಿಗೆ ಹಣ ಬಳಕೆ ಮಾಡಬಾರದು ಎನ್ನುವ ಕಾರಣಕ್ಕಾಗಿಯೇ ಕಾಯ್ದೆಗೆ ತಿದ್ದುಪಡಿ ತರಲು ಗುರುವಾರವಷ್ಟೇ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ವಿವರಿಸಿದರು.

ಮಹದೇವಪ್ಪ ಅವರ ಉತ್ತರದಿಂದ ತೃಪ್ತಿಯಾಗದ ವಿರೋಧ ಪಕ್ಷಗಳ ಸದಸ್ಯರು ಸಭಾಪತಿಗಳ ಪೀಠದ ಎದುರು ಧರಣಿ ನಡೆಸಿದರು. ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.



ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಂಡ ಎಸ್‌ಸಿಎಸ್‌ಪಿ–ಟಿಎಸ್‌ಪಿಯ ₹11 ಸಾವಿರ ಕೋಟಿಯನ್ನು ಮರಳಿ ನೀಡಬೇಕು ಎಂದು ಒತ್ತಾಯಿಸಿ, ವಿರೋಧ ಪಕ್ಷಗಳ ಸದಸ್ಯರು ಶುಕ್ರವಾರ ಧರಣಿ ನಡೆಸಿದರು

–ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ

ಹೀಗೆ ಮಾಡಿದರೆ ರಾಜೀನಾಮೆ..

ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣ ಬಳಕೆ ವಿಷಯದ ಚರ್ಚೆಯ ಗದ್ದಲದಿಂದ ಕಲಾಪವನ್ನು ಎರಡು ಬಾರಿ ಮುಂದೂಡಿದರೂ ಮತ್ತೆ ಧರಣಿ ಮುಂದುವರಿಸಿದ್ದರಿಂದ ಸಿಟ್ಟಿಗೆದ್ದ ಸಭಾಪತಿ ಹೊರಟ್ಟಿ, 'ಹೀಗೆ ಮಾಡುತ್ತಾ ಕೂತರೆ ಕಲಾಪ ನಡೆಸುವುದು ಹೇಗೆ? ಇದು ಸರಿಯಲ್ಲ. ಸುಮ್ಮನಾಗದಿದ್ದರೆ ನನ್ನ ನಿರ್ಧಾರ ನಾನು ತೆಗೆದುಕೊಳ್ಳುವೆ. ಕುರ್ಚಿಗೆ ಅಂಟಿಕೊಂಡು ಕುಳಿತುಕೊಳ್ಳುವ ಜಾಯಮಾನ ನನ್ನದಲ್ಲ. ಅಗತ್ಯಬಿದ್ದರೆ ರಾಜೀನಾಮೆ ನೀಡಿ ಹೊರಹೋಗುವೆ' ಎಂದರು.

ಅದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಸದಸ್ಯರೂ ಎದ್ದು ನಿಂತು ಬಿಜೆಪಿ ವಿರುದ್ಧ ಧಿಕ್ಕಾರ ಕೂಗಿದರು.

ಗ್ಯಾರಂಟಿ ಯೋಜನೆಗೆ ಹಣ ಬಳಕೆ ಮಾಡಿಕೊಂಡ ಸರ್ಕಾರದ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಹಿಂದೆ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಪರಿಶಿಷ್ಟರಿಗೆ ಮೀಸಲಾದ ₹10 ಸಾವಿರ ಕೋಟಿ ಹಣ ಅನ್ಯ ಉದ್ದೇಶಕ್ಕೆ ಬಳಕೆ ಮಾಡಿಕೊಂಡಿತ್ತು. ಅಂದಿನ ಸಚಿವರು ಸದನದಲ್ಲೇ ಅದನ್ನು ಒಪ್ಪಿಕೊಂಡಿದ್ದಾರೆ. ಅಂಥವರಿಂದ ಕಾಂಗ್ರೆಸ್ ಪಾಠ ಕಲಿಯಬೇಕಿಲ್ಲ ಎಂದರು. ಅವರ ಮಾತಿಗೆ ಆಹಾರ ಸಚಿವ ಕೆ.ಎಚ್‌.ಮುನಿಯಪ್ಪ ದನಿಗೂಡಿಸಿದರು.

ನಾರಾಯಣಸ್ವಾಮಿ ಮಾತಿಗೆ ಎನ್‌. ರವಿಕುಮಾರ್, ಕೋಟ ಶ್ರೀನಿವಾಸ ಪೂಜಾರಿ ಸೇರಿದಂತೆ ಹಲವು ಸದಸ್ಯರು ಧ್ವನಿಗೂಡಿಸಿದರು. ಇದೇ ವಿಷಯದ ಮೇಲೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಭರವಸೆ ನೀಡಿದ ನಂತರ ವಿರೋಧ ಪಕ್ಷಗಳ ಸದಸ್ಯರು ಧರಣಿ ವಾಪಸ್ ಪಡೆದರು.

ಎನ್‌ಇಪಿಯನ್ನು ಒಳಗೊಂಡೇ ಎಸ್‌ಇಪಿ: ಎಂ.ಸಿ.ಸುಧಾಕರ್

ವಿಧಾನ ಪರಿಷತ್: ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ರದ್ದು ಮಾಡಿಲ್ಲ. ಅದರಲ್ಲಿನ ಉತ್ತಮ ಅಂಶಗಳನ್ನೂ ಒಳಗೊಂಡು ಅತ್ಯುತ್ತಮ ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ) ರೂಪಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಹೇಳಿದರು.

ಎನ್‌ಇಪಿ ಮೇಲಿನ ಮುಂದುವರಿದ ಚರ್ಚೆಗೆ ಶುಕ್ರವಾರ ಉತ್ತರ ನೀಡಿದ ಅವರು, ವಿದ್ಯಾರ್ಥಿಗಳ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಈ ವರ್ಷಕ್ಕೆ ಎನ್‌ಇಪಿ ಮುಂದುವರಿಸಲಾಗಿದೆ. ಈಗಾಗಲೇ ಸುಖದೇವ್ ಥೋರಟ್ ಅಧ್ಯಕ್ಷತೆಯಲ್ಲಿ ಎಸ್‌ಇಪಿ ಆಯೋಗ ರಚನೆ ಮಾಡಲಾಗಿದೆ ಎಂದರು.

ರಾಜ್ಯದಲ್ಲಿ ಬೋಧಕರ ಕೊರತೆ ಇದೆ. ಹಲವು ದಶಕಗಳಿಂದ ನೇಮಕಾತಿ ನಡೆದಿಲ್ಲ. ಕಲಾ ವಿದ್ಯಾರ್ಥಿಯೊಬ್ಬ ವಿಜ್ಞಾನದ ಒಂದು ವಿಷಯ ತೆಗೆದುಕೊಂಡರೆ ಆ ಕಾಲೇಜಿನಲ್ಲಿ ಅಗತ್ಯ ಪ್ರಯೋಗಾಲಯ ಬೇಕಿರುತ್ತದೆ. ಅದಕ್ಕೆ ತಕ್ಕಂತಹ ಸೌಕರ್ಯ ಒದಗಿಸದೇ ಹೊಸ ನೀತಿ ಅನುಷ್ಠಾನಗೊಳಿಸಿದರೆ ಆ ವಿದ್ಯಾರ್ಥಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಇಂತಹ ಎಲ್ಲ ನ್ಯೂನತೆಗಳನ್ನು ಸರಿಪಡಿಸಿಕೊಂಡು, ಇತರೆ ರಾಜ್ಯಗಳು, ಹಿಂದಿನ ಶಿಕ್ಷಣ ನೀತಿಯನ್ನು ಪರಿಶೀಲಿಸಿ, ಎನ್‌ಇಪಿಗೆ ವಿರುದ್ಧವಲ್ಲದ ಸಮಗ್ರ ಶಿಕ್ಷಣ ನೀತಿ ಜಾರಿಗೆ ತರಲಾಗುವುದು ಎಂದರು.

'ಯುಜಿಸಿ ಮೇಲೂ ಕೇಂದ್ರದ ಹಿಡಿತ': ಇ.ಡಿ, ಐ.ಟಿಯಂತಹ ಸಾಂವಿಧಾನಿಕ ಸಂಸ್ಥೆಗಳನ್ನು ಹಿಡಿತದಲ್ಲಿ ಇಟ್ಟುಕೊಂಡಿರುವ ಕೇಂದ್ರ ಸರ್ಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗವನ್ನೂ ನಿಯಂತ್ರಿಸುತ್ತಿದೆ ಎಂಬ ಅನುಮಾನ ಮೂಡುತ್ತಿದೆ. ರಾಜ್ಯದ ಪದವಿ ಕಾಲೇಜು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 'ಸೆಲ್ಫಿ ಪಾಯಿಂಟ್' ತೆರೆದು ಮೋದಿ ಅವರ ಪ್ರತಿಕೃತಿ ಇರಿಸುವಂತೆ ಆದೇಶ ನೀಡಿರುವುದು ಸರಿಯಲ್ಲ. ಪ್ರಧಾನಿ ಬದಲು ಅಂಬೇಡ್ಕರ್, ಸಿ.ವಿ. ರಾಮನ್ ಅವರಂತಹ ಮಹನೀಯರ ಚಿತ್ರವಿಟ್ಟರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಸಿಗುತ್ತದೆ ಎಂದರು.

ಈ ವಿಷಯ ಕುರಿತು ಮಾತನಾಡುವಾಗ ಮೋದಿ ಅವರ ಶಿಕ್ಷಣದ ಬಗ್ಗೆಯೇ ಖಚಿತ ಮಾಹಿತಿ ಇಲ್ಲ ಎಂಬ ಸುಧಾಕರ್ ಹೇಳಿಕೆಗೆ ವಿರೋಧ ಪಕ್ಷಗಳ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. 'ಬಹು ನಿರ್ಗಮನ ಆಯ್ಕೆ ಬಳಸಿಕೊಂಡು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ತೊರೆದರೆ ಅವನರನ್ನು ಆರ್‌ಎಸ್‌ಎಸ್ ಪ್ರಚಾರಕರನ್ನಾಗಿ ಬಳಸಿಕೊಳ್ಳುವ ಹುನ್ನಾರ ನಡೆದಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಅವರು ಹೇಳಿದ್ದಕ್ಕೆ ವಿರೋಧ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಸುದ್ದಿ 2 ನಿಮಿಷ

ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಯು.ಟಿ. ಖಾದರ್ ಕುಟುಕು

ಬೆಳಗಾವಿ: 'ಶಾಸಕರು ಮತ್ತು ಸಚಿವರು ಅಧಿವೇಶನಕ್ಕೆ ಸರಿಯಾದ ಸಮಯಕ್ಕೆ ಬರಬೇಕು. ಉತ್ತಮವಾಗಿ ಚರ್ಚೆ ನಡೆಸುವುದು, ಯೋಜನೆ ರೂಪಿಸುವುದು ಅವರ ಕೆಲಸ. ಅವರ ಕೆಲಸವನ್ನು ಅವರು ಚೆನ್ನಾಗಿ ಮಾಡಲಿ. ಯಾರು ಯಾವ ಕೆಲಸ ಮಾಡಬೇಕೋ ಅದೇ ಕೆಲಸವನ್ನು ಮಾಡಬೇಕು' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

'ನನಗೆ ಅಧಿಕಾರ ಕೊಟ್ಟರೆ ಸುವರ್ಣಸೌಧದ ವಿಧಾನಸಭೆ ಸಭಾಂಗಣದಲ್ಲಿರುವ ಸಾವರ್ಕರ್ ಭಾವಚಿತ್ರ ತೆಗೆದು ನೆಹರೂ ಅವರ ಭಾವಚಿತ್ರ ಹಾಕಿಸುತ್ತೇನೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ, ಖಾದರ್ ಹೀಗೆ ಪ್ರತಿಕ್ರಿಯಿಸಿದರು.

'ಹಿಂದೆ ಏನು ಆಗಿದೆಯೋ ಅದರ ಬಗ್ಗೆ ವಿಮರ್ಶೆ ಮಾಡುವುದಿಲ್ಲ. ರಾಜ್ಯದಲ್ಲಿ ಸೌಹಾರ್ದ ಮೂಡಿಸುವುದು ನನ್ನ ಕೆಲಸ. ಯಾವುದನ್ನೂ ಕಿತ್ತು ಎಸೆಯುವುದು ನನ್ನ ಕೆಲಸವಲ್ಲ. ಅದರ ಬದಲಿಗೆ ಬೆಸೆಯುವುದು ನನ್ನ ಕೆಲಸ. ಸೌಹಾರ್ದ ಮೂಡಿಸುವುದೇ ನನ್ನ ಆದ್ಯತೆ' ಎಂದು ತಿಳಿಸಿದರು.

'ಬೆಂಗಳೂರಿನ ಯಲಹಂಕ ಮೇಲ್ಸೇತುವೆಗೆ ಸಾವರ್ಕರ್ ಹೆಸರು ಇದೆ. ಅದರ ಮೇಲೆ ಎಲ್ಲರೂ ಓಡಾಡುತ್ತಾರಲ್ಲವೇ, ಹಾಗೆಯೇ ಮುಂದಾಲೋಚನೆಯಿಂದ ಕೆಲಸ ಮಾಡಬೇಕು. ಅನಗತ್ಯ ಬಿಕ್ಕಟ್ಟು ಹುಟ್ಟುಹಾಕುವ ಕೆಲಸ ಮಾಡಬಾರದು' ಎಂದು ಖಾದರ್ ಹೇಳಿದರು.



12ಕ್ಕೆ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ

ಬೆಳಗಾವಿ: ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ 50 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಇದೇ 12ರಂದು ಸುವರ್ಣ ವಿಧಾನಸೌಧದಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಜತೆ ಶುಕ್ರವಾರ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ಅವರು ಈ ವಿಷಯ ತಿಳಿಸಿದರು.

ಈ ಸಂಬಂಧ ರಾಜ್ಯದಾದ್ಯಂತ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲಾಗುತ್ತಿದೆ. ಅದರ ಭಾಗವಾಗಿ ಸುವರ್ಣ ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ಆಚರಿಸಲು ನಿರ್ಧರಿಸಲಾಗಿದೆ. ಅಂದು ಸಂಜೆ 6 ಗಂಟೆಯಿಂದ ಕಾರ್ಯಕ್ರಮ ಆರಂಭವಾಗಲಿದೆ. ಒಂದು ಗಂಟೆ ಸಭಾ ಕಾರ್ಯಕ್ರಮ ನಡೆಯಲಿದೆ. ಆ ಬಳಿಕ ಎರಡೂವರೆ ಗಂಟೆ ಅವಧಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಆಳ್ವಾಸ್ ನುಡಿಸಿರಿಯ 250ಕ್ಕೂ ಹೆಚ್ಚಿನ ಕಲಾವಿದರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಕಾರ್ಯಕ್ರಮದಲ್ಲಿ ಮಾಜಿ ಸಭಾಪತಿಗಳು ಮತ್ತು ಮಾಜಿ ಸಭಾಧ್ಯಕ್ಷರನ್ನು ಸನ್ಮಾನಿಸಲಾಗುವುದು ಎಂದು ಖಾದರ್ ತಿಳಿಸಿದರು.

'ನಾಯಕರ ತೀರ್ಮಾನವೇ ಅಂತಿಮ'

'ಸದನದಲ್ಲಿ ಸಭಾತ್ಯಾಗ ಮತ್ತು ಧರಣಿ ಮಾಡುವ ಕುರಿತು ವಿರೋಧ ಪಕ್ಷದ ನಾಯಕರು ತೀರ್ಮಾನ ಮಾಡುತ್ತಾರೆ. ಅವರು ಹೇಳಿದ್ದನ್ನು ಶಾಸಕರು ಕೇಳಬೇಕು. ಸಭಾತ್ಯಾಗ ಮಾಡಿ ಎಂದಿದ್ದರು, ಮಾಡಿದ್ದೇವೆ' ಎಂದು ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಾಯಕರ ಬಗ್ಗೆ ಅಸಮಾಧಾನ ಇದೆಯೇ ಎಂಬ ಪ್ರಶ್ನೆಗೆ, ಅವರು ಹೇಳಿದ್ದನ್ನು ಕೇಳುವುದು ಸದನದೊಳಗೆ ನಡೆದುಕೊಳ್ಳುವ ವಿಧಾನ ಎಂದು ಹೇಳಿದರು.

ಹೊಂದಾಣಿಕೆ ರಾಜಕಾರಣದ ಬಗ್ಗೆ ಕೇಳಿದ ಪ್ರಶ್ನೆಗೆ, 'ಹೊಂದಾಣಿಕೆ ರಾಜಕೀಯ ಇಲ್ಲ ಎಂದು ಹೇಳಲಾರೆ. ಅದರ ಬಗ್ಗೆ ಹಿಂದೆಯೇ ಹೇಳಿದ್ದೇನೆ. ಮತ್ತೆ ಪುನರುಚ್ಚಾರ ಬೇಡ. ಹಂತಹಂತವಾಗಿ ಹೊಂದಾಣಿಕೆಯಾಗುತ್ತಿದೆ' ಎಂದರು.

ಸಮನ್ವಯ ಕೊರತೆ: ಅಶೋಕ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ವಿಧಾನಸಭೆಯಲ್ಲಿ ಗುರುವಾರ ಸಭಾತ್ಯಾಗ ಮಾಡಬೇಕೋ ಅಥವಾ ಧರಣಿ ಮಾಡಬೇಕೋ ಎಂಬ ವಿಷಯದಲ್ಲಿ ಗೊಂದಲ ಇರಲಿಲ್ಲ. ಸಮನ್ವಯ ಕೊರತೆ ಇರುವುದರಿಂದ ಈ ರೀತಿ ಆಗಿದೆ' ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸಭಾತ್ಯಾಗ ತೀರ್ಮಾನದ ಕುರಿತು ಬಿಜೆಪಿ ನಾಯಕರಲ್ಲಿ ಅಸಮಾಧಾನ ಇರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಶುಕ್ರವಾರ ಉತ್ತರಿಸಿದ ಅವರು, 'ನಾನು, ಯತ್ನಾಳ, ಅಶ್ವತ್ಥ ನಾರಾಯಣ, ವಿಜಯೇಂದ್ರ ಎಲ್ಲರೂ ಸೇರಿ ಸಭಾತ್ಯಾಗ ಮಾಡುವ ತೀರ್ಮಾನ ಮಾಡಿದ್ದೆವು. ಎಲ್ಲ ಹಿರಿಯರಿಗೂ ಇದು ಗೊತ್ತಿತ್ತು. ನಮ್ಮ ನಿರ್ಧಾರಗಳು ಹಿಂದಿನ ಸಾಲಿನಲ್ಲಿ ಇದ್ದವರಿಗೆ ಸರಿಯಾಗಿ ತಲುಪಿರಲಿಲ್ಲ' ಎಂದರು.

'ನೀವು ಹೊಂದಾಣಿಕೆ ರಾಜಕಾರಣ (ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್) ಮಾಡುತ್ತೀರಿ' ಎಂದು ವಿಶ್ವನಾಥ್ ಆಪಾದಿಸಿದ್ದಾರಲ್ಲ ಎಂಬ ಪ್ರಶ್ನೆಗೆ, ಯಾರೋ ಏನೋ ಹೇಳಿದರೆ ಅದು ಅವರ ವೈಯಕ್ತಿಕ ಅಭಿಪ್ರಾಯ. ಅವರನ್ನು ಕರೆಯಿಸಿ ಮಾತನಾಡುತ್ತೇನೆ ಎಂದು ಅಶೋಕ ಹೇಳಿದರು.

ಉತ್ತರ ಕರ್ನಾಟಕದ ಸಮಸ್ಯೆಯ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಬಸನಗೌಡ ಪಾಟೀಲ ಯತ್ನಾಳರು ಹೇಳಿದ್ದರು. ಸುಮ್ಮನೆ ಸಮಯ ವ್ಯರ್ಥ ಮಾಡುವುದು ಬೇಡ ಎಂಬುದು ಎಲ್ಲರ ಅಭಿಪ್ರಾಯವಾಗಿತ್ತು ಎಂದು ಅವರು ಹೇಳಿದರು.

ಶೇ 80 ಕಮಿಷನ್‌ನ 'ಪೇಡಿಸಿಎಂ' ಸರ್ಕಾರ: ಯತ್ನಾಳ

ವಿಧಾನಸಭೆ: 'ರಾಜ್ಯದ ಕಾಂಗ್ರೆಸ್ ಸರ್ಕಾರ ಶೇ 80 ಕಮಿಷನ್‌ನ 'ಪೇಡಿಸಿಎಂ' ಸರ್ಕಾರವಾಗಿದೆ' ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರು ಆರೋಪಿಸಿದರು.

ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ನೀರಾವರಿ ಮತ್ತು ಇತರ ಇಲಾಖೆಗಳ ಕಾಮಗಾರಿಗಳನ್ನು ನಡೆಸಿದ ಗುತ್ತಿಗೆದಾರರಿಗೆ ಬಿಲ್ ಪಾವತಿ ಮಾಡದ ಕಾರಣ ಗುತ್ತಿಗೆದಾರರು ಸಂಕಷ್ಟದಲ್ಲಿದ್ದು, ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ ಎಂದು ಸರ್ಕಾರದ ವಿರುದ್ಧ ಹರಿಹಾಯ್ದರು.

ಗುತ್ತಿಗೆದಾರರು ತಮ್ಮ ಕೈಯಿಂದ ಹಣ ಹಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಾರೆ. ಆದರೆ ಮಾಡಿರುವ ಕೆಲಸಕ್ಕೆ ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ. ಇದರ ಪರಿಣಾಮ ಗುತ್ತಿಗೆದಾರರು ಸುಮಾರು ₹1,200 ಕೋಟಿ ಜಿಎಸ್‌ಟಿ ಬಾಕಿ ಉಳಿಸಿಕೊಂಡಿದ್ದಾರೆ. ಇವರಿಗೆಲ್ಲ ನೋಟಿಸ್ ಜಾರಿಯಾಗಿದೆ. ಈ ಕುರಿತು ಸರ್ಕಾರಕ್ಕೆ ಹೈಕೋರ್ಟ್ ಎಚ್ಚರಿಕೆ ನೀಡಿ ಬಿಲ್ ಪಾವತಿಗೆ ಸೂಚಿಸಿದೆ. ಆದರೆ, ಸರ್ಕಾರ ಹಣ ಬಿಡುಗಡೆ ಮಾಡುತ್ತಿಲ್ಲ ಎಂದರು.

'ಈ ಸರ್ಕಾರ ಹೊರ ರಾಜ್ಯದ ಗುತ್ತಿಗೆದಾರರಿಗೆ ಮಣೆ ಹಾಕುತ್ತಿದೆ. ಹೊರ ರಾಜ್ಯಗಳ ಗುತ್ತಿಗೆದಾರರಿಂದ ಶೇ 80ರಷ್ಟು ಕಮಿಷನ್ ಪಡೆದು ಅವರಿಗೆ ಹಣ ಬಿಡುಗಡೆ ಮಾಡುತ್ತಿದೆ. ಹಿಂದೆ ನಮ್ಮ ಸರ್ಕಾರವನ್ನು ಶೇ40 ರ ಸರ್ಕಾರ ಎಂದು ಆರೋಪ ಮಾಡಿದ್ದರು. ಈಗ ಇವರ ಸರ್ಕಾರ ಶೇ 80ರಷ್ಟು ಕಮಿಷನ್ ಸರ್ಕಾರ. ಡಿಸಿಎಂಗೆ ಕಮಿಷನ್ ಕೊಟ್ಟರಷ್ಟೇ ಹಣ ಬಿಡುಗಡೆಯಾಗುತ್ತದೆ' ಎಂದು ಯತ್ನಾಳ ಹೇಳಿದಾಗ ಕಾಂಗ್ರೆಸ್ ಶಾಸಕರು ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿದರು .

ಕಾಮಗಾರಿ ಪೂರ್ಣಕ್ಕೆ ಬಿಲ್‌ಬಾಕಿ ನೆಪ ಸಲ್ಲದು: ಜಮೀರ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಿಲ್ ಪಾವತಿಯಾಗಿಲ್ಲ ಎಂಬ ಕಾರಣ ಮುಂದಿಟ್ಟು ಗುತ್ತಿಗೆ ಸಂಸ್ಥೆಗಳು ವಸತಿ ಯೋಜನೆ ಕಾಮಗಾರಿಗಳನ್ನು ನಿಲ್ಲಿಸುವಂತಿಲ್ಲ ಎಂದು ವಸತಿ ಸಚಿವ ಜಮೀರ್ ಅಹಮದ್ ಖಾನ್ ಸೂಚಿಸಿದರು.

ಸುವರ್ಣ ವಿಧಾನಸೌಧದಲ್ಲಿ ಶಿವಮೊಗ್ಗ ಶಾಸಕ ಎಸ್.ಎನ್. ಚನ್ನಬಸಪ್ಪ ಹಾಗೂ ಅಧಿಕಾರಿಗಳ ಜತೆ ಸಭೆ ನಡೆಸಿದ ಅವರು, ಕಾಲಮಿತಿಯೊಳಗೆ ಯೋಜನೆಗಳು ಪೂರ್ಣಗೊಂಡು ಫಲಾನುಭವಿಗಳಿಗೆ ಹಂಚಿಕೆಯಾಗಬೇಕು. ಕಾಮಗಾರಿ ನಿಲ್ಲಿಸಿದರೆ ಅಂತಹ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗುವುದು ಎಂದರು.

ಶಿವಮೊಗ್ಗ ನಗರ ವಿಧಾನಸಭಾ ಕ್ಷೇತ್ರದ 16 ಕೊಳೆಗೇರಿಗಳಲ್ಲಿ ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸುತ್ತಿರುವ 1,590 ಮನೆಗಳಲ್ಲಿ ಬಾಕಿ ಉಳಿದ ಎಲ್ಲ ಮನೆಗಳನ್ನೂ ಮೂರು ತಿಂಗಳ ಒಳಗೆ ಪೂರ್ಣ ಗೊಳಿಸಲು ತಾಕೀತು ಮಾಡಿದರು.

₹88.59 ಕೋಟಿಯ ಈ ಯೋಜನೆಯಲ್ಲಿ 884 ಮನೆ ಗಳು ಪೂರ್ಣಗೊಂಡಿವೆ. ಎನ್‌ಪಿಎಸ್ ಸಂಸ್ಥೆಗೆ ₹36 ಕೋಟಿ ಪಾವತಿಯಾಗಿದೆ. ₹1.5 ಕೋಟಿ ಬಾಕಿ ಇದೆ. ಎಲ್ಲ ಮನೆಗಳನ್ನು ಪೂರ್ಣಗೊಳಿಸಿದ ನಂತರವೇ ಬಾಕಿ ಹಣ ಬಿಡುಗಡೆ ಮಾಡಲಾಗುವುದು ಎಂದರು.

ಕೋರ್ಟ್ ಪ್ರಕರಣಗಳಿಂದ ನೇಮಕಾತಿ ವಿಳಂಬ: ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: ಅಧಿಕ ಸಂಖ್ಯೆಯ ಅಭ್ಯರ್ಥಿಗಳು ಕೋರ್ಟ್ ಮೊರೆ ಹೋಗುತ್ತಿರುವುದರಿಂದ ಕರ್ನಾಟಕ ಲೋಕಸೇವಾ ಆಯೋಗದ ಪ್ರತಿ ನೇಮಕಾತಿಯೂ ವಿಳಂಬವಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಬಿಜೆಪಿಯ ಎನ್.ರವಿಕುಮಾರ್, ಶಶೀಲ್ ನಮೋಶಿ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮುಖ್ಯಮಂತ್ರಿ, ಅಂಗವಿಕಲ ಅಭ್ಯರ್ಥಿಗಳ ವೈದ್ಯಕೀಯ ತಪಾಸಣೆ, ಎಲ್ಲ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆ, ಹಲವು ಹುದ್ದೆಗಳಿಗೆ ಒಬ್ಬರೇ ಆಯ್ಕೆಯಾದ ಪ್ರಕರಣಗಳೂ ಆಯ್ಕೆಯ ವಿಳಂಬಕ್ಕೆ ಇತರೆ ಕಾರಣಗಳು ಎಂದು ವಿವರಿಸಿದ್ದಾರೆ.

ನೇಮಕಾತಿ ಪ್ರಕ್ರಿಯೆಯಲ್ಲಿನ ವಿಳಂಬ ತಪ್ಪಿಸಲು ಲೋಕಸೇವಾ ಆಯೋಗದ ಅಧಿಕಾರಿಗಳು, ಸದಸ್ಯರು ಹೆಚ್ಚುವರಿ ಸಮಯ ಹಾಗೂ ರಜಾ ದಿನಗಳಲ್ಲೂ ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ.

ಬಾಲನ್ಯಾಯ ಮಂಡಳಿ ಮುಂದೆ 9,430 ಪ್ರಕರಣ: ಲಕ್ಷ್ಮಿ ಹೆಬ್ಬಾಳಕರ

ವಿಧಾನ ಪರಿಷತ್: ಬಾಲನ್ಯಾಯ ಮಂಡಳಿಯ ಮುಂದೆ ಐದು ವರ್ಷಗಳಲ್ಲಿ 9,430 ಪ್ರಕರಣಗಳು ದಾಖಲಾಗಿವೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದ್ದಾರೆ.

ಜೆಡಿಎಸ್ ಸದಸ್ಯ ಗೋವಿಂದ ರಾಜು ಪ್ರಶ್ನೆಗೆ ಅವರು ಲಿಖಿತ ಉತ್ತರ ನೀಡಿದ ಅವರು, 'ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಲೇ ಇದೆ. 2019ರಲ್ಲಿ 1,529 ಪ್ರಕರಣಗಳು ದಾಖಲಾಗಿದ್ದವು. ಪ್ರಸಕ್ತ ವರ್ಷ 2,132 ಪ್ರಕರಣಗಳು ದಾಖಲಾಗಿವೆ. 18 ವರ್ಷದ ಒಳಗಿನವರ ವಿರುದ್ಧ ಪೊಲೀಸರು 381 ಎಫ್‌ಐಆರ್ ದಾಖಲಿಸಿದ್ದಾರೆ' ಎಂದು ವಿವರ ನೀಡಿದ್ದಾರೆ.18 ವರ್ಷದ ಒಳಗಿನ ಮಕ್ಕಳೂ ಮಾದಕ ವ್ಯಸನಿಗಳಾಗಿರುವುದು ಹಲವು ಪ್ರಕರಣಗಳಲ್ಲಿ ಸಾಬೀತಾಗಿದೆ. ಈ ಕುರಿತು ನಿರಂತರ ಜಾಗೃತಿ ಮೂಡಿಸಲಾಗುತ್ತಿದೆ ಎಂದಿದ್ದಾರೆ.

'ಸ್ವಂತ ಖರ್ಚಿನಲ್ಲಿ ಮೋಡ ಬಿತ್ತನೆಗೆ ಸಿದ್ಧ'

ಪ್ರಜಾವಾಣಿ ವಾರ್ತೆ



ಪ್ರಕಾಶ್ ಕೋಳಿವಾಡ

ವಿಧಾನಸಭೆ: ಮುಂದಿನ ಮೂರರಿಂದ ನಾಲ್ಕು ದಿನಗಳು ರಾಜ್ಯದ ಹಲವು ಭಾಗಗಳಲ್ಲಿ ಮಳೆ ಸುರಿಸಬಲ್ಲ ಮೋಡಗಳು ಬರುವುದರಿಂದ, ಮೋಡ ಬಿತ್ತನೆಗೆ ಸರ್ಕಾರ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್‌ನ ಪ್ರಕಾಶ್ ಕೋಳಿವಾಡ ಒತ್ತಾಯಿಸಿದರು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಮೋಡ ಬಿತ್ತನೆ ಮಾಡಲು ಸೂಕ್ತವಾದ ಮೋಡಗಳು ಬರಲಿದ್ದು, ಮೋಡ ಬಿತ್ತನೆ ಮಾಡಬಹುದು ಎಂದು ಕೇಂದ್ರ ಹವಾಮಾನ ಇಲಾಖೆಯೂ ಹೇಳಿದೆ. ರಾಜ್ಯದಲ್ಲಿ ಬರಗಾಲ ಇರುವುದರಿಂದ ರೈತರ ಅನುಕೂಲಕ್ಕಾಗಿ ಮೋಡ ಬಿತ್ತನೆ ಮಾಡಲು ಸರ್ಕಾರ ಮುಂದಾಗಬೇಕು ಎಂದು ಮನವಿ ಮಾಡಿದರು.

'ಶನಿವಾರ ಮತ್ತು ಭಾನುವಾರ ಸದನಕ್ಕೆ ರಜೆ ಇರುವುದರಿಂದ ಇವತ್ತೇ ಕ್ರಮ ತೆಗೆದುಕೊಳ್ಳಬೇಕು. ಪೈಲಟ್ ಶುಲ್ಕ, ನಿರ್ವಹಣಾ ವೆಚ್ಚವನ್ನು ಸರ್ಕಾರವೇ ನೀಡಿದರೆ ನಾನೇ ಮೋಡ ಬಿತ್ತನೆ ಮಾಡಿಸುತ್ತೇನೆ. ಒಂದು ವೇಳೆ ಅನುದಾನ ಬಿಡುಗಡೆ ಮಾಡುವುದು ಕಷ್ಟವಾದರೆ, ಮುಖ್ಯ ಕಾರ್ಯದರ್ಶಿಯವರು ಅನುಮತಿ ನೀಡಿದರೂ ಸ್ವಂತ ಖರ್ಚಿನಿಂದ ಮೋಡ ಬಿತ್ತನೆ ಮಾಡಿಸುತ್ತೇನೆ. ಈಗಾಗಲೇ ನಮ್ಮ ಜಿಲ್ಲೆಯಲ್ಲಿ ಸ್ವಂತ ಖರ್ಚಿನಿಂದ ಮೋಡ ಬಿತ್ತನೆ ಮಾಡಿಸಿದ್ದೇನೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, 'ಪ್ರಕಾಶ್ ಅವರು ಮೋಡ ಬಿತ್ತನೆ ವಿಚಾರದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದಾರೆ. ಇದಕ್ಕೆಲ್ಲ ಟೆಂಡರ್ ಪ್ರಕ್ರಿಯೆ ನಡೆಸಬೇಕಾಗುತ್ತದೆ. ಆದರೆ, 3-4 ದಿನಗಳಲ್ಲಿ ಮೋಡ ಬಿತ್ತನೆ ಮಾಡಬೇಕು ಎಂಬುದಾಗಿ ಮನವಿ ಮಾಡಿದ್ದಾರೆ. ಈ ಬಗ್ಗೆ ಹಣಕಾಸು ಇಲಾಖೆ ಜತೆ ಚರ್ಚೆ ಮಾಡುತ್ತೇನೆ. ಈ ವಿಚಾರದಲ್ಲಿ ನಾನು ಸಕಾರಾತ್ಮಕವಾಗಿದ್ದೇನೆ' ಎಂದು ಭರವಸೆ ನೀಡಿದರು.

ಇನ್ನು ಎರಡು ತಿಂಗಳಲ್ಲಿ ಫಾರಂ 3 ಸಮಸ್ಯೆ ಇತ್ಯರ್ಥ: ರಹೀಂ ಖಾನ್

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಫಾರಂ 3 ಸಮಸ್ಯೆಯನ್ನು ಇನ್ನು ಎರಡು ತಿಂಗಳುಗಳಲ್ಲಿ ಬಗೆಹರಿಸಲಾಗುವುದು. ಬಿಬಿಎಂಪಿ ಮಾದರಿಯಲ್ಲಿ ಬಿ ಖಾತಾ ನೀಡುವ ಬಗ್ಗೆ ಕ್ರಮವಹಿಸಲಾಗುವುದು ಎಂದು ಪೌರಾಡಳಿತ ಸಚಿವ ರಹೀಂಖಾನ್ ಭರವಸೆ ನೀಡಿದರು.

ಪ್ರಶ್ನೋತ್ತರ ಅವಧಿಯಲ್ಲಿ ಕಾಂಗ್ರೆಸ್‌ನ ಭೀಮಣ್ಣ ಟಿ.ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿ ಈ ವಿಷಯ ತಿಳಿಸಿದರು.

ಈ ಸಮಸ್ಯೆಯ ಪರಿಹಾರಕ್ಕಾಗಿ ಸಂಪುಟ ಉಪಸಮಿತಿಯನ್ನು ರಚಿಸಲಾಗಿದೆ. ಈಗಾಗಲೇ ಮೂರು ಸಭೆಗಳು ನಡೆದಿದ್ದು, ಅಂತಿಮ ಸಭೆ ನಡೆಯಬೇಕಾಗಿದೆ. ಎರಡು ತಿಂಗಳೊಳಗೆ ಈ ಸಭೆ ನಡೆಯಲಿದ್ದು, ಸಮಸ್ಯೆಗೆ ಪರಿಹಾರ ಸಿಗಲಿದೆ ಎಂಬುದಾಗಿ ವಿಶ್ವಾಸ ವ್ಯಕ್ತಪಡಿಸಿದರು.

10 ಯೋಜನೆಗಳಿಗೆ ಅನುಮೋದನೆ: ಬೆಂಗಳೂರಿನ ಇನ್ವೆಸ್ಟ್ ಕರ್ನಾಟಕ ಹಾಗೂ ಹುಬ್ಬಳ್ಳಿಯ ಎಫ್‌ಎಂಸಿಜಿ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಮಾಡಿಕೊಂಡ ಒಡಂಬಡಿಕೆಗಳ ಪೈಕಿ 10 ಯೋಜನೆಗಳಿಗೆ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯಲ್ಲಿ ಅನುಮೋದನೆ ನೀಡಲಾಗಿದೆ ಎಂದು ಬಿಜೆಪಿಯ ಎಂ.ಚಂದ್ರಪ್ಪ ಅವರ ಪ್ರಶ್ನೆಗೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಮಾಹಿತಿ ನೀಡಿದರು.

'₹2,912 ಕೋಟಿ ಅನುದಾನ'

ಸ್ವಚ್ಛ ಭಾರತ ಮಿಷನ್ 1.0 ಯೋಜನೆಗೆ ₹854 ಕೋಟಿ ಹಾಗೂ ಸ್ವಚ್ಛ ಭಾರತ ಮಿಷನ್ 2.0 ಯೋಜನೆಗೆ ₹2,058 ಕೋಟಿ ಸೇರಿ ಒಟ್ಟು ₹2912 ಕೋಟಿ ಅನುದಾನವನ್ನು ಯೋಜನೆಯ ಅನುಷ್ಠಾನಕ್ಕೆ ಮೀಸಲು ಇರಿಸಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ರಾಜ್ಯದ ಎಲ್ಲ ಸ್ಥಳೀಯ ನಗರಾಭಿವೃದ್ಧಿ ಸಂಸ್ಥೆಗಳಲ್ಲಿ ಸ್ವಚ್ಛ ಭಾರತ್ ಮಿಷನ್ ಅನುಷ್ಠಾನ ಮಾಡಲು ಪ್ರತ್ಯೇಕ ಐಎಎಸ್ ಅಧಿಕಾರಿಯನ್ನು ನೇಮಿಸಲಾಗಿದೆ. ಎಲ್ಲ ಮಹಾನಗರ ಪಾಲಿಕೆಗಳಲ್ಲಿ ಘನತ್ಯಾಜ್ಯ ವಸ್ತುಗಳ ಸಂಗ್ರಹಣೆ, ಸಾಗಣೆಕೆ, ಸಂಸ್ಕರಣೆ ಮತ್ತು ವಿಲೇವಾರಿಗೆ ಅಗತ್ಯವಿರುವ ಯಂತ್ರೋಪರಣಗಳನ್ನು ಮತ್ತು ಸಿವಿಎಲ್ ಕಾಮಗಾರಿ ಕೈಗೊಳ್ಳಲು ವಿಸ್ತೃತ ಯೋಜನೆಗೆ ಅನುಮತಿ ನೀಡಿದ್ದು ₹370 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಹುಬ್ಬಳ್ಳಿ–ಧಾರವಾಡದಲ್ಲಿ 450 ಟಿಪಿಡಿ ಹಾಗೂ ತುಮಕೂರು ನಗರದಲ್ಲಿ 140 ಟಿಪಿಡಿ ಸಾಮರ್ಥ್ಯದ ತ್ಯಾಜ್ಯ ಸಂಸ್ಕರಣೆ ಸೌಲಭ್ಯ ಕಲ್ಪಿಸಲಾಗಿದೆ. ಈಗಾಗಲೇ ಬಹಳ ವರ್ಷಗಳಿಂದ ಶೇಖರಣೆಯಾಗಿರುವ ಹಳೆಯ ಪಾರಂಪರಿಕ ತ್ಯಾಜ್ಯವನ್ನು ತೆರವುಗೊಳಿಸಲು ಬಯೋ ಮೈನಿಂಗ್ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

ನಿಸರ್ಗ ವಿಕೋಪ: ಬರದ ಕುರಿತು ಚರ್ಚೆಯಲ್ಲಿ ಶರತ್ ಬಚ್ಚೇಗೌಡ ಪ್ರಕೃತಿ ರಕ್ಷಣೆಯ ಪಾಠ

'ಈಗ ಬರೀ ಟ್ರೈಲರ್, ಪಿಕ್ಚರ್ ಬಾಕಿ ಇದೆ'

ಪ್ರಜಾವಾಣಿ ವಾರ್ತೆ

ವಿಧಾನಸಭೆ: 'ಈಗ ಸಂಭವಿಸುತ್ತಿರುವ ನೈಸರ್ಗಿಕ ವಿಕೋಪ ಕೇವಲ ಟ್ರೈಲರ್, ಮುಂದೆ ಪಿಕ್ಚರ್ ಬಾಕಿ ಇದೆ. ಈಗಲೇ ನಾವು ಎಚ್ಚೆತ್ತುಕೊಳ್ಳದಿದ್ದರೆ, ಭೂಮಿಯಲ್ಲಿ ವಾಸ ಮಾಡುವುದಕ್ಕೂ ಕಷ್ಟವಾಗುವ ದಿನಗಳು ದೂರವಿಲ್ಲ. ಅನ್ಯಗ್ರಹ ಹುಡುಕಿಕೊಂಡು ಹೋಗಬೇಕಾದೀತು' ಎಂದು ಕಾಂಗ್ರೆಸ್‌ನ ಶರತ್ ಬಚ್ಚೇಗೌಡ ಎಚ್ಚರಿಕೆ ನೀಡಿದರು.

ಬರದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಅವರು. 'ನಿಸರ್ಗದ ಜತೆ ಹೊಂದಿಕೊಂಡು ನಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳದೇ ಹೋದರೆ ಉಳಿಗಾಲವಿಲ್ಲ. ಆಧುನಿಕತೆಯ ಅತಿಕ್ರಮಣ, ದೌರ್ಜನ್ಯ ಮಿತಿ ಮೀರಿದ ಕಾರಣ, ಬರ, ಪ್ರವಾಹ, ಭೂಕಂಪದಂತಹ ವಿಕೋಪಗಳನ್ನು ನಾವು ಕಾಣುತ್ತಿದ್ದೇವೆ' ಎಂದರು.

'ಇವೆಲ್ಲವುಗಳನ್ನು ನಾವು ಅರಿತುಕೊಳ್ಳುವುದರ ಜತೆಗೆ ಜನರಲ್ಲೂ ಜಾಗೃತಿ ಮೂಡಿಸುವ ಜವಾಬ್ದಾರಿ ನಮ್ಮ ಮೇಲಿದೆ. ಜಾಗತಿಕ ತಾಪಮಾನ ಎಂಬ ಪದ ಹೋಗಿ ಹವಾಮಾನ ಬದಲಾವಣೆ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದೇವೆ. ನಿಸರ್ಗದಲ್ಲಿ ಮಾನವ ಹಸ್ತಕ್ಷೇಪ ನಿಲ್ಲಬೇಕು. ಜಾಗತಿಕ ತಾಪಮಾನದಲ್ಲಿ ಒಂದು ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. 2023 ವರ್ಷ ಇತಿಹಾಸದಲ್ಲೇ ಅತಿ ಹೆಚ್ಚು ತಾಪಮಾನದ ವರ್ಷ ಎಂದು ದಾಖಲಾಗಿದೆ' ಎಂದು ಶರತ್ ಹೇಳಿದರು.

'ವಿಶ್ವಸಂಸ್ಥೆ ಅಧ್ಯಯನದ ಪ್ರಕಾರ ಜಾಗತಿಕ ತಾಪಮಾನ ಸಂಕಷ್ಟಕ್ಕೆ ಸಿಲುಕುವ 139 ರಾಷ್ಟ್ರಗಳ ಪೈಕಿ ಭಾರತ 6ನೇ ಸ್ಥಾನದಲ್ಲಿದೆ. ಈ ಬಗ್ಗೆ ಕೂಲಂಕಷವಾಗಿ ನಾವೆಲ್ಲರೂ ಆಲೋಚಿಸಬೇಕಾಗಿದೆ. ಹವಾಮಾನ ಬದಲಾವಣೆಯು ಭಾರತದ ಮುಂಗಾರಿನ ಮೇಲೆ ಈಗಾಗಲೇ ಪರಿಣಾಮ ಬೀರಿದೆ. ಸಕಾಲದಲ್ಲಿ ಮಳೆ ಆಗುತ್ತಿಲ್ಲ. ಇದರಿಂದ ಶೇ 60ರಷ್ಟು ಫಸಲು ಸಿಗುತ್ತಿಲ್ಲ. ಇನ್ನೂ ಆತಂಕದ ವಿಚಾರ ಎಂದರೆ ಭೂಮಿಯ ತಾಪಮಾನ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಾಗಲಿದೆ' ಎಂದರು.

ಕರಾವಳಿಯಲ್ಲಿ ಅಂತರ್ಜಲ ಕುಸಿತ: ಕರಾವಳಿ ಪ್ರದೇಶದಲ್ಲಿ ಅಂತರ್ಜಲ ಮಟ್ಟವು ಕುಸಿದು ಹೋಗಿದೆ. 2017ರಲ್ಲಿ 10.43 ಮೀಟರ್ ಇದ್ದ ಅಂತರ್ಜಲ ಮಟ್ಟ, ಈ ವರ್ಷ 9.20 ಮೀಟರ್‌ಗೆ ಕುಸಿತವಾಗಿದೆ. ಬೋರ್‌ವೆಲ್‌ಗಳಲ್ಲಿ 150 ಅಡಿಗೆ ಸಿಗುತ್ತಿದ್ದ ಪ್ರದೇಶದಲ್ಲಿ ಈಗ 900 ಅಡಿಯಿಂದ 1200 ಅಡಿ ತೋಡಿದರೂ ನೀರು ಸಿಗುತ್ತಿಲ್ಲ ಎಂದು ಬಿಜೆಪಿಯ ಹರೀಶ್ ಪೂಂಜಾ ಆತಂಕ ವ್ಯಕ್ತಪಡಿಸಿದರು.

ಜೆಡಿಎಸ್‌ನ ಎಂ.ಟಿ.ಕೃಷ್ಣಪ್ಪ, ಕಾಂಗ್ರೆಸ್‌ನ ಎಂ. ರೂಪಕಲಾ ಅವರೂ ಮಾತನಾಡಿದರು.

'ಹಳದಿ ಎಲೆ ರೋಗ: ನೆರವಿಗೆ ಬನ್ನಿ'

ಅಡಿಕೆ ಬೆಳೆಯನ್ನು ಬಾಧಿಸುತ್ತಿರುವ ಹಳದಿ ಎಲೆ ರೋಗವು ತೋಟವನ್ನೇ ನಾಶ ಮಾಡಲಿದ್ದು, ಬೆಳೆಗಾರರ ನೆರವಿಗೆ ಸರ್ಕಾರ ಧಾವಿಸಬೇಕು ಎಂದು ಬಿಜೆಪಿಯ ಆರಗ ಜ್ಞಾನೇಂದ್ರ ಹಾಗೂ ಕಾಂಗ್ರೆಸ್‌ನ ಅಶೋಕ ಕುಮಾರ್ ರೈ ಆಗ್ರಹಿಸಿದರು.

ಬರದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಜ್ಞಾನೇಂದ್ರ, 'ಹಳದಿ ಎಲೆ ರೋಗದ ಪರಿಹಾರಕ್ಕೆ ಸಂಶೋಧನೆ ನಡೆಸಲು ನಮ್ಮ ಸರ್ಕಾರ ಇದ್ದಾಗ ₹10 ಕೋಟಿ ನೀಡಿದ್ದೆವು. ಈಗಿನ ಸರ್ಕಾರ ಮುಂದುವರಿಸಲಿಲ್ಲ. ಸಿದ್ದರಾಮಯ್ಯನವರು ಈಗ ನೆರವಿಗೆ ಬರಬೇಕು ಎಂದರು.

ಹಳದಿ ಎಲೆ ರೋಗ ಮತ್ತು ಎಲೆ ಚುಕ್ಕಿ ರೋಗದಿಂದಾಗಿ ಅಡಿಕೆ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ ಎಂದ ಅಶೋಕ ಕುಮಾರ್ ರೈ, ಕೇಂದ್ರ ಸರ್ಕಾರ ಅಡಿಕೆ ಆಮದಿಗೆ ಅವಕಾಶ ನೀಡಿರುವುದರಿಂದ ಅಡಿಕೆ ಬೆಲೆ ಕುಸಿದು ಹೋಗಿದೆ. ಇದರಿಂದ ಬೆಳೆಗಾರರು ಕಂಗಾಲಾಗಿದ್ದಾರೆ. ಆದ್ದರಿಂದ ಆಮದಿನ ಮೇಲೆ ನಿರ್ಬಂಧ ವಿಧಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮ ಅನುಷ್ಠಾನವಾಗದೇ ಇರುವುದೇ ವಲಸೆಗೆ ಕಾರಣ: ಅಪ್ಪಾಜಿ

ಸರ್ಕಾರವು ಬಡವರು, ಮಧ್ಯಮವರ್ಗದವರಿಗೆ ಹಲವು ಕಾರ್ಯಕ್ರಮಗಳನ್ನು ಘೋಷಿಸಿದ್ದರೂ ಅದು ತಳಹಂತದಲ್ಲಿ ಅನುಷ್ಠಾನವಾಗದೇ ಇರುವುದರಿಂದ ಜನರು ವಲಸೆ ಹೋಗುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಅಪ್ಪಾಜಿ ನಾಡಗೌಡ ಹೇಳಿದರು.

ಎಂನರೇಗಾ ಯೋಜನೆ ಜಾರಿಯಲ್ಲಿದೆ. ಸರ್ಕಾರ ಅನೇಕ ಗ್ಯಾರಂಟಿಗಳನ್ನೂ ಕೊಟ್ಟಿದೆ. ಸಚಿವರು ಹೆಚ್ಚಿನ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಪಂಚಾಯತ್‌ರಾಜ್, ಕಂದಾಯ ಇಲಾಖೆಗಳ ಕೆಳಹಂತದ ಅಧಿಕಾರಿಗಳನ್ನು ಜಾಗೃತಗೊಳಿಸುವ ಕೆಲಸವನ್ನು ಮಾಡಬೇಕಿದೆ ಎಂದರು.

ಬಾಯಾರಿಕೆಯಾದಾಗ ನೀರಿನ ಬಾಟಲಿ ಕೊಡುವುದು ಐದು ಸೆಕೆಂಡ್ ತಡವಾದರೂ ಎಲ್ಲರ ಮೇಲೂ ರೇಗುತ್ತೇವೆ. ಹಳ್ಳಿಗಳಲ್ಲಿ ವಾರಕ್ಕೊಮ್ಮೆ ಕುಡಿಯುವ ನೀರು ಪೂರೈಕೆಯಾಗುತ್ತಿದೆ. ಅವರ ಸ್ಥಿತಿ ಹೇಗಿರಬೇಡ. ಪರಿಸ್ಥಿತಿ ಹೀಗೆ ಮುಂದುವರಿಸಿದರೆ ಜನರ ಕಣ್ಣಲ್ಲಿ ನೀರಲ್ಲ, ರಕ್ತವೇ ಬರಲಿದೆ ಅಪ್ಪಾಜಿ ಹೇಳಿದರು.



'ಗೋಡೆ' ಸಾಹಸ

ಬೆಳಗಾವಿಯ ಸುವರ್ಣ ವಿಧಾನಸೌಧದ ಆವರಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಹವಾಸ ಅಕಾಡೆಮಿ ಆಯೋಜಿಸಿರುವ ಕೃತಕ ಮೊಬೈಲ್ ಗೋಡೆಯನ್ನು ಸಾಹಸಿಪ್ರಿಯರು ಏರಿದರು

ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಪಕ್ಷದಲ್ಲಿ ಅಧಿಕಾರ ತಪ್ಪಿದ್ದಕ್ಕೆ ಸೇಡು ತೀರಿಸಿಕೊಳ್ಳಲು ಪರೋಕ್ಷವಾಗಿ ನನ್ನ ಮೇಲೆ ಟೀಕೆ –ಸಿದ್ದರಾಮಯ್ಯ ವಾಗ್ದಾಳಿ

‘ಮೌಲ್ವಿ ಪ್ರಕರಣ: ಯತ್ನಾಳ ಗುರಿ ಮೋದಿ’

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ‘ಮೌಲ್ವಿ ತನ್ವೀರ್ ಪೀರ್ ಹಾಶ್ಮಿ ಅವರ ಜತೆಗಿನ ನನ್ನ ಪೋಟೊ ತೋರಿಸಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪ ಮಾಡಿದ್ದರೂ, ಅವರ ಗುರಿ ಪ್ರಧಾನಿ ನರೇಂದ್ರ ಮೋದಿ ಎಂಬುದು ಬಯಲಾಗ ತೊಡಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಮೋದಿಯವರ ಜತೆ ಮೌಲ್ವಿ ಇರುವ ಪೋಟೋವನ್ನು ‘ಎಕ್ಸ್’ ಖಾತೆಯಲ್ಲಿ ಟ್ಯಾಗ್ ಮಾಡಿರುವ ಮುಖ್ಯಮಂತ್ರಿ, ಹಾಶ್ಮಿ ಅವರ ಜತೆಗೆ ಇತರ ಬಿಜೆಪಿ ನಾಯಕರು ಮಾತ್ರವಲ್ಲ, ಸಾಕ್ಷಾತ್ ಮೋದಿ ಅವರೂ ಸಂಬಂಧ ಹೊಂದಿರುವುದನ್ನು ಈ ಪೋಟೊಗಳು ಹೇಳುತ್ತಿವೆ’ ಎಂದಿದ್ದಾರೆ.

‘ಹಾಶ್ಮಿ ಅವರಿಗೆ ಆತ್ಮೀಯರಾಗಿರುವ, ಅವರ ನೆರೆಹೊರೆಯವರೇ ಆದ ಯತ್ನಾಳ ಅವರಿಗೆ ಇದು ತಿಳಿದಿರಲಿಲ್ಲ ಎನ್ನುವುದನ್ನು ನಂಬಲು ಸಾಧ್ಯವೇ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ

‘ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಸ್ಥಾನ, ವಿರೋಧಪಕ್ಷದ ನಾಯಕನ ಸ್ಥಾನ ತಪ್ಪಿದ್ದರಿಂದ ಯತ್ನಾಳ ಕೆರಳಿದ್ದಾರೆ. ಅದಕ್ಕೆ ಕಾರಣರಾದ ಪ್ರಧಾನಿ ಮೋದಿ, ಅಮಿತ್ ಶಾ ವಿರುದ್ಧ ಸೇಡು ತೀರಿಸಿಕೊಳ್ಳಲು ಹಾಶ್ಮಿ ಜತೆಗಿನ ನನ್ನ ಪೋಟೊ ತೋರಿಸಿ ಆರೋಪಿಸಿದ್ದಾರೆ. ಈ ಆರೋಪದ ನಂತರ ಪ್ರಧಾನಿ ಸಂಬಂಧದ ವಿವರವೂ ಹೊರಬರಲಿದೆ ಎನ್ನುವುದು ಅವರಿಗೆ ಖಂಡಿತ ಗೊತ್ತಿತ್ತು. ಅವೆಲ್ಲವೂ ಬಯಲಾಗಿ ಪ್ರಧಾನಿ ಮತ್ತು ಬಿಜೆಪಿ ನಾಯಕರು ಮುಜುಗರ ಕ್ಕೀಡಾಗಲಿ ಎನ್ನುವ ದುರುದ್ದೇಶದಿಂದ ಇಂತಹ ಆಟ ಆಡಿದ್ದಾರೆ’ ಎಂದಿದ್ದಾರೆ.

‘ಮೌಲ್ವಿ ಜತೆಗಿನ ಸ್ನೇಹವನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದೇನೆ. ಹಾಶ್ಮಿಯವರು ಅವರ ಮೇಲಿನ ಆರೋಪದ ತನಿಖೆಗೆ ಕೇಂದ್ರಕ್ಕೆ ಸವಾಲು ಹಾಕಿದ್ದಾರೆ. ಮೋದಿ ಅವರು ತಮ್ಮ ವಿರುದ್ಧದ ಆರೋಪಕ್ಕೆ ಪ್ರತಿಕ್ರಿಯಿಸಬೇಕಾಗುತ್ತದೆ. ಯತ್ನಾಳ ಅವರಿಗೆ ಹಾಶ್ಮಿ ಕುಟುಂಬದ ಜತೆಗಿದ್ದ ವ್ಯಾಪಾರ ಸಂಬಂಧ ಬಯಲಾಗಿದೆ. ಪ್ರಧಾನಿಯವರು ತಕ್ಷಣ ತನಿಖೆಗೆ ಆದೇಶಿಸಬೇಕು. ಹಾಶ್ಮಿ ಜತೆಗಿನ ಸಂಬಂಧದ ವಿವರವನ್ನು ದೇಶದ ಮುಂದಿಡಬೇಕು. ಎರಡೂ ಮಾಡದಿದ್ದರೆ, ಸುಳ್ಳು ಆರೋಪ ಮಾಡುವ ಯತ್ನಾಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

ಯತ್ನಾಳ ಅವರು ಯಡಿಯೂರಪ್ಪ ಮತ್ತು ಅವರ ಮಕ್ಕಳ ವಿರುದ್ಧವೂ ಹಿಂದೆ ಆರೋಪಿಸಿದ್ದರು. ಬಿಜೆಪಿಯಲ್ಲಿ ಸಿ.ಎಂ ಆಗಲು ಪಕ್ಷದ ಹೈಕಮಾಂಡಿಗೆ ₹2 ಸಾವಿರ ಕೋಟಿ ಕೊಡಬೇಕಾಗುತ್ತದೆ ಎಂದಿದ್ದರು. ಅವರ ಬಾಯಿಬಲದ ಹಿಂದಿನ ಶಕ್ತಿ ಯಾವುದು? ಬಿಜೆಪಿಯ ಯಾವ ‘ಜೀ’ ಗಳ ಬಲದಿಂದ ಇಂತಹ ಆರೋಪ ಮಾಡಿಯೂ ಬಚಾವಾಗುತ್ತಿದ್ದಾರೆ ಎನ್ನುವುದೂ ಬಯಲಾಗಬೇಕಾಗಿದೆ ಎಂದು ಆಗ್ರಹಪಡಿಸಿದ್ದಾರೆ.



ಮೌಲ್ವಿ ಹಾಶ್ಮಿ ಜೊತೆಗೆ ಪ್ರಧಾನಿ ನರೇಂದ್ರ ಮೋದಿ ಇರುವ ಚಿತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ

ಮೌಲ್ವಿ ವಿರುದ್ಧ ಎನ್ಐಎಗೆ ಮಾಹಿತಿ: ಯತ್ನಾಳ

‘ಮೌಲ್ವಿ ಹಾಶ್ಮಿ ವಿರುದ್ಧ ಎನ್ಐಎ ಅಧಿಕಾರಿಗಳಿಗೆ ಮಾಹಿತಿ ಕೊಟ್ಟಿದ್ದೇನೆ. ಇನ್ನಷ್ಟು ಮಾಹಿತಿ ಕೊಡುವೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಶುಕ್ರವಾರ ಹೇಳಿದರು.

‘ಸಿದ್ದರಾಮಯ್ಯ ಅವರಿಗೆ ಕಾಂಗ್ರೆಸ್‌ನಲ್ಲಿ ಬೆಂಬಲ ಕುಗ್ಗಿದೆ. ಹತಾಶರಾಗಿ ಮೌಲ್ವಿಗಳ, ದೇಶದ್ರೋಹಿಗಳ ಸಭೆಗೆ ಹೋಗುತ್ತಿದ್ದಾರೆ. ಮುಸ್ಲಿಮರ ಬೆಂಬಲ ಇದೆ ಎಂದು ಹೈಕಮಾಂಡ್‌ಗೆ ನಂಬಿಸಲು ಹೊರಟಿದ್ದಾರೆ ಎಂದರು.

ಸಿದ್ದರಾಮಯ್ಯ ಅವರು ಮೌಲ್ವಿ ಮನೆಗೆ ಹೋಗಿದ್ದ ವಿಡಿಯೊ ಬಿಟ್ಟಿದ್ದೇನೆ. ಮೌಲ್ವಿ ವಿರುದ್ಧ ಗಂಭೀರ ಆರೋಪವಿದೆ. ಅವರ ಮನೆಗೆ ಹೋಗಬೇಡಿ ಎಂದು ಪೊಲೀಸರು ಮುಖ್ಯಮಂತ್ರಿ ಸಚಿವಾಲಯಕ್ಕೆ ಮಾಹಿತಿ ನೀಡಿದ್ದರು. ಮತಕ್ಕಾಗಿ ಸಿದ್ದರಾಮಯ್ಯ ಹೋಗಿದ್ದರು. ಎಂ.ಬಿ.ಪಾಟೀಲರು ಒತ್ತಾಯ ಮಾಡಿ ಕರೆದೊಯ್ದಿದ್ದರು’ ಎಂದು ಯತ್ನಾಳ ಹೇಳಿದರು.

‘ಚಾರ್ಜ್‌ಶೀಟ್‌ನಿಂದ ಮೌಲ್ವಿ ಹೆಸರು ಬಿಟ್ಟದ್ದು ಏಕೆ?’

ವಿಜಯಪುರ: ‘2023ರ ಮೇ 6ರಂದು ವಿಜಯಪುರದಲ್ಲಿ ನಡೆದ ರೌಡಿಶೀಟರ್ ಹೈದರ್ ನದಾಫ್ ಕೊಲೆ ಪ್ರಕರಣದಲ್ಲಿ ಮೌಲ್ವಿ ತನ್ವೀರ್ ಹಾಶ್ಮಿ ಪ್ರಮುಖ ಆರೋಪಿ. ಚಾರ್ಜ್ ಶೀಟ್‌ನಿಂದ ಅವರ ಹೆಸರು ಕೈಬಿಟ್ಟಿದ್ದು ಏಕೆ’ ಎಂದು ಬಸನಗೌಡ ಪಾಟೀಲ ಯತ್ನಾಳ ಪ್ರಶ್ನಿಸಿದ್ದಾರೆ.

‘ಎಕ್ಸ್’ ಖಾತೆಯಲ್ಲಿ ಎಫ್‌ಐಆರ್ ಪ್ರತಿ ಹಂಚಿಕೊಂಡಿರುವ ಅವರು, ‘ಯಾರ ಒತ್ತಡದ ಮೇರೆಗೆ ಮೌಲ್ವಿಯ ಹೆಸರು ಕೈಬಿಡಲಾಗಿದೆ ಎಂಬುದಕ್ಕೆ ಸರ್ಕಾರ ಸ್ಪಷ್ಟನೆ ನೀಡಲಿ’ ಎಂದು ಒತ್ತಾಯಿಸಿದ್ದಾರೆ.

ಕೊಲೆಯಾದ ರೌಡಿಶೀಟರ್ ಪತ್ನಿ ವಿಜಯಪುರ ಪಾಲಿಕೆ ಸದಸ್ಯೆ. ಪತಿ ಕೊಲೆಯ ಸಾಕ್ಷಿಯನ್ನು ಮೌಲ್ವಿ ನಾಶಪಡಿಸುವ ಸಾಧ್ಯತೆ ಇದೆ. ಮೌಲ್ವಿ ನಮ್ಮ ಕುಟುಂಬಕ್ಕೆ, ಕಾರ್ಯಕರ್ತರಿಗೆ ಬೆದರಿಕೆ ಒಡ್ಡಿದ್ದಾರೆ ಎಂದು ಪೊಲೀಸರಿಗೆ ದೂರು ನೀಡಿರುವ ಪತ್ರವನ್ನು ಯತ್ನಾಳ ಹಂಚಿಕೊಂಡಿದ್ದಾರೆ.

‘ಮೌಲ್ವಿ ಜತೆಗೆ ವ್ಯವಹಾರ, ಪಾಲುದಾರಿಕೆ ಇಲ್ಲ’

ಪ್ರಜಾವಾಣಿ ವಾರ್ತೆ



ಬಸನಗೌಡ ಪಾಟೀಲ ಯತ್ನಾಳ

ಬೆಳಗಾವಿ: ‘ನನ್ನ ಜತೆ ವ್ಯವಹಾರ ಇರುವ ಕುಟುಂಬಕ್ಕೂ ಮೌಲ್ವಿ ತನ್ವೀರ್ ಪೀರ್ ಹಾಶ್ಮಿ ಕುಟುಂಬಕ್ಕೂ ಯಾವುದೇ ಸಂಬಂಧವಿಲ್ಲ. ಅದರಲ್ಲಿ ನಾನು ಪಾಲುದಾರನಲ್ಲ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಅವನೊಬ್ಬ ಭಯೋತ್ಪಾದಕ. ಅವರ ಪಾಲುದಾರಿಕೆಯಲ್ಲಿ ವ್ಯವಹಾರ ಮಾಡುತ್ತಿದ್ದೇನೆ ಎನ್ನುವವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವೆ’ ಎಂದು ಹೇಳಿದರು.

‘50–60 ವರ್ಷದ ಹಿಂದೆ ನಗರಸಭೆಯ ಆಸ್ತಿಯನ್ನು ಭೋಗ್ಯಕ್ಕೆ ಪಡೆಯಲಾಗಿತ್ತು. ಅದರ ಮೂಲ ಮಾಲೀಕ ನನ್ನ ತಂದೆ. 55 ವರ್ಷಗಳ ಹಿಂದೆ ತಂದೆ ಜತೆಗೆ ನಾಲ್ಕೈದು ಜನ ಇದ್ದರು. ಅವರಲ್ಲಿ ಇಬ್ಬರು ಮುಸ್ಲಿಮರು. ಭೋಗ್ಯದ ಮಾಲೀಕತ್ವವಿದ್ದ ಮುಸ್ಲಿಮನಿಗೂ, ಈ ಭಯೋತ್ಪಾದಕನಿಗೂ ಸಂಬಂಧವಿಲ್ಲ. ಮೌಲ್ವಿಯ ಗದ್ದುಗೆಗೆ ಸಂಬಂಧಿಸಿದಂತೆ ಹೋರಾಟ ನಡೆಸುತ್ತಿದ್ದೇನೆ. ಈ ಬಗ್ಗೆ ತನಿಖೆಯಾಗಲಿ’ ಎಂದು ಆಗ್ರಹಿಸಿದರು.

ವಿಜಯಪುರದಲ್ಲಿ ‘ಪ್ರಜಾವಾಣಿ’ ಜೊತೆಗೆ ಮಾತನಾಡಿದ ಯತ್ನಾಳ, ‘1971ರಲ್ಲಿ ತಂದೆ ಸೇರಿ ನಾಲ್ಕೈದು ಜನರು ಲೀಜ್ ಆಧಾರದಲ್ಲಿ ಟೂರಿಸ್ಟ್ ಹೋಟೆಲ್ ಆರಂಭಿಸಿದ್ದು ನಿಜ. ಆದರೆ, ಇದರಲ್ಲಿ ಈ ಮೌಲ್ವಿಯ ಪಾಲುದಾರಿಕೆ ಇಲ್ಲ. ಅವರ ದೂರದ ಸಂಬಂಧಿ ಇದ್ದಾರೆ’ ಎಂದರು.

‘ವಿಜಯಪುರದಲ್ಲಿ ಮೌಲ್ವಿ ಮನೆ ಮತ್ತು ನನ್ನ ಮನೆ ಅಕ್ಕಪಕ್ಕದಲ್ಲಿ ಇವೆ ಎಂದಾಕ್ಷಣ ಆತನ ಎಲ್ಲ ಚಟುವಟಿಕೆಗಳನ್ನು ನಾನು ಗಮನಿಸಬೇಕು ಎಂದೇನೂ ಇಲ್ಲ. ಆತನೊಂದಿಗೆ ಯಾವುದೇ ಸ್ನೇಹ, ವ್ಯವಹಾರ ಇಟ್ಟುಕೊಂಡಿಲ್ಲ’ ಎಂದು ಸ್ಪಷ್ಟಪಡಿಸಿದರು.

> ಹುಬ್ಬಳ್ಳಿಯಲ್ಲಿ ಸಿ.ಎಂ ಇದ್ದ ವೇದಿಕೆಯಲ್ಲಿ ಕೊಲೆ ಆರೋಪಿಗೆ ಏನು ಕೆಲಸ? ಬಡ ಕುಟುಂಬಕ್ಕೆ ಬೆದರಿಕೆ ಒಡ್ಡುವ ವ್ಯಕ್ತಿ ಜೊತೆ ವೇದಿಕೆ ಹಂಚಿಕೊಳ್ಳುವ ಅಗತ್ಯ ಮುಖ್ಯಮಂತ್ರಿಯವರಿಗೆ ಏನಿತ್ತು?
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ಬಾಲಕಿ ಮೇಲೆ ಅತ್ಯಾಚಾರ: 20 ವರ್ಷ ಸಜೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ಎಸಗಿದ ಆರೋಪ ದೃಢಪಟ್ಟಿರುವುದರಿಂದ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ಸಂಗಾಪುರದ ಯುವಕ ಪ್ರವೀಣಕುಮಾರ ಭೋವಿಗೆ ಜಿಲ್ಲಾ ಹೆಚ್ಚುವರಿ ಹಾಗೂ ಸೆಷನ್ಸ್ ನ್ಯಾಯಾಲಯವು 20 ವರ್ಷ ಜೈಲು ಮತ್ತು ₹25 ಸಾವಿರ ದಂಡ ವಿಧಿಸಿದೆ.

ದಂಡದ ಒಟ್ಟು ಮೊತ್ತದಲ್ಲಿ ₹10,000 ಅನ್ನು ಬಾಲಕಿಗೆ ಪರಿಹಾರವಾಗಿ ನೀಡುವಂತೆ ನ್ಯಾಯಾಧೀಶರಾದ ಕುಮಾರ ಡಿ.ಕೆ ಆದೇಶಿಸಿದ್ದಾರೆ.

ಘಟನೆ ಏನು: ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿದ್ದ ಪ್ರವೀಣ ಕುಮಾರ, 2020ರ ಜುಲೈ 23ರಂದು ಬಾಲಕಿಯನ್ನು ಅಪಹರಿಸಿದ್ದ. ಗಂಗಾವತಿಯಿಂದ ವಿಜಯಪುರದ ಬಸವನಗರ ಆಶ್ರಯ ಕಾಲೊನಿಗೆ ಕರೆದುಕೊಂಡು ಹೋಗಿ, ಅತ್ಯಾಚಾರ ಎಸಗಿದ್ದ ಎಂದು ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪ್ರಕರಣದ ತನಿಖೆಯನ್ನು ಪೊಲೀಸ್ ಇನ್‌ಸ್ಪೆಕ್ಟರ್ ಸುರೇಶ ತಳವಾರ ಹಾಗೂ ಗಂಗಾವತಿ ಗ್ರಾಮೀಣ ವೃತ್ತದ ಸಿಪಿಐ ಉದಯರವಿ ನಡೆಸಿದ್ದರು. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕಿ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು.

ಪೋಕ್ಸೊ ಪ್ರಕರಣ: 25 ವರ್ಷ ಶಿಕ್ಷೆ

ಮೈಸೂರು: ನೀರು ಕೇಳುವ ನೆಪದಲ್ಲಿ ಮನೆಗೆ ನುಗ್ಗಿ ಅಂಗವಿಕಲ ಬಾಲಕಿಯನ್ನು ಅತ್ಯಾಚಾರ ಮಾಡಿದ ಪ್ರಕರಣದಲ್ಲಿ ಜಯರಾಮ ಎಂಬ ವ್ಯಕ್ತಿಗೆ ಇಲ್ಲಿನ ಎಫ್‌ಟಿಎಸ್‌ಸಿ ಕೋರ್ಟ್ 25 ವರ್ಷ ಕಠಿಣ ಶಿಕ್ಷೆ ಹಾಗೂ ₹1.05 ಲಕ್ಷ ದಂಡ ವಿಧಿಸಿದೆ.

ತಾಲ್ಲೂಕಿನ ಜಯಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರಲ್ಲಿ ಪ್ರಕರಣ ನಡೆದಿತ್ತು. ‘ಬಾಲಕಿಗೆ ಮಾತನಾಡಲು ಬರುತ್ತಿರಲಿಲ್ಲ. ಯಾರೂ ಇಲ್ಲದ ವೇಳೆ ಬಂದ ಜಯರಾಮ ನೀರು ಕೇಳಿ, ಮನೆಗೆ ನುಗ್ಗಿ ಅತ್ಯಾಚಾರ ನಡೆಸಿದ್ದಾನೆ’ ಎಂದು ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಧೀಶರಾದ ಶೈಮಾ ಖಮ್ರೋಜ್ ವಿಚಾರಣೆ ನಡೆಸಿ, ಅಪರಾಧಿಗೆ ಶಿಕ್ಷೆ ವಿಧಿಸಿದ್ದಾರೆ. ದಂಡದ ಮೊತ್ತದಲ್ಲಿ ಸಂತ್ರಸ್ತ ಬಾಲಕಿಗೆ ₹75 ಸಾವಿರ ನೀಡಬೇಕು, ಸರ್ಕಾರದಿಂದ ₹5 ಲಕ್ಷ ಪರಿಹಾರಧನಕ್ಕೆ ಆಕೆ ಅರ್ಹಳು ಎಂದು ತೀರ್ಪಿನಲ್ಲಿ ತಿಳಿಸಲಾಗಿದೆ. ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ವಾದಿಸಿದ್ದರು.

ಅತ್ಯಾಚಾರ: 20 ವರ್ಷ ಜೈಲು

ಗದಗ: ಬಾಲಕಿ ಮೇಲೆ ಅತ್ಯಾಚಾರ ಮಾಡಿದ ಆರೋಪ ಸಾಬೀತಾದ ಕಾರಣ ಆರೋಪಿಗೆ 20 ವರ್ಷ ಜೈಲು ಶಿಕ್ಷೆ ಮತ್ತು ₹30,500 ದಂಡ ವಿಧಿಸಿ ಗದಗ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಶುಕ್ರವಾರ ತೀರ್ಪು ಪ್ರಕಟಿಸಿದೆ.

ಪ್ರಕರಣದ ಆರೋಪಿ ಮಂಜುನಾಥ (32) ವಿರುದ್ಧ ನರಗುಂದ ಪೊಲೀಸ್ ಠಾಣೆಯಲ್ಲಿ 2019ರಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿತ್ತು. ಪೊಲೀಸ್ ಇನ್‌ಸ್ಪೆಕ್ಟರ್ ಡಿ.ಬಿ.ಪಾಟೀಲ ಪ್ರಕರಣದ ತನಿಖೆ ನಡೆಸಿ, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಆರೋಪಿಯ ಅಪರಾಧ ರುಜುವಾತು ಆದ ಕಾರಣ ನ್ಯಾಯಾಧೀಶ ರಾಜೇಶ್ವರ ಶೆಟ್ಟಿ ಅವರು ಆರೋಪಿಗೆ 20 ವರ್ಷ ಜೈಲು ಮತ್ತು ದಂಡ ವಿಧಿಸಿ ತೀರ್ಪು ಪ್ರಕಟಿಸಿದರು. ದಂಡದ ಹಣ ಕೊಡಲು ತಪ್ಪಿದಲ್ಲಿ ಹೆಚ್ಚುವರಿಯಾಗಿ 2 ವರ್ಷ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. ವಿಶೇಷ ಅಭಿಯೋಜಕ ಅಮರೇಶ ಉಮಾಪತಿ ಹಿರೇಮಠ ವಾದ ಮಂಡಿಸಿದ್ದರು.

ಕೊಳೆತ ಸ್ಥಿತಿಯಲ್ಲಿ 2 ಹುಲಿಗಳ ಕಳೇಬರ

ತಾಯಿ–ಮರಿಯಾಗಿರುವ ಸಾಧ್ಯತೆ, ಸಾವಿನ ಕಾರಣ ನಿಗೂಢ, ಬೇಟೆಯಲ್ಲ– ಅಧಿಕಾರಿಗಳ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಚಾಮರಾಜನಗರ ಪ್ರಾದೇಶಿಕ ವಲಯ ವ್ಯಾಪ್ತಿಯ ಕೊತ್ತಲವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೊಳೆತಿರುವ ಸ್ಥಿತಿಯಲ್ಲಿ ಎರಡು ಹುಲಿಗಳ ಕಳೇಬರ ಪತ್ತೆಯಾಗಿದೆ.

ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಕಳೇಬರ ಕೊಳೆತಿರುವುದರಿಂದ, ಸಾವು ಸಹಜವೇ, ಅಸಹಜವೇ ಎಂಬುದನ್ನು ದೃಢಪಡಿಸಲು ಪಶು ವೈದ್ಯರಿಗೂ ಸಾಧ್ಯವಾಗಿಲ್ಲ.


‘ಒಂದರ ವಯಸ್ಸು ನಾಲ್ಕರಿಂದ ಐದು ವರ್ಷ, ಇನ್ನೊಂದು ಒಂದು ವರ್ಷ ವಯಸ್ಸಿನದ್ದು ಎಂದು ಅಂದಾಜಿಸಲಾಗಿದೆ. ಹುಲಿಗಳು ಗಂಡೋ, ಹೆಣ್ಣೋ ಎಂಬುದು ಗೊತ್ತಾಗಿಲ್ಲ. ತಾಯಿ ಮತ್ತು ಮರಿಯಾಗಿರುವ ಸಾಧ್ಯತೆ ಇದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬನ್ನೇರುಘಟ್ಟ ಜೈವಿಕ ಉದ್ಯಾನದ ಪಶುವೈದ್ಯಕೀಯ ಸಲಹೆಗಾರ ಡಾ.ಮಂಜುನಾಥ್ ಮತ್ತು ತಂಡದ ಸದಸ್ಯರು ಸ್ಥಳಕ್ಕೆ ಭೇಟಿ ನೀಡಿ, ಮರಣೋತ್ತರ ಪರೀಕ್ಷೆ ನಡೆಸಿದ್ದಾರೆ.

‘ದೇಹ ಕೊಳೆತಿದ್ದು, ಸಾವು ಸಹಜವೇ ಅಸಹಜವೇ ಎಂಬುದು ದೃಢಪಟ್ಟಿಲ್ಲ ಎಂದು ವರದಿಯಲ್ಲಿ ವೈದ್ಯರು ಹೇಳಿದ್ದಾರೆ. ಹುಲಿಗಳ ಎಲ್ಲ ಹಲ್ಲು ಮತ್ತು ಉಗುರುಗಳಿವೆ. ಬೇಟೆಯಿಂದಾಗಿ ಸತ್ತಿಲ್ಲ ಎಂಬುದು ಖಚಿತವಾಗಿದೆ’ ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಮತ್ತು ಡಿಸಿಎಫ್ ದೀಪ್ ಜೆ. ಕಾಂಟ್ರ್ಯಾಕ್ಟರ್ ತಿಳಿಸಿದರು.

ಬಂಡೀಪುರ ವ್ಯಾಪ್ತಿಯ ಹುಲಿಗಳು?: ಚಾಮರಾಜನಗರ ಮತ್ತು ಗುಂಡ್ಲುಪೇಟೆ ಗಡಿಯ ಮೇಲೂರು ಗ್ರಾಮದ ಪಾಳು ಜಮೀನಿನಲ್ಲಿ ಗುರುವಾರ ಸಂಜೆ ಹಸು ಮೇಯಿಸುವವರು ಕಳೇಬರ ಗಮನಿಸಿದ್ದಾರೆ. ಜಮೀನಿನ ಪಕ್ಕದಲ್ಲೇ ಕರಿಕಲ್ಲು ಕ್ವಾರಿ ಕಾರ್ಯಾಚರಿಸುತ್ತಿದೆ.

‘ಹುಲುಗನಮುರಡಿ ವೆಂಕಟರಮಣ ಸ್ವಾಮಿ ದೇಗುಲದ ಬೆಟ್ಟದ ತಪ್ಪಲಿನಲ್ಲಿ ಮೃತದೇಹ ಕಂಡು ಬಂದಿದ್ದು, ಇದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಮೀಪವಿದೆ. ಈ ಹುಲಿಗಳು ಅಲ್ಲಿಯವೇ ಇರಬಹುದು’ ಎಂದು ಅಧಿಕಾರಿಗಳು ಶಂಕಿಸಿದ್ದಾರೆ.



ಚಾಮರಾಜನಗರ ತಾಲ್ಲೂಕಿನ ಕೊತ್ತಲವಾಡಿಯಲ್ಲಿ ಪತ್ತೆಯಾದ ಹುಲಿಯ ಕಳೇಬರ



ಕಲಘಟಗಿ ತಾಲ್ಲೂಕಿನ ಕಂದ್ಲಿ ಗ್ರಾಮದ ಅರಣ್ಯದಂಚಿನ ಪ್ರದೇಶದಲ್ಲಿ ಎರಡು ವರ್ಷದ ಗಂಡು ಆನೆ ಮೃತಪಟ್ಟಿದೆ

ವಿಷ ಪ್ರಾಶನ ಸಾಧ್ಯತೆಯ ತನಿಖೆ

‘ವಿಷ ಪ್ರಾಶನದಿಂದ ಹುಲಿಗಳು ಸತ್ತಿವೆಯೇ ಎಂಬ ಶಂಕೆ ಬಗ್ಗೆಯೂ ತನಿಖೆ ನಡೆಯಲಿದೆ. ಅಂಗಾಂಗ ಮಾದರಿಗಳನ್ನು ಪ್ರಯೋಗಾಲಯಕ್ಕೆ ಪರೀಕ್ಷೆಗೆ ಕಳುಹಿಸಲಾಗಿದೆ’ ಎಂದು ದೀಪ್ ಜೆ.ಕಾಂಟ್ರ್ಯಾಕ್ಟರ್ ಹೇಳಿದರು.

ಆಹಾರವಿಲ್ಲದೆ ಮರಿ ಆನೆ ಸಾವು

ಕಲಘಟಗಿ (ಧಾರವಾಡ ಜಿಲ್ಲೆ): ‘ತಾಲ್ಲೂಕಿನ ಕಂದ್ಲಿ ಗ್ರಾಮದ ಅರಣ್ಯದಂಚಿನ ಪ್ರದೇಶದಲ್ಲಿ ಎರಡು ವರ್ಷದ ಗಂಡು ಮರಿ ಆನೆ ಸಕಾಲಕ್ಕೆ ಆಹಾರ, ನೀರು ಸಿಗದೇ ಸಾವನ್ನಪ್ಪಿದೆ.

ಹಸು ಮೇಯಿಸಲು ಹೋಗಿದ್ದವರು ಆನೆಮರಿ ಮೃತಪಟ್ಟಿದ್ದು ನೋಡಿ, ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ವಲಯ ಅರಣ್ಯಾಧಿಕಾರಿ ಅರುಣ ಕುಮಾರ ಅಷ್ಟಗಿ, ಪಶುವೈದ್ಯ ದೇವೇಂದ್ರಪ್ಪ ಲಮಾಣ ಭೇಟಿ ನೀಡಿ, ಪರಿಶೀಲಿಸಿದರು. ‘ವಾರದ ಹಿಂದೆ 3 ಆನೆಗಳು ಕಾಣಿಸಿದ್ದವು. ಅದರಲ್ಲಿದ್ದ ಮರಿ ಆನೆ ಅನಾರೋಗ್ಯದಿಂದ ಬಳಲಿ, ನೀರು ಆಹಾರ ಸಿಗದೆ ಸತ್ತಿದೆ ಎಂದು ಮರಣೋತ್ತರ ಪರೀಕ್ಷೆಯಲ್ಲಿ ಗೊತ್ತಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ತಿಳಿಸಿದರು.



ದೀಪ ಸಂಭ್ರಮ

ಕಾರ್ತಿಕ ಮಾಸದ ಲಕ್ಷದೀಪೋತ್ಸವದ ಅಂಗವಾಗಿ ಧರ್ಮಸ್ಥಳದ ದೇವಸ್ಥಾನವನ್ನು ವಿದ್ಯುದ್ದೀಪಗಳಿಂದ ಅಲಂಕರಿಸಲಾಗಿದೆ. ರಸ್ತೆಯ ಇಕ್ಕೆಲಗಳೂ ಸಿಂಗಾರಗೊಂಡಿವೆ

ವಿಡಿಯೊ ದೃಶ್ಯಗಳನ್ನು ಪರಿಶೀಲಿಸಿದ ಅಧಿಕಾರಿಗಳು

ಪೊಲೀಸರ ವಿರುದ್ಧ ಕ್ರಮ?

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಕೀಲರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸಿದ್ದ ಪೊಲೀಸರ ವಿರುದ್ಧ ಕ್ರಮಕ್ಕೆ ಇಲಾಖೆ ಮುಂದಾಗಿದೆ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪೊಲೀಸ್ ಸಿಬ್ಬಂದಿಯನ್ನು ಗುರುತಿಸಿ ವರದಿ ಸಿದ್ಧಪಡಿಸಲಾಗಿದೆ.

‘ಪೊಲೀಸರ ವಿರುದ್ಧ ಕೈಗೊಂಡಿರುವ ಕ್ರಮಗಳು ಏನು ಎಂದು ಹೈಕೋರ್ಟ್ ರಾಜ್ಯ ಸರ್ಕಾರವನ್ನು ಪ್ರಶ್ನಿಸಿತ್ತು. ನ್ಯಾಯಾಲಯಕ್ಕೆ ವಿವರಣೆ ನೀಡಲು ಈಗ ಪೊಲೀಸ್ ಇಲಾಖೆ ಮುಂದಾಗಿದೆ’ ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ವಲಯ ಐಜಿಪಿ ಚಂದ್ರಗುಪ್ತ ಅವರ ನಿರ್ದೇಶನದಂತೆ ಉಡುಪಿ ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಸ್‌.ಟಿ. ಸಿದ್ಧಲಿಂಗಪ್ಪ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಚಿಕ್ಕಮಗಳೂರಿಗೆ ಬಂದಿದೆ.

ಪ್ರತಿಭಟನೆ ನಡೆದ ನಗರ ಠಾಣೆ ಆವರಣ ಮತ್ತು ಹನುಮಂತಪ್ಪ ವೃತ್ತದಲ್ಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ, ಮಾಧ್ಯಮಗಳಲ್ಲಿ ಮತ್ತು ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊಗಳನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪೊಲೀಸ್ ಸಿಬ್ಬಂದಿಯ ಹೆಸರುಗಳನ್ನು ಗುರುತಿಸುತ್ತಿದ್ದಾರೆ. ಇಲಾಖೆಯ ಸಿಬ್ಬಂದಿಯ ನೆರವಿನಿಂದಲೇ ಹೆಸರು ಗುರುತಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ವರದಿ ಸಿದ್ಧಪಡಿಸಿ ಹಿರಿಯ ಅಧಿಕಾರಿಗಳಿಗೆ ನೀಡಲಿದ್ದು, ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪೊಲೀಸರ ವಿರುದ್ಧ ಏನು ಕ್ರಮ ಎಂಬುದನ್ನು ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ತೀರ್ಮಾನಿಸಲಿದ್ದಾರೆ.

ವಕೀಲ ಪ್ರೀತಮ್ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದ ಆರೋಪದಲ್ಲಿ ಪಿಎಸ್‌ಐ ಮಹೇಶ್ ಪೂಜಾರಿ ಸೇರಿ ಆರು ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಅವರನ್ನು ಬಂಧಿಸಲು ಹಿರಿಯ ಅಧಿಕಾರಿಗಳು ಮುಂದಾಗಿದ್ದರು. ಅದನ್ನು ವಿರೋಧಿಸಿ ಡಿ.2ರಂದು ಪೊಲೀಸರು ಇಡೀ ರಾತ್ರಿ ಪ್ರತಿಭಟನೆ ನಡೆಸಿದ್ದರು.

ಒಂದೆಡೆ ವರದಿ ತಯಾರಾಗುತ್ತಿದ್ದರೆ ಇನ್ನೊಂದೆಡೆ ಐಜಿಪಿ ಚಂದ್ರಗುಪ್ತ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ ಅಮಟೆ ಅವರು ಎಲ್ಲಾ ಠಾಣೆಗಳಿಗೆ ಭೇಟಿ ನೀಡಿ ಪೊಲೀಸ್ ಸಿಬ್ಬಂದಿಗೆ ತಮ್ಮ ಕರ್ತವ್ಯದ ಬಗ್ಗೆ ಮನವರಿಕೆ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ರಸ್ತೆಗೆ ಇಳಿದು ಪ್ರತಿಭಟನೆ ನಡೆಸಬಾರದು. ಕಾನೂನಿನಲ್ಲಿ ಅದಕ್ಕೆ ಅವಕಾಶ ಇಲ್ಲ ಎಂಬುದನ್ನು ವಿವರಿಸುತ್ತಿದ್ದಾರೆ.

ಠಾಣೆಗಳಿಗೆ ಭೇಟಿ ನೀಡುತ್ತಿರುವ ಅಧಿಕಾರಿಗಳ ಎದುರು ಪೊಲೀಸರು ಕೂಡ ತಮ್ಮ ನೋವು ತೋಡಿಕೊಳ್ಳುತ್ತಿದ್ದಾರೆ. ಪ್ರತಿಭಟನೆ ನಡೆಸಿದ ಕಾರಣಕ್ಕೆ ಯಾವುದೇ ಸಿಬ್ಬಂದಿ ವಿರುದ್ಧ ಕ್ರಮವಾದರೂ ಪೊಲೀಸರು ಕರ್ತವ್ಯ ತೊರೆಯಬೇಕಾಗುತ್ತದೆ ಎಂದು ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಉನ್ನತ ಮಟ್ಟದ ಸಭೆ ಇಂದು

ಹೈಕೋರ್ಟ್ ನಿರ್ದೇಶನದಂತೆ ಸಮಸ್ಯೆ ಪರಿಹರಿಸಲು ವಕೀಲರ ಬೇಡಿಕೆಗಳನ್ನು ಆಲಿಸಲು ಇದೇ 9ರಂದು ಬೆಂಗಳೂರಿನಲ್ಲಿ ಅಡ್ವೊಕೇಟ್ ಜನರಲ್ ಕಚೇರಿಯಲ್ಲಿ ಸಭೆ ನಡೆಯಲಿದೆ.

ರಾಜ್ಯ ವಕೀಲರ ಪರಿಷತ್ ಅಧ್ಯಕ್ಷರು, ಪರಿಷತ್‌ನ ಮೂವರು ಸದಸ್ಯರು, ಚಿಕ್ಕಮಗಳೂರು ಮತ್ತು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರು, ಹೈಕೋರ್ಟ್‌ನ ಆರು ಹಿರಿಯ ವಕೀಲರು ಹಾಗೂ ಗೃಹ ಇಲಾಖೆ ಕಾರ್ಯದರ್ಶಿ ಭಾಗವಹಿಸಬೇಕು ಎಂದು ನ್ಯಾಯಪೀಠ ಆದೇಶಿಸಿತ್ತು. ಅದರಂತೆ ಶನಿವಾರ ಸಭೆ ನಡೆಯಬೇಕಿದ್ದು, ಪೊಲೀಸರ ವಿರುದ್ಧ ಕೈಗೊಂಡಿರುವ ಕ್ರಮಗಳ ಬಗ್ಗೆಯೂ ಸಭೆಗೆ ವರದಿ ನೀಡುವ ಸಾಧ್ಯತೆ ಇದೆ. ಇನ್ನೊಂದೆಡೆ ಸಿಐಡಿ ಅಧಿಕಾರಿಗಳು ಕೂಡ ಪ್ರತ್ಯೇಕವಾಗಿ ತನಿಖೆ ಮುಂದುವರಿಸಿದ್ದಾರೆ.

ಠಾಣೆಗೆ ಹಾಜರಾದ ಪ್ರಶಾಂತ್– ಆಯೇಷಾ ದಂಪತಿ

ಪ್ರಜಾವಾಣಿ ವಾರ್ತೆ

ಸುರತ್ಕಲ್ (ದಕ್ಷಿಣ ಕನ್ನಡ): ಬಜರಂಗ ದಳದ ಕಾರ್ಯಕರ್ತ ಮುಸ್ಲಿಂ ಯುವತಿಯನ್ನು ಮದುವೆಯಾಗಿರುವ ಚಿತ್ರವೊಂದು ಶುಕ್ರವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು.

‘ಬಜರಂಗ ದಳದ ಕಾರ್ಯಕರ್ತನಾಗಿರುವ ಕಾಟಿಪಳ್ಳದ ಯುವಕ ಪ್ರಶಾಂತ್ ಭಂಡಾರಿ (31) ಮತ್ತು ಆಯೇಷಾ (19) ಮದುವೆಯಾಗಿದ್ದಾರೆ. ಆಯೇಷಾ ತಮ್ಮ ಹೆಸರನ್ನು ಅಕ್ಷತಾ ಎಂದು ಬದಲಾಯಿಸಿಕೊಂಡಿದ್ದಾರೆ’ ಎಂದು ವಿಶ್ವಹಿಂದೂ ಪರಿಷತ್ ಪ್ರಾಂತ ಸಹಕಾರ್ಯದರ್ಶಿ ಶರಣ್ ಪಂಪ್‌ವೆಲ್ ತಮ್ಮ ಫೇಸ್‌ಬುಕ್‌ನಲ್ಲಿ ಚಿತ್ರ ಸಮೇತ ಪೋಸ್ಟ್ ಮಾಡಿದ್ದರು.

‘ನವೆಂಬರ್ 30ರಂದು ಆಯೇಷಾ ತನ್ನ ತಾಯಿ ಎದುರಿನಲ್ಲೇ ಪ್ರಶಾಂತ್ ಜೊತೆ ಹೋಗಿದ್ದರು. ಅವರಿಬ್ಬರೂ ಮದುವೆಯಾಗಿ ಶುಕ್ರವಾರ ಪೊಲೀಸ್ ಠಾಣೆಗೆ ಬಂದಿದ್ದಾರೆ’ ಎಂದು ಸುರತ್ಕಲ್ ಠಾಣೆಯ ಇನ್‌ಸ್ಪೆಕ್ಟರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ದೂರು ನೀಡಿದ್ದ ತಾಯಿ: ‘ನವೆಂಬರ್ 30ರಂದು ಕೆಲಸ ಮುಗಿಸಿ ಬಂದಾಗ ಮಗಳು ಆಯೇಷಾ ನಮ್ಮ ಪಕ್ಕದ ಮನೆಯ ನಿವಾಸಿ ಪ್ರಶಾಂತ್ ಮನೆಯಲ್ಲಿದ್ದಳು. ಮಗಳನ್ನು ಕರೆದಾಗ ಆಕೆಯ ಜೊತೆ ಬಂದಿದ್ದ ಪ್ರಶಾಂತ್, ಮೂರು ವರ್ಷಗಳಿಂದ ಪ್ರೀತಿಸುತ್ತಿದ್ದೇನೆ. ನಿಮ್ಮ ಅನುಮತಿ ಪಡೆದು ನಿಮ್ಮ ಮಗಳನ್ನು ಮದುವೆಯಾಗಲು ನಿರ್ಧರಿಸಿದ್ದೇನೆ ಎಂದು ಹೇಳಿದ. ಆಯೇಷಾಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಮರುದಿನ ತನ್ನ ತಾಯಿ, ತಂಗಿ ಜೊತೆ ನಿಮ್ಮ ಮನೆಗೆ ಕರೆದುಕೊಂಡು ಬರುತ್ತೇನೆ ಎಂದು ಹೇಳಿದ್ದ. ಆದರೆ, ಮರುದಿನ ಬರುವುದಾಗಿ ಹೇಳಿದವರು ಇನ್ನೂ ಬಂದಿಲ್ಲ’ ಎಂದು ಯುವತಿಯ ತಾಯಿ ಡಿ.1ರಂದು ದೂರು ನೀಡಿದ್ದರು.

ಸುರತ್ಕಲ್ ಠಾಣೆಯ ಪೊಲೀಸರು ಯಾವುದೇ ಕಲಂ ಉಲ್ಲೇಖಿಸದೇ ಪ್ರಕರಣ ದಾಖಲಿಸಿಕೊಂಡಿದ್ದರು.

‘ಪ್ರಶಾಂತ್ ಮೇಲೆ ಸುರತ್ಕಲ್ ಠಾಣೆಯಲ್ಲಿ ಈ ಹಿಂದೆ ರೌಡಿ ಪಟ್ಟಿ ತೆರೆಯಲಾಗಿತ್ತು. ಈತನ ಮೇಲೆ ಹೊಡೆದಾಟದ ಪ್ರಕರಣಗಳು ಇವೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬ್ರಿಟಾನಿಯ ಕಂಪನಿಗೆ ₹30 ಸಾವಿರ ದಂಡ

ಪ್ರಜಾವಾಣಿ ವಾರ್ತೆ



ಮಡಿಕೇರಿ: ಕಡಿಮೆ ತೂಕವಿದ್ದ ಬಿಸ್ಕೆಟ್ ಪೊಟ್ಟಣ ಮಾರಾಟ ಮಾಡಿದ ಆರೋಪದ ಮೇರೆಗೆ ಕೊಡಗಿನ ಜಿಲ್ಲಾ ಗ್ರಾಹಕರ ಆಯೋಗವು ಬ್ರಿಟಾನಿಯ ಇಂಡಸ್ಟ್ರೀಸ್‌ಗೆ ₹10 ಸಾವಿರ ದಂಡ ವಿಧಿಸಿದೆ.

ಎಂ.ಇ ಹಾಲಿ ಎಂಬವರು ಗೋಣಿಕೊಪ್ಪ ಪಟ್ಟಣದಲ್ಲಿ ಮಾರಿಗೋಲ್ಡ್ ಬಿಸ್ಕೆಟ್ ಖರೀದಿಸಿದ್ದರು. ಬಿಸ್ಕೆಟ್‌ಗಳು ಕಡಿಮೆ ಇರುವುದರಿಂದ ತೂಕ ಮಾಡಿಸಿ ನೋಡಿದಾಗ 100 ಗ್ರಾಂ ಇರುವ ಬದಲು 82 ಗ್ರಾಂ ಇತ್ತು. ಹೀಗಾಗಿ ಅವರು ಕೊಡಗಿನ ಜಿಲ್ಲಾ ಗ್ರಾಹಕರ ಆಯೋಗದಲ್ಲಿ ದೂರು ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಆಯೋಗವು ಆರೋಪ ಸಾಬೀತಾದ ಕಾರಣ ಕಂಪನಿಗೆ ₹10 ಸಾವಿರ ಹಾಗೂ ದೂರುದಾರರು ಮಾನಸಿಕ ವೇದನೆ ಪಟ್ಟಿದ್ದಕ್ಕೆ ₹20 ಸಾವಿರ ನೀಡಬೇಕು ಎಂದು ಕಂಪನಿಗೆ ಆದೇಶಿಸಿತು ಎಂದು ಪ್ರಕಟಣೆ ತಿಳಿಸಿದೆ.

‘ಮಹತ್ವಾಕಾಂಕ್ಷಿ ತಾಲ್ಲೂಕು’ ದಕ್ಷಿಣ ಭಾರತಕ್ಕೆ ಮಸ್ಕಿ ಪ್ರಥಮ

ಪ್ರಜಾವಾಣಿ ವಾರ್ತೆ

ಮಸ್ಕಿ (ರಾಯಚೂರು ಜಿಲ್ಲೆ): ನೀತಿ ಆಯೋಗದ ಮಹತ್ವಾಕಾಂಕ್ಷಿ ತಾಲ್ಲೂಕು ಕಾರ್ಯಕ್ರಮದಲ್ಲಿ ತೋರಿದ ಸುಧಾರಣೆಗಾಗಿ ಮಸ್ಕಿ ತಾಲ್ಲೂಕು ದಕ್ಷಿಣ ಭಾರತದಲ್ಲಿಯೇ ಪ್ರಥಮ ಸ್ಥಾನ ಪಡೆದಿದೆ.

ನೀತಿ ಆಯೋಗವು ಮಹತ್ವಾಕಾಂಕ್ಷಿ ತಾಲ್ಲೂಕುಗಳ ಶ್ರೇಯಾಂಕದ ಪಟ್ಟಿಯನ್ನು ಗುರುವಾರ ಬಿಡುಗಡೆ ಮಾಡಿದೆ. ಪಟ್ಟಿಯಲ್ಲಿ ಎರಡನೇ ಸ್ಥಾನವನ್ನು ತೆಲಂಗಾಣದ ನರಣೂರು ಪಡೆದುಕೊಂಡಿದೆ. ಮಸ್ಕಿ ತಾಲ್ಲೂಕಿಗೆ ಪ್ರೋತ್ಸಾಹ ಧನವಾಗಿ ನೀತಿ ಆಯೋಗವು ₹1.50 ಕೋಟಿ ವಿಶೇಷ ಅನುದಾನವನ್ನು ಘೋಷಿಸಿದೆ.

ಆರೋಗ್ಯ ಮತ್ತು ಪೋಷಣೆ, ಅಪೌಷ್ಟಿಕತೆ ನಿವಾರಣೆ, ಶಿಕ್ಷಣ, ಕೃಷಿ ಮತ್ತು ಸಂಬಂಧಿತ ಸೇವೆಗಳು ಸೇರಿದಂತೆ ಐದು ವಲಯಗಳಲ್ಲಿ 40 ಸೂಚಕಗಳಿದ್ದವು. ಇದರ ಸಂಪೂರ್ಣ ಪ್ರಗತಿ ವರದಿಯನ್ನು ಎಬಿಪಿ ಅಡಿ ಇರುವ 500 ಮಹತ್ವಾಕಾಂಕ್ಷಿ ತಾಲ್ಲೂಕುಗಳು ನೀತಿ ಆಯೋಗಕ್ಕೆ ವರದಿ ಸಲ್ಲಿಸಿದ್ದವು.

‘ಮಸ್ಕಿ ತಾಲ್ಲೂಕಿನಲ್ಲಿ ಆರೋಗ್ಯ, ಅಪೌಷ್ಟಿಕತೆ ನಿವಾರಣೆ, ಶಿಕ್ಷಣ, ಕೃಷಿ ಮತ್ತು ಸಂಬಂಧಿತ ಸೇವೆಗಳಲ್ಲಿ ಕೈಗೊಂಡ ಅಭಿವೃದ್ಧಿ ಕುರಿತು ಸಲ್ಲಿಸಿದ ವರದಿಯ ಬಗ್ಗೆ ನೀತಿ ಆಯೋಗ ಮೆಚ್ಚುಗೆ ವ್ಯಕ್ತಪಡಿಸಿದೆ. ಜಿಲ್ಲಾಧಿಕಾರಿ ಖಾತೆಗೆ ₹1.50 ಕೋಟಿ ಪ್ರೋತ್ಸಾಹ ಧನ ಜಮೆಯಾಗಲಿದ್ದು, ಮಸ್ಕಿ ಬ್ಲಾಕ್ ಅನ್ನು ನೀತಿ ಆಯೋಗದ ಮಾರ್ಗಸೂಚಿ ಪ್ರಕಾರ ಅಭಿವೃದ್ಧಿ ಪಡಿಸಲಾಗುವುದು’ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ ತಿಳಿಸಿದ್ದಾರೆ.



❦ ಸುಭಾಷಿತ ❦
ಪ್ರತಿಯೊಂದು ಧರ್ಮವೂ ಈ ಜಗತ್ತಿಗೆ ಪ್ರೇಮ, ಬಂಧುತ್ವದ ಸಂದೇಶವನ್ನೇ ನೀಡಿದೆ.
– ಖಾನ್ ಅಬ್ದುಲ್ ಗಫಾರ್ ಖಾನ್

‘ಇಂಡಿಯಾ’ ಮೈತ್ರಿಕೂಟ: ತಕ್ಷಣ ನಿವಾರಣೆಯಾಗಲಿ ಅಪನಂಬಿಕೆ

ಹಿಂದಿ ಭಾಷಿಕ ರಾಜ್ಯಗಳಾದ ಛತ್ತೀಸಗಢ, ಮಧ್ಯಪ್ರದೇಶ ಮತ್ತು ರಾಜಸ್ಥಾನದಲ್ಲಿ ಕಾಂಗ್ರೆಸ್ ಪಕ್ಷದ ಸೋಲು, ಬಿಜೆಪಿ ವಿರೋಧಿಯಾದ 28 ಪಕ್ಷಗಳ ಮೈತ್ರಿಕೂಟ ‘ಇಂಡಿಯಾ’ದ ಒಳಗೆ ಇರುವ ಬಿರುಕುಗಳು ಮುನ್ನೆಲೆಗೆ ಬರುವಂತೆ ಮಾಡಿದೆ. ಜೊತೆಗೆ, ಈ ಎಲ್ಲ ಪಕ್ಷಗಳು ಒಂದು ತಂಡವಾಗಿ ಕೆಲಸ ಮಾಡಬಹುದೇ ಎಂಬ ಸಂದೇಹವನ್ನು ಹುಟ್ಟಿಸಿದೆ. ತೆಲಂಗಾಣ ಉದಯವಾಗಿ ಒಂದು ದಶಕದ ಬಳಿಕ ಆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕ ಗೆಲುವು ಕೂಡ ಹಿಂದಿ ಭಾಷಿಕ ರಾಜ್ಯಗಳಲ್ಲಿನ ಸೋಲು ಮತ್ತು ‘ಇಂಡಿಯಾ’ ಮೈತ್ರಿಕೂಟದಲ್ಲಿನ ಬಿರುಕಿನ ಕರಿನೆರಳಿನಲ್ಲಿ ಮುಸುಕಾಗಿದೆ. ಗಾಳಿ ಎತ್ತ ಬೀಸುತ್ತಿದೆ ಎಂಬುದು ಕಾಂಗ್ರೆಸ್ ಪಕ್ಷ ಮತ್ತು ಅದರ ರಾಜ್ಯ ಮಟ್ಟದ ನಾಯಕರಿಗೆ ಗೊತ್ತಾಗಲಿಲ್ಲ. ತಾವೇ ಮಾಡಿಕೊಂಡ ತಪ್ಪು ಗ್ರಹಿಕೆಗೆ ಅನುಗುಣವಾಗಿ ಅವರು ಕೆಲಸ ಮಾಡಿದರು. ‘ಇಂಡಿಯಾ’ ಮೈತ್ರಿಕೂಟದ ಇತರ ಪಕ್ಷಗಳನ್ನು ಜೊತೆಗೆ ಕರೆದೊಯ್ಯುವ ಆಸಕ್ತಿಯನ್ನೂ ಈ ನಾಯಕರು ತೋರಿಸಲಿಲ್ಲ. ಕೆಲವೇ ಕೆಲವು ಸೀಟುಗಳಿಗಾಗಿ ಈ ಪಕ್ಷಗಳು ಇಟ್ಟ ಬೇಡಿಕೆಯನ್ನು ನಿರ್ಲಕ್ಷಿಸಲಾಯಿತು. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಮತ್ತು ಕಾಂಗ್ರೆಸ್ ಮಧ್ಯಪ್ರದೇಶ ಘಟಕದ ಅಧ್ಯಕ್ಷ ಕಮಲನಾಥ್ ನಡುವೆ ಸಾರ್ವಜನಿಕವಾಗಿ ಹೀನಾಯವಾದ ವಾಗ್ಯುದ್ಧವೂ ನಡೆಯಿತು.



ಇಂತಹ ಪರಿಸ್ಥಿತಿ ಸೃಷ್ಟಿ ಮಾಡಿಕೊಂಡದ್ದರ ಹೊಣೆಯನ್ನು ಪಕ್ಷದ ಕೇಂದ್ರ ನಾಯಕತ್ವವು ಹೊತ್ತುಕೊಳ್ಳಬೇಕು. ರಾಜ್ಯ ಘಟಕಗಳಿಗೆ ದೃಢವಾದ ಸಂದೇಶ ಕಳುಹಿಸುವಲ್ಲಿ ಕೇಂದ್ರ ನಾಯಕತ್ವವು ವಿಫಲವಾಯಿತು. ಕಾಂಗ್ರೆಸ್ ಪಕ್ಷವು ಸೊಕ್ಕಿನಿಂದ ವರ್ತಿಸುತ್ತಿದೆ ಎಂಬ ಭಾವನೆಯನ್ನು ಬದಲಾಯಿಸಲು ಕೂಡ ಕೇಂದ್ರ ನಾಯಕತ್ವವು ಪ್ರಯತ್ನಿಸಲಿಲ್ಲ. ಈ ಎಲ್ಲದರ ಪರಿಣಾಮವಾಗಿ ಎಎಪಿ, ಎಸ್‌ಪಿ, ಜೆಡಿಯು ಮುಂತಾದ ಪಕ್ಷಗಳು ಪ್ರತ್ಯೇಕವಾಗಿಯೇ ಸ್ಪರ್ಧಿಸಿದವು. ಕಾಂಗ್ರೆಸ್ ಪಕ್ಷದ ಗೆಲುವಿಗೆ ಈ ಪಕ್ಷಗಳು ಅಡ್ಡಿಯಾದವೇ ಇಲ್ಲವೇ ಎಂಬುದು ಬೇರೆ ಪ್ರಶ್ನೆ. ಆದರೆ, ಲೋಕಸಭಾ ಚುನಾವಣೆ ಸಮೀಪದಲ್ಲಿರುವ ಈ ಹೊತ್ತಿನಲ್ಲಿ ಮೈತ್ರಿಕೂಟದೊಳಗೆ ಅಪನಂಬಿಕೆಯನ್ನಂತೂ ಇದು ಮೂಡಿಸಿದೆ. ಭಾರಿ ಚೌಕಾಶಿಯ ಬಳಿಕ ರಾಜಸ್ಥಾನದಲ್ಲಿ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಮತ್ತು ತೆಲಂಗಾಣದಲ್ಲಿ ಸಿಪಿಐಗೆ ಕಾಂಗ್ರೆಸ್ ಕ್ಷೇತ್ರಗಳನ್ನು ಬಿಟ್ಟುಕೊಟ್ಟಿತು. ರಾಜಸ್ಥಾನದ ಭರತ್‌ಪುರದಲ್ಲಿ ಆರ್‌ಎಲ್‌ಡಿ ಗೆದ್ದರೆ, ತೆಲಂಗಾಣದ ಕೊತ್ತಗೂಡೆಂನಲ್ಲಿ ಸಿಪಿಐ ಗೆದ್ದಿದೆ.

ಮೈತ್ರಿಕೂಟವು ಜೊತೆಯಾಗಿ ಕೆಲಸ ಮಾಡಿ ಯಶಸ್ಸು ಪಡೆಯಬೇಕಿದ್ದರೆ, ತಳಮಟ್ಟದ ಕಾರ್ಯಕರ್ತರಲ್ಲಿ ಇರುವ ವೈರತ್ವ ಮತ್ತು ಅಪನಂಬಿಕೆಯನ್ನು ಮೊದಲಿಗೆ ನಿವಾರಿಸಬೇಕು

ಕರ್ನಾಟಕ ವಿಧಾನಸಭೆ ಚುನಾವಣೆಯ ಗೆಲುವಿನ ಬಳಿಕ ಬಿಜೆಪಿ ವಿರೋಧಿ ಪಕ್ಷಗಳ ನಡುವೆ ಕಾಂಗ್ರೆಸ್‌ನ ವರ್ಚಸ್ಸು ಹೆಚ್ಚಾಗಿತ್ತು. ಆದರೆ, ಉತ್ತರ ಭಾರತದ ಮೂರು ರಾಜ್ಯಗಳ ಸೋಲಿನ ನಂತರ ಅದು ಪಾತಾಳಕ್ಕೆ ಕುಸಿದಿದೆ. ಬಿಜೆಪಿಗೆ ಒಗ್ಗಟ್ಟಾಗಿ ಸವಾಲು ಒಡ್ಡಲು ಇರಿಸಿಕೊಳ್ಳಬೇಕಾದ ಸಾಮೂಹಿಕ ಗುರಿಗಳು ಏನು ಎಂಬುದರತ್ತ ತಕ್ಷಣವೇ ಗಮನಹರಿಸಿದರೆ ಮಾತ್ರ ‘ಇಂಡಿಯಾ’ ಮೈತ್ರಿಕೂಟವು ಪರಿಣಾಮ ಬೀರಲು ಸಾಧ್ಯ. ಸೈದ್ಧಾಂತಿಕ ದಿಕ್ಕನ್ನು ಸ್ಪಷ್ಟವಾಗಿ ರೂಪಿಸುವುದು ಈ ಮೈತ್ರಿಕೂಟದ ಮುಂದೆ ಇರುವ ದೊಡ್ಡ ಸವಾಲು. ಸೀಟು ಹಂಚಿಕೆ ಸುಸೂತ್ರವಾಗಿ ಆಗುವಂತೆ ನೋಡಿಕೊಳ್ಳುವುದು ಕೂಡ ಸಣ್ಣ ಕೆಲಸವಲ್ಲ. ಮೂರು ರಾಜ್ಯಗಳಲ್ಲಿ ಸಿಕ್ಕ ಗೆಲುವು ಬಿಜೆಪಿಯ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ. ಕೇಂದ್ರದಲ್ಲಿ ಬಿಜೆಪಿ ಮೂರನೇ ಅವಧಿಗೆ ಅಧಿಕಾರಕ್ಕೆ ಏರುವುದು ಖಚಿತ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳುವುದು ಇದನ್ನು ಸೂಚಿಸುತ್ತದೆ. ಮೈತ್ರಿಕೂಟವು ಜೊತೆಯಾಗಿ ಕೆಲಸ ಮಾಡಿ ಯಶಸ್ಸು ಪಡೆಯಬೇಕಿದ್ದರೆ, ತಳಮಟ್ಟದ ಕಾರ್ಯಕರ್ತರಲ್ಲಿ ಇರುವ ವೈರತ್ವ ಮತ್ತು ಅಪನಂಬಿಕೆಯನ್ನು ಮೊದಲಿಗೆ ನಿವಾರಿಸಬೇಕು. ಮೈತ್ರಿಕೂಟದ ಪರವಾಗಿ ಎಲ್ಲರೂ ಜೊತೆಯಾಗಿ ಕೆಲಸ ಮಾಡುವುದು ಸಾಧ್ಯವಾಗಬೇಕು. ಈ ಸಂದೇಶವು ತಳಮಟ್ಟದವರೆಗೆ ತಲುಪುವಂತೆ ಮೈತ್ರಿಕೂಟದ ನಾಯಕರೇ ನೋಡಿಕೊಳ್ಳಬೇಕು. ಈ ಸಂದರ್ಭದಲ್ಲಿಯಂತೂ ಮೈತ್ರಿಕೂಟದ ನಾಯಕರ ನಡುವೆ ಯಾವುದೇ ಸಾಮರಸ್ಯ ಇದ್ದಂತೆ ಕಾಣಿಸುವುದಿಲ್ಲ. ಮೈತ್ರಿಕೂಟವು ಯಶಸ್ಸು ಪಡೆಯಬೇಕಿದ್ದರೆ ಕಾಂಗ್ರೆಸ್ ಮತ್ತು ‘ಇಂಡಿಯಾ’ ಮೈತ್ರಿಕೂಟದ ಪಾಲುದಾರರ ನಡುವೆ ಸಂಬಂಧ ಉತ್ತಮವಾಗಿರಬೇಕು. ಎಲ್ಲ ಅಪನಂಬಿಕೆಗಳನ್ನು ಕಳಚಿಕೊಂಡು, ಸುಸ್ಥಿರವಾಗಿ ಮುಂದಕ್ಕೆ ಸಾಗುವುದು ‘ಇಂಡಿಯಾ’ ಮುಂದೆ ಇರುವ ದೊಡ್ಡ ಸವಾಲು. ಈ ಸವಾಲು ಈಗ ಇನ್ನಷ್ಟು ಕಠಿಣವಾಗಿ ಪರಿವರ್ತಿತವಾಗಿದೆ.

ದಿನದ ಟ್ವೀಟ್

ಕಾಕತಾಳೀಯ...



ಅದಾನಿ ವಿಚಾರವಾಗಿ ಬಹಳ ಗಟ್ಟಿಯಾಗಿ ಮಾತನಾಡುತ್ತಿದ್ದ ಇಬ್ಬರು ಸಂಸದರು (ರಾಹುಲ್ ಗಾಂಧಿ ಮತ್ತು ಮಹುವಾ ಮೊಯಿತ್ರಾ) ಲೋಕಸಭೆಯಿಂದ ಹೊರಗುಳಿಯಬೇಕಾದುದು ಒಂದು ಕಾಕತಾಳೀಯ. ಈ ಇಬ್ಬರನ್ನು ಹೊರಹಾಕಿದ್ದು ಬೇರೆ ಬೇರೆ ಕಾರಣಗಳಿಗಾಗಿ. ಸುಪ್ರೀಂ ಕೋರ್ಟ್ ಆದೇಶದ ನಂತರ ರಾಹುಲ್ ಅವರಿಗೆ ಸದಸ್ಯ ಸ್ಥಾನವನ್ನು ಮತ್ತೆ ನೀಡಲಾಯಿತು.

ಮನು ಸೆಬಾಸ್ಟಿಯನ್, ಪತ್ರಕರ್ತ

ಕಿಡಿನುಡಿ



ಪೂರ್ವಸಿದ್ಧತೆ ಇಲ್ಲದೆ, ಅಗತ್ಯ ಸೌಕರ್ಯ ಕಲ್ಪಿಸದೇ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೆಚ್ಚಿಸಲು ಹಿಂದಿನ ಸರ್ಕಾರ ತರಾತುರಿಯಲ್ಲಿ ಎನ್‌ಇಪಿ ಜಾರಿಗೆ ತಂದಿತು. ಗುಜರಾತ್ ಸೇರಿದಂತೆ ಅವರದೇ ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿ ಇಂದಿಗೂ ಸಿದ್ಧತೆ ಪೂರ್ಣಗೊಂಡಿಲ್ಲ. ಪದವಿಯಲ್ಲಿ ಬಹು ನಿರ್ಗಮನ ಪದ್ಧತಿಯು ಹಲವು ವಿದ್ಯಾರ್ಥಿಗಳು ಮಧ್ಯದಲ್ಲೇ ಪದವಿ ತೊರೆಯಲು ಕಾರಣವಾಗಿದೆ. ಏಕಕಾಲಕ್ಕೆ ಎರಡು ಕೋರ್ಸ್ ಮಾಡುವ ಅವಕಾಶವೂ ಅವೈಜ್ಞಾನಿಕ.

ಡಾ.ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ

25 ವರ್ಷಗಳ ಹಿಂದೆ

ಬುಧವಾರ, 9-12-1998

- **ಗಂಗೂಬಾಯಿ ಹಾನಗಲ್‌ಗೆ ದೆಹಲಿ ವಿ.ವಿ ಡಾಕ್ಟರೇಟ್**

ಹುಬ್ಬಳ್ಳಿ, ಡಿ. 8– ಸುಪ್ರಸಿದ್ಧ ಹಿಂದೂಸ್ತಾನಿ ಗಾಯಕಿ ಡಾ. ಗಂಗೂಬಾಯಿ ಹಾನಗಲ್ ಅವರಿಗೆ ದೆಹಲಿ ವಿಶ್ವವಿದ್ಯಾಲಯವು ಈ ತಿಂಗಳ 13ರಂದು ಡಾಕ್ಟರೇಟ್ ಪದವಿ ನೀಡಿ ಗೌರವಿಸಲಿದೆ.

ಸಂಗೀತ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಕ್ಕಾಗಿ ಅವರಿಗೆ ಈ ಪದವಿ ನೀಡಲಾಗುತ್ತಿದೆ. ದೆಹಲಿ ವಿಶ್ವವಿದ್ಯಾಲಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಡೆಯಲಿರುವ ವಿಶೇಷ ಪದವಿ ಪ್ರದಾನ ಸಮಾರಂಭದಲ್ಲಿ ಈ ಪದವಿ ನೀಡಿ ಗೌರವಿಸಲಾಗುವುದು ಎಂದು ವಿಶ್ವ ವಿದ್ಯಾಲಯದ ಕುಲಸಚಿವರು, ಗಂಗೂಬಾಯಿ ಹಾನಗಲ್ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

- **ವನಾಂಚಲ: 11 ಬಿಜೆಪಿ ಸದಸ್ಯರ ರಾಜೀನಾಮೆ**

ನವದೆಹಲಿ, ಡಿ. 8 (ಪಿಟಿಐ)– ಪ್ರತ್ಯೇಕ ವನಾಂಚಲ ರಾಜ್ಯ ಸ್ಥಾಪನೆಗೆ ಅವಕಾಶ ನೀಡುವ ಮಸೂದೆಯನ್ನು ಲೋಕಸಭೆಯ ಪ್ರಸ್ತುತ ಅಧಿವೇಶನದಲ್ಲೇ ಮಂಡಿಸದಿದ್ದರೆ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ 11 ಮಂದಿ ಬಿಜೆಪಿ ಸದಸ್ಯರು ಬೆದರಿಕೆ ಹಾಕಿದ್ದಾರೆ.

ಈ ಕುರಿತು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರಿಗೆ ಪತ್ರ ಬರೆದು ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಈ ಬಗ್ಗೆ ಆಶ್ವಾಸನೆ ನೀಡಿತ್ತು ಎಂದು ನೆನಪಿಸಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 9-12-1973

- **‘ಬೆಮೆಲ್’ ಅಧಿಕಾರಿಗೆ ಘೇರಾವ್: ಗಲಭೆ, ಗುಂಡೇಟಿಗೆ ಒಬ್ಬನ ಬಲಿ**

ರಾಬರ್ಟ್‌ಸನ್‌ಪೇಟೆ, ಡಿ. 8– ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿರುವ ಭಾರತ ಅರ್ತ್ ಮೂವರ್ಸ್ ಕಾರ್ಖಾನೆ (ಬಿ.ಇ.ಎಂ.ಎಲ್) ಬಳಿ ಇಂದು ಬೆಳಿಗ್ಗೆ ಉದ್ರಿಕ್ತರ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿ, ಗುಂಡು ಹಾರಿಸಿದ ಪ್ರಯುಕ್ತ ಯಂತ್ರ ಚಾಲಕ ಬಾಲಸುಬ್ರಮಣ್ಯಂ (24) ಎಂಬುವರು ಸತ್ತು, ಏಳು ಮಂದಿ ಗಾಯಗೊಂಡರು.

ಗಾಯಗೊಂಡ, ಕಾರ್ಖಾನೆಯ ನೌಕರರ ಸಂಘದ ಅಧ್ಯಕ್ಷ ಶ್ರೀ ನಾರಾಯಣನ್ ಮತ್ತು ಡಿಪ್ಲೊಮಾ ಎಂಜಿನಿಯರ್ಸ್ ಗಿಲ್ಡ್‌ನ ಅಧ್ಯಕ್ಷ ಶ್ರೀ ಸುಬ್ರಮಣ್ಯಂ ಅವರ ಸಹಿತ ಏಳು ಮಂದಿಯನ್ನು ಇಲ್ಲಿಯ ಸರ್ಕಾರಿ ಸಿವಿಲ್ ಆಸ್ಪತ್ರೆಗೆ ಸೇರಿಸಲಾಗಿದೆ.

- **ಬೆಂಗಳೂರು ಕುದುರೆ ರೇಸಿನಲ್ಲಿ ಗಲಭೆ: ಐವರಿಗೆ ಗಾಯ, ಕೊನೆಯ ನಾಲ್ಕು ಓಟಗಳು ರದ್ದು**

ಬೆಂಗಳೂರು, ಡಿ. 8– ಫೇವರಿಟ್ ಕುದುರೆಯೊಂದರ ಅನಿರೀಕ್ಷಿತ ಪರಾಭವದಿಂದ ರೊಚ್ಚಿಗೆದ್ದ ಪಂಟರುಗಳು ಕಲ್ಲುಗಳ ತೂರಾಟ, ಪೀಠೋಪಕರಣಗಳ ಧ್ವಂಸ, ಬೆಂಕಿ ಹಚ್ಚುವ ದುಷ್ಕೃತ್ಯಗಳಲ್ಲಿ ತೊಡಗಿದ್ದರಿಂದ ಚಳಿಗಾಲದ ಬೆಂಗಳೂರು ರೇಸುಗಳ 8ನೇ ದಿನವಾದ ಇಂದು ಕೊನೆಯ ನಾಲ್ಕು ರೇಸುಗಳನ್ನು ರದ್ದುಪಡಿಸಬೇಕಾದ ಪರಿಸ್ಥಿತಿ ಒದಗಿತು.

ವಿಷಮಿಸುತ್ತಿದ್ದ ಪರಿಸ್ಥಿತಿಯನ್ನು ಹತೋಟಿಗೆ ತರುವ ಪ್ರಯತ್ನವಾಗಿ ಪೊಲೀಸರು ಕೆಲವರ ಮೇಲೆ ಲಘು ಲಾಠಿ ಪ್ರಹಾರ ಮಾಡಿದರು.

ಗುಜರಿ ನೀತಿಯನ್ನು ಜನಸ್ನೇಹಿಯನ್ನಾಗಿ ಮಾಡುವ ಅಗತ್ಯ ಇದೆ

ಗುಜರಿ ನೀತಿ: ಏನೇನೋ ಫಜೀತಿ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ವಾಯುಮಾಲಿನ್ಯ ತಡೆಯುವ ವಿಚಾರ ಬಂದಾಗಲೆಲ್ಲ ರಸ್ತೆಗಳಲ್ಲಿ ದಟ್ಟ ಹೊಗೆಯುಗುಳುವ ಅವಧಿ ಮೀರಿದ ಮುದಿ ವಾಹನಗಳ ಸಂಚಾರವನ್ನು ನಿಷೇಧಿಸುವ ವಿಷಯ ಪ್ರಸ್ತಾಪವಾಗುತ್ತದೆ. ಆದರೆ ಅದನ್ನು ಕಾರ್ಯರೂಪಕ್ಕಿಳಿಸಲು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಠಿಣ ನೀತಿ, ನಿರ್ದೇಶನ ಇರಲಿಲ್ಲ. 2016ರಿಂದಲೂ ಸ್ಪಷ್ಟ ‘ಗುಜರಿ ನೀತಿ’ಯನ್ನು ರೂಪಿಸಲು ಹೆಣಗುತ್ತಿದ್ದ ಕೇಂದ್ರ ಸರ್ಕಾರ ಕಳೆದ ವರ್ಷ ಏಪ್ರಿಲ್ ಒಂದರಿಂದ ಹೊಸ ನೀತಿಯನ್ನು ಜಾರಿಗೆ ತಂದಿದೆ.

ಈ ಹೊಸ ನೀತಿಯ ಪ್ರಕಾರ ಮಿಲಿಟರಿ ಮತ್ತು ತುರ್ತು ಚಿಕಿತ್ಸಾ ವಾಹನಗಳನ್ನು ಹೊರತುಪಡಿಸಿ ಹದಿನೈದು ವರ್ಷ ಹಳೆಯದಾದ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ಸ್ವಾಮ್ಯದ ವಾಹನಗಳನ್ನು ಅವು ಎಷ್ಟೇ ಸಮರ್ಥವಾಗಿದ್ದರೂ ಗುಜರಿಗೆ ಹಾಕಲಾಗುತ್ತದೆ. ನಂತರ ಖಾಸಗಿ ವಲಯದ ವಾಣಿಜ್ಯ ಬಳಕೆಯ ವಾಹನಗಳಾದ ಬಸ್ಸು, ಲಾರಿ, ಕ್ಯಾಬ್‌ಗಳು ಮೊದಲ ಎಂಟು ವರ್ಷಗಳವರೆಗೆ ಪ್ರತಿ ಎರಡು ವರ್ಷಕ್ಕೊಮ್ಮೆ ಮತ್ತು ನಂತರ ಪ್ರತಿ ವರ್ಷಕ್ಕೊಮ್ಮೆ ದೃಢತೆ ಪ್ರಮಾಣಪತ್ರ (ಎಫ್‌ಸಿ) ಪಡೆಯಬೇಕು. ಹೀಗೆಯೇ ಮುಂದುವರೆದು ಹದಿನೈದು ವರ್ಷ ಹಳೆಯದಾದ ಮೇಲೆ ದೃಢತೆ ಪರೀಕ್ಷೆ ತೇರ್ಗಡೆಯಾಗದಿದ್ದರೆ ಗುಜರಿಗೆ ಹೋಗಲೇಬೇಕು. ಸ್ವಂತಕ್ಕೆ ಬಳಸುವ ಕಾರು ಮತ್ತಿತರೆ ವಾಹನಗಳು 20 ವರ್ಷಗಳಾದ ಮೇಲೆ ದೃಢತೆ ಪ್ರಮಾಣ ಪತ್ರ ಪಡೆಯುವಲ್ಲಿ ವಿಫಲಗೊಂಡರೆ ಅವೂ ಗುಜರಿಗೆ ಹೋಗಬೇಕಾಗುತ್ತವೆ. ಸುಸ್ಥಿತಿಯಲ್ಲಿರುವ ವಾಹನಗಳನ್ನು ಗುಜರಿಗೆ ಹಾಕಲೇಬೇಕಿಲ್ಲ. ದೃಢತೆ ಪರೀಕ್ಷೆಗಳನ್ನು ಪೂರೈಸದ ವಾಹನಗಳಿಗೆ ಮತ್ತೊಂದು ಅವಕಾಶ ನೀಡಲಾಗುತ್ತದೆ. ಆಗಲೂ ಪಾಸಾಗದಿದ್ದರೆ ಗುಜರಿ ಕೇಂದ್ರಗಳೇ ಗತಿ.

ಎಂಟು ವರ್ಷ ಹಳೆಯದಾದ ಸರಕುಸಾಗಣೆ ವಾಹನ ಮತ್ತು ಹದಿನೈದು ವರ್ಷ ಹಳೆಯದಾದ ಖಾಸಗಿ ವಾಹನಗಳಿಗೆ ರಸ್ತೆ ತೆರಿಗೆ ಮೊತ್ತದ ಶೇಕಡ 10ರಿಂದ 25 ರಷ್ಟು ಗ್ರೀನ್‌ಟ್ಯಾಕ್ಸ್ (ಹಸಿರುತೆರಿಗೆ) ಹಾಕಬೇಕೆಂಬ ಪ್ರಸ್ತಾಪವಿದೆ. ಕರ್ನಾಟಕ, ಮಹಾರಾಷ್ಟ್ರದಲ್ಲಿ ಈಗಾಗಲೇ ಗ್ರೀನ್ ಟ್ಯಾಕ್ಸ್ ವಿಧಿಸಲಾಗುತ್ತಿದೆ.

ದೇಶದಲ್ಲಿ ನೋಂದಣಿಯಾಗಿರುವ ವಾಹನಗಳ ಸಂಖ್ಯೆ 34 ಕೋಟಿಗಿಂತ ಹೆಚ್ಚು. ಮುದಿ ವಾಹನಗಳ ಸಂಖ್ಯೆ 6 ಕೋಟಿ. ವಯಸ್ಸಾದರೂ ಓಡುತ್ತಿರುವ ವಾಹನಗಳಲ್ಲದೆ ಸುಮಾರು ಅರ್ಧ ಕೋಟಿ ವಾಹನಗಳು ರಸ್ತೆಯ ಅಕ್ಕಪಕ್ಕ, ಪೊಲೀಸ್ ಠಾಣೆಗಳ ಮುಂದೆ, ಊರ ಹೊರಗೆ, ಗ್ಯಾರೇಜುಗಳಲ್ಲಿ ತುಕ್ಕು ಹಿಡಿಯುತ್ತ ನಿಂತಿವೆ. ಅವು ಉಂಟುಮಾಡುವ ನೀರು, ಮಣ್ಣು, ಗಾಳಿಯ ಮಾಲಿನ್ಯ ಹೊಸ ವಾಹನಗಳಿಂದಾಗುವ ಮಾಲಿನ್ಯಕ್ಕಿಂತ ಎಪ್ಪತ್ತು ಪಟ್ಟು ಜಾಸ್ತಿ. ರಸ್ತೆಗಿಳಿಯುವ ವಾಹನ ಇಪ್ಪತ್ತು ವರ್ಷಗಳವರೆಗೆ ಮಾತ್ರ ಓಡಬಹುದು ಎಂದಾದರೆ, ಈ ವೇಳೆಗೆ ಕೋಟ್ಯಂತರ ವಾಹನಗಳು ಗುಜರಿಗೆ ಸೇರಬೇಕಿತ್ತು.

ಹದಿನೈದು ವರ್ಷ ಹಳೆಯದಾದ ಸರ್ಕಾರಿ ಸ್ವಾಮ್ಯದ ಎಲ್ಲ ವಾಹನಗಳನ್ನು ಇದೇ ಏಪ್ರಿಲ್ 1ರಿಂದ ಗುಜರಿಗೆ ಹಾಕಲಾಗುತ್ತಿದ್ದು ಇದುವರೆಗೆ ಹದಿಮೂರು ಸಾವಿರ ವಾಹನಗಳು ಗುಜರಿಗೆ ಹೋಗಿವೆ. ಮುಂದಿನ ಜೂನ್ 1ರಿಂದ ಹದಿನೈದು ವರ್ಷ ಹಳೆಯದಾದ ವಾಣಿಜ್ಯ ಬಳಕೆಯ ಮತ್ತು ಇಪ್ಪತ್ತು ವರ್ಷದ ಸ್ವಂತ ವಾಹನಗಳು ಸರ್ಕಾರ ನಿಗದಿಪಡಿಸಿದ ಆಟೊಮೇಟೆಡ್ ಟೆಸ್ಟಿಂಗ್ ಸ್ಟೇಷನ್‌ಗಳಿಂದ (ಎಟಿಎಸ್) ಕಡ್ಡಾಯವಾಗಿ ದೃಢತೆ ಪ್ರಮಾಣಪತ್ರ ಪಡೆಯಲೇಬೇಕು, ಇಲ್ಲವೇ ಗುಜರಿಗೆ ಹೋಗಬೇಕು. ವಾಣಿಜ್ಯ ಬಳಕೆಯ ಖಾಸಗಿ ವಾಹನಗಳು ಮತ್ತು ಸ್ವಂತಕ್ಕೆ ಬಳಸುವ ವಾಹನಗಳ ದೃಢತೆ ಪ್ರಮಾಣಪತ್ರ ಶುಲ್ಕವು ಈಗಿರುವುದಕ್ಕಿಂತ ಕ್ರಮವಾಗಿ 62 ಮತ್ತು 8 ಪಟ್ಟು ಹೆಚ್ಚಲಿದೆ. ಆಗ ದುಬಾರಿ ಶುಲ್ಕ ಕಟ್ಟುವುದಕ್ಕಿಂತ ಗುಜರಿಗೆ ಹಾಕುವುದೇ ಉತ್ತಮ ಎಂಬ ಮಾತು ತಜ್ಞರದ್ದು.

ವಾಹನಗಳನ್ನು ಸ್ವಯಂ ನಿರ್ಧಾರದಂತೆ ಗುಜರಿಗೆ ಹಾಕುವವರಿಗೆ ಸರ್ಕಾರ ಕೆಲವು ಸವಲತ್ತುಗಳನ್ನು ನೀಡಲಿದೆ. ಹೊಸ ವಾಹನದ ನೋಂದಣಿಗೆ ಶುಲ್ಕವಿರುವುದಿಲ್ಲ. ಖಾಸಗಿ ವಾಹನಗಳ ರಸ್ತೆ ತೆರಿಗೆಯ ಮೇಲೆ ಶೇ 25 ಮತ್ತು ವಾಣಿಜ್ಯ ವಾಹನಗಳ ರಸ್ತೆ ತೆರಿಗೆಯ ಮೇಲೆ ಶೇ 15ರ ರಿಯಾಯಿತಿ ಇರುತ್ತದೆ. ವಾಹನ ಮಾರಾಟಗಾರರು ಹೊಸ ವಾಹನದ ಬೆಲೆಯಲ್ಲಿ ಹೆಚ್ಚಿನ ರಿಯಾಯಿತಿ ಮತ್ತು ಹಳೆಯ ವಾಹನಕ್ಕೆ ಹೊಸ ವಾಹನದ ಬೆಲೆಯ ಶೇಕಡ 6ರಷ್ಟು ಬೆಲೆ ನೀಡಬಹುದು.

‘ಆಟೊಮೋಟಿವ್ ಇಂಡಸ್ಟ್ರಿ ಸ್ಟ್ಯಾಂಡರ್ಡ್’ (ಎಐಎಸ್)– 129ರ ಪ್ರಕಾರ ವಾಹನ ತಯಾರಿಕೆಗೆ ಬಳಕೆಯಾಗುವ ಬಹುತೇಕ ವಸ್ತುಗಳು ರೀಸೈಕಲ್ ಆಗುವಂತಿರಬೇಕು, ವಾಹನ ಗುಜರಿಯಾದಾಗ ಅದರ ಶೇ 85 ಭಾಗ ಪುನರ್ಬಳಕೆಗೆ ಯೋಗ್ಯವಾಗಿರಬೇಕು ಮತ್ತು ಸೀಸ, ಪಾದರಸ, ಕ್ಯಾಡ್ಮಿಯಂ, ಕ್ರೋಮಿಯಂನಂತಹ ಭಾರದ ಲೋಹಗಳನ್ನು ಬಳಸಿರಕೂಡದು, ಬಳಸಿದ ಪ್ಲಾಸ್ಟಿಕ್‌ನ ಗ್ರೇಡ್ ನಮೂದಾಗಲೇಬೇಕು ಎಂಬ ನಿಯಮವಿದೆ. ಉತ್ಪಾದಕರೇ ಗುಜರಿ ವಿಲೇವಾರಿ ಮಾಡಬೇಕೆಂಬ ‘ಎಕ್ಸ್‌ಟೆಂಡೆಡ್ ಪ್ರೊಡ್ಯೂಸರ್ ರೆಸ್ಪಾನ್ಸಿಬಿಲಿಟಿ’ (ಇಪಿಆರ್) ನಿಯಮವನ್ನು ನಮ್ಮಲ್ಲಿ ಸರಕುಸಾಗಣೆ ವಾಹನಗಳಿಗೆ ಅನ್ವಯಿಸದಿರುವುದು ಮಾಲಿನ್ಯ ನಿಯಂತ್ರಣಕ್ಕೆ ದೊಡ್ಡ ಅಡ್ಡಿಯಾಗಿದೆ.

ತಮ್ಮ ಹಳೆಯ ವಾಹನವನ್ನು ಗುಜರಿಗೆ ಹಾಕಲು ಒಪ್ಪದ ಮಾಲೀಕರು ‘ನಮ್ಮ ವಾಹನದ ಹೊಗೆಯ ಬಗ್ಗೆ ಎಲ್ಲರೂ ಮಾತನಾಡುತ್ತಾರೆ, ಆದರೆ ಗುಂಡಿ ಬಿದ್ದು ಡಾಂಬರು ಕಿತ್ತುಹೋದ ರಸ್ತೆಗಳ ಬಗ್ಗೆ ಯಾರೂ ಏಕೆ ಚಕಾರ ಎತ್ತುವುದಿಲ್ಲ, ನಾವೆಲ್ಲಾ ರಸ್ತೆ ತೆರಿಗೆ ಯಾಕೆ ಕಟ್ಟಬೇಕು’ ಎಂದು ಕೇಳುತ್ತಾರೆ. ‘ಕೆಟ್ಟ ರಸ್ತೆಗಳಲ್ಲಿ ಹಲವು ಸಲ ಬ್ರೇಕ್ ಹಾಕಬೇಕಾಗುತ್ತದೆ, ಇದ್ದಕ್ಕಿದ್ದಂತೆ ವೇಗ ಹೆಚ್ಚಿಸಬೇಕಾಗುತ್ತದೆ, ಆಗ ಹೆಚ್ಚಿನ ಇಂಧನ ಉರಿಯುವುದರಿಂದ ಹೆಚ್ಚು ಹೊಗೆ ಎದ್ದೇ ಏಳುತ್ತದೆ. ಕೆಟ್ಟ ರಸ್ತೆಗಳಿಂದಾಗಿ ನಮ್ಮ ವಾಹನಗಳು ಮುದಿಯಾಗುತ್ತಿವೆ, ಅದಕ್ಕೆ ಯಾರು ಹೊಣೆ’ ಎನ್ನುತ್ತಾರೆ. ‘ಸಿಟಿಯಲ್ಲಿದ್ದರೆ ತಾನೇ ಸಮಸ್ಯೆ, ಇದನ್ನು ನಮ್ಮ ಹಳ್ಳಿಗೆ ಕಳಿಸಿಬಿಡುತ್ತೇವೆ, ಇನ್ನೂ ಇಪ್ಪತ್ತು ವರ್ಷ ಆರಾಮವಾಗಿ ಬಳಸಬಹುದು’ ಎನ್ನುತ್ತಾರೆ. ಅಲ್ಲಿಗೆ ನಗರದ ಮಾಲಿನ್ಯ ಹಳ್ಳಿಗಳಿಗೆ ವರ್ಗಾವಣೆಗೊಳ್ಳುತ್ತದೆ.

‘ಹೊಸ ವಾಹನಗಳ ಖರೀದಿಗೆ ಲಕ್ಷಲಕ್ಷ ಹಣ ಬೇಕಾಗುತ್ತದೆ, ಅದು ನಮ್ಮಲ್ಲಿಲ್ಲ’ ಎನ್ನುವ ಜನ ಡೀಸೆಲ್ ಗಾಡಿಗಳು ನೀಡುವಷ್ಟು ಮೈಲೇಜನ್ನು ಪೆಟ್ರೋಲ್ ಮತ್ತು ಎಲೆಕ್ಟ್ರಿಕ್ ಗಾಡಿಗಳು ನೀಡುವುದಿಲ್ಲ ಎಂದು ಕಾರಣ ಕೊಡುತ್ತಾರೆ. ಕಡಿಮೆ ದೂರ ಓಡಿರುವ ಪೆಟ್ರೋಲ್ ವಾಹನಗಳು ಕಡಿಮೆ ಮಾಲಿನ್ಯ ಉಂಟುಮಾಡುತ್ತವೆ, ಹಾಗಾಗಿ ವಯಸ್ಸಿನ ಆಧಾರದ ಮೇಲೆ ಗುಜರಿಗೆ ತಳ್ಳುವುದು ಎಷ್ಟು ಸರಿ ಎನ್ನುವ ಪ್ರಶ್ನೆ ಬಲವಾಗಿದೆ. ಮೇಲಾಗಿ ಹೊಸ ವಾಹನಗಳ ತಯಾರಿಕೆಗೆ ಬೇಕಾದ ಲೋಹಗಳಿಗೆ ಹೆಚ್ಚಿನ ಗಣಿಗಾರಿಕೆ ನಡೆದು ಪರಿಸರದ ಮೇಲೆ ಮತ್ತಷ್ಟು ಒತ್ತಡ ಬೀಳುತ್ತದೆ.

ದೇಶದಲ್ಲಿರುವ ‘ಆಟೊಮೇಟೆಡ್ ಟೆಸ್ಟಿಂಗ್ ಸ್ಟೇಷನ್’ಗಳ ಸಂಖ್ಯೆ ಕೇವಲ 24. ಸರ್ಕಾರಗಳು ಎಟಿಎಸ್‌ಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯಬೇಕು. ಒಂದು ಲಕ್ಷ ಸಂಖ್ಯೆಯ ವಾಣಿಜ್ಯ ಬಳಕೆಯ ವಾಹನಗಳಿರುವ ಜಿಲ್ಲೆಗೊಂದರಂತೆ ಎಟಿಎಸ್ ತೆರೆಯುವ ಯೋಜನೆ ಸರ್ಕಾರದ ಮುಂದಿದೆ. ತಪಾಸಣೆಯಲ್ಲಿ ಯಾವ ಲೋಪವೂ ಆಗಬಾರದು. ಸಮಸ್ಯೆ ಪರಿಹರಿಸಲು ಜನ ಸ್ವಯಂ ಪ್ರೇರಿತರಾಗಿ ತಮ್ಮ ಹಳೆಯ ವಾಹನವನ್ನು ಗುಜರಿಗೆ ಹಾಕಬೇಕು. ಹೆಚ್ಚು ಹೊಗೆ ಕಾರುವ ಡೀಸಲ್ ವಾಹನದ ಬದಲಿಗೆ ಪೆಟ್ರೋಲ್ ಮತ್ತು ಎಲೆಕ್ಟ್ರಿಕ್ ವಾಹನಗಳ ಖರೀದಿಗೆ ಮುಂದಾಗಬೇಕು. ತಯಾರಕರು ಎಲೆಕ್ಟ್ರಿಕ್ ವಾಹನಗಳ ಬೆಲೆ ಕಡಿಮೆ ಮಾಡಿ, ಹೆಚ್ಚಿನ ಸಬ್ಸಿಡಿ ನೀಡಿ, ಚಾರ್ಜಿಂಗ್ ಸ್ಟೇಷನ್‌ಗಳನ್ನು ಹೆಚ್ಚಿಸಿ, ಮಾರಾಟ ಹೆಚ್ಚಿಸಿದಲ್ಲಿ ಮಾಲಿನ್ಯವನ್ನು ಗಣನೀಯವಾಗಿ ನಿಯಂತ್ರಿಸಬಹುದು.

ವಾಹನಗಳನ್ನು ಗುಜರಿಗೆ ತೆಗೆದುಕೊಳ್ಳುವ ನೋಂದಣಿಯಾಗಿರುವ ಸೌಲಭ್ಯ ಕೇಂದ್ರಗಳ (ರಿಜಿಸ್ಟರ್ಡ್ ವೆಹಿಕಲ್ ಸ್ಕ್ರ್ಯಾಪಿಂಗ್ ಫೆಸಿಲಿಟಿ) ಸಂಖ್ಯೆ ಕೇವಲ 65. ಅತಿ ಹೆಚ್ಚು ಕೇಂದ್ರಗಳು ಉತ್ತರಪ್ರದೇಶ (9) ರಾಜ್ಯದಲ್ಲಿದ್ದು ಉಳಿದವು ಇತರ ಹನ್ನೊಂದು ರಾಜ್ಯಗಳಲ್ಲಿವೆ. ಕರ್ನಾಟಕದಲ್ಲಿ ಬೆಂಗಳೂರಿನ ಹೊರವಲಯದ ವಿಜಯಪುರದಲ್ಲಿ ಒಂದಿದೆ. ಸರ್ಕಾರ ಆದಷ್ಟು ಬೇಗ ಇವುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಹೊಸ ಗುಜರಿ ನೀತಿಯನ್ನು ಜನಸ್ನೇಹಿಯನ್ನಾಗಿ ಮಾಡುವ ಜವಾಬ್ದಾರಿ ಸರ್ಕಾರದ ಮೇಲಿದೆ.



ಚುರುಮುರಿ



ಹಲೋ ಜೀ...

● ಗುರು ಪಿ.ಎಸ್.

‘ಜೀ... ಜೀ...’

ಕೈಕಟ್ಟಿಕೊಂಡು, ನಡುಬಗ್ಗಿಸಿ, ನಗುಮೊಗದೊಂದಿಗೆ ಬಾಗಿಲ ಬಳಿ ನಿಂತು ಕೂಗಿದ ಶಿಷ್ಯೋತ್ತಮ.

ಶಿಷ್ಯ ಮನೆಯೊಳಗೆ ಅಡಿ ಇಡಬೇಕೆನ್ನುವಷ್ಟರಲ್ಲೇ ‘ಜೀ’ ಅವರೇ ಬಾಗಿಲ ಬಳಿ ಬಂದು ನಿಂತರು.

‘ಏನು ವಿಶೇಷ, ಬೆಳ್‌ಬೆಳಿಗ್ಗೆಯೇ ನಿಮ್ಮ ಬರೋಣವಾಗಿದೆ?’

‘ಸೂರ್ಯೋದಯವಾಗ್ತಿದ್ದಂಗೆ ನಿಮ್ ಮುಖ ನೋಡಿದರೆ ಜೀ, ಅಂದುಕೊಂಡ ಕೆಲಸ ಆಗದಿದ್ದರೂ ದೊಡ್ಡ ಅನಾಹುತ ಆಗಲ್ಲ ಅನ್ನೋ ನಂಬಿಕೆ ಜೀ’.

ಶಿಷ್ಯ ಹೊಗಳ್ತಿದಾನೋ, ತೆಗಳ್ತಿದಾನೋ ತಿಳಿಯದೇ ನಿಂತರು ‘ಜೀ’.

‘ನೀವೇ ನೀರಿಗಿಳಿಯದಿದ್ದರೂ ಎಲ್ಲರಿಗೂ ಈಜು ಕಲಿಸುವಂಥ ಜೀನಿಯಸ್ ಜೀ ನೀವು’.

‘ಅಂದ್ರೆ?’

‘ಎಲೆಕ್ಷನ್‌ಗೇ ನಿಲ್ಲದಿದ್ದರೂ ಸಿಎಂಗಳನ್ನೇ ಆಯ್ಕೆ ಮಾಡೋವಂಥ ಪವರ್ ಇದೆಯಲ್ಲ ಜೀ ನಿಮಗೆ, ಅದಕ್ಕೆ ಹಾಗಂದೆ ಜೀ’ ಹಲ್ಕಿರಿದ ಶಿಷ್ಯ.

ಹೆಮ್ಮೆಯಿಂದ ಎದೆಯುಬ್ಬಿಸಿದರು ‘ಜೀ’.

‘ಆದ್ರೂ ಜೀ, ‘ಆ’ ಸಮಾಜದವರು ಹಂಗೆ, ಹಿಂಗೆ, ಅವರಿಂದ ದೂರ ಇರಿ ಅಂತೆಲ್ಲ ಭಾಷಣ ಮಾಡ್ತೀರಿ ಜೀ, ಮತ್ತೆ ಅವರ ಜೊತೆಗೇ ಬಿಸಿನೆಸ್ ಪಾರ್ಟ್ನರ್ ಆಗ್ತೀರಲ್ಲ ಜೀ, ಇದೆಲ್ಲ ಹೆಂಗೆ ಜೀ?’

‘ಓ ಸಪರೇಟ್, ಏ ಸಪರೇಟ್. ಭಾಷಣ ಬೇರೆ, ಬದುಕು ಬೇರೆ’.

‘ನಾನು ಯಾವಾಗಲೂ ನಿಮ್ ಜೊತೆಗೇ ಇರ್ತೀನಿ, ಆದರೂ ನಮಗೆ ಇವೆಲ್ಲ ಹೊಳೆಯೋದೇ ಇಲ್ವಲ್ಲ ಜೀ...’

‘ಜೊತೆಗೆ ನಿಂತು ಫೋಟೊಗೆ ಪೋಸು ಕೊಟ್ಟ ಮಾತ್ರಕ್ಕೆ ‘ಜೊತೆಗೇ’ ಇದೀವಿ ಅಂತ ಅರ್ಥ ಅಲ್ಲವೋ ದಡ್ಡ’ ವ್ಯಂಗ್ಯದ ನಗೆ ಬೀರಿದರು ‘ಜೀ’.

ಜೀ ಮತ್ತು ಶಿಷ್ಯೋತ್ತಮನ ನಡುವಿನ ಈ ಸಂಭಾಷಣೆ ಪೂರ್ತಿ ಫೇಸ್‌ಬುಕ್‌ನಲ್ಲಿ ‘ಲೈವ್’ ಹೋಗ್ತಿತ್ತು.

‘ಜೀ ಜೀ ಅನ್ನುತ್ತಲೇ ಇದೇನೋ ಮಾಡಿದಿಯಾ? ನಿಮ್ಮಂಥವರನ್ನ ನೋಡಿಯೇ ನಮ್ ದೊಡ್ಡೋರು ಒಂದು ಮಾತು ಹೇಳಿದಾರೆ...’

ಮತ್ತಷ್ಟು ನಡು ಬಗ್ಗಿಸಿದ ಶಿಷ್ಯ ಕೇಳಿದ, ‘ಏನ್ ಹೇಳಿದಾರೆ ಜೀ?’

‘ಅತಿ ವಿನಯಂ ಧೂರ್ತ ಲಕ್ಷಣಂ!’

ಸಂಗತ

ಹಾಲುಣಿಸಲು ಕೊಠಡಿ: ಎಲ್ಲೆಡೆ ವಿಸ್ತರಿಸಲಿ

ತಾಯಂದಿರಿಗೆ ಯಾವುದೇ ರೀತಿಯ ಸಂಕೋಚವಿಲ್ಲದೆ ಸುರಕ್ಷಿತ– ಸ್ವಚ್ಛ ಸ್ಥಳದಲ್ಲಿ ಮಗುವಿಗೆ ಹಾಲುಣಿಸಲು ಅವಕಾಶ ಕಲ್ಪಿಸುವುದು ಮೂಲಭೂತ ಅಗತ್ಯ

● ಡಾ.ಕೆ.ಎಸ್.ಚೈತ್ರಾ

ಹಸಿವೆಯಿಂದ ಕುಸುಗುಡುವ ಮಗುವನ್ನು ಹೊತ್ತು ಚಡಪಡಿಸುವ ತಾಯಿಗೆ ಅತ್ತ ಇತ್ತ ಯಾರಾದರೂ ಕಂಡರೆ ಎಂದು ಮುಜುಗರದಿಂದ ಕಣ್ಣಾಡಿಸುತ್ತಾ, ಎಲ್ಲೆಲ್ಲೋ ಕುಳಿತು ಮೈಯನ್ನು ಹಿಡಿಯಾಗಿಸಿ ಈ ಕೆಲಸ ಮಾಡಬೇಕಾದ ಅನಿವಾರ್ಯ... ಹಾಗಿದ್ದೂ ಎಲ್ಲವನ್ನೂ ಮೀರಿ ಗಾಸಿಗೊಳಿಸುವ ಕ್ರೂರ– ಕಾಮುಕ ನೋಟ, ವ್ಯಂಗ್ಯ ನುಡಿ... ಅಷ್ಟಕ್ಕೂ ಆ ತಾಯಿ ಮಾಡುತ್ತಿರುವ ಕೆಲಸ? ಮಗುವಿಗೆ ಹಾಲುಣಿಸುವ ಸಹಜಕ್ರಿಯೆ!

ಸಾರ್ವಜನಿಕ ಸ್ಥಳಗಳಲ್ಲಿ ಮಗುವಿಗೆ ಹಾಲುಣಿಸುವುದು ತಾಯಂದಿರು ಎದುರಿಸುವ ಬಹುದೊಡ್ಡ ಸಮಸ್ಯೆ. ಹೀಗಿರುವಾಗ ರೈಲ್ವೆ ಇಲಾಖೆ, ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರು ವಿಭಾಗದ ಎಂಟು ಕಡೆ ಹಾಲುಣಿಸಲು ಕೊಠಡಿ ವ್ಯವಸ್ಥೆ ಯೋಜನೆ ರೂಪಿಸಿರುವುದು ನಿಜಕ್ಕೂ ಒಳ್ಳೆಯ ಕ್ರಮ. ಇದರಿಂದಾಗಿ ಹಾಲುಣಿಸುವಾಗ, ಚಿಕ್ಕ ಮಕ್ಕಳಿಗೆ ಆಹಾರ ತಿನಿಸುವಾಗ ತಾಯಿ ಮತ್ತು ಮಗುವಿನ ಖಾಸಗಿತನಕ್ಕೆ ಭಂಗ ಬರುವುದಿಲ್ಲ. ಜತೆಗೆ ಆಹಾರ ನೀಡುವ ಪ್ರಕ್ರಿಯೆ ಸ್ವಚ್ಛ ಪರಿಸರದಲ್ಲಿ ಸುಲಭವಾಗಿ ಮತ್ತು ಸುಗಮವಾಗಿ ನಡೆಯಲು ಸಹಾಯಕ.

ಈ ಕೊಠಡಿಗಳಲ್ಲಿ ಕುಳಿತುಕೊಳ್ಳಲು ಅನುಕೂಲಕರವಾದ ಮೆತ್ತನೆಯ ಸೀಟು ಮತ್ತು ಡೈಪರ್ ಬದಲಾಯಿಸಲು ಸುಸಜ್ಜಿತವಾದ ಟೇಬಲ್ ವ್ಯವಸ್ಥೆ ಇರುತ್ತದೆ. ಕುಡಿಯಲು ನೀರು, ಗಾಳಿಗೆ ಫ್ಯಾನು ಮತ್ತು ಬೆಳಕಿಗಾಗಿ ದೀಪದ ವ್ಯವಸ್ಥೆಯನ್ನೂ ಮಾಡಲಾಗಿದೆ. ಹಾಗೆಯೇ ಹೊಲಸಾದ ಡೈಪರ್‌ಗಳನ್ನು ಬಿಸಾಡಲು ಕಸದ ಬುಟ್ಟಿಯನ್ನು ಇಡಲಾಗಿದ್ದು ಕಾಲಕಾಲಕ್ಕೆ ಅದರ ಸ್ವಚ್ಛತೆಯನ್ನು ಮಾಡಲಾಗುವುದು. ಈಗಾಗಲೇ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ಇರುವ ಹಾಲುಣಿಸುವ ಕೊಠಡಿಗೆ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಬೆಂಗಳೂರಿನ ರೈಲು ನಿಲ್ದಾಣಗಳಲ್ಲಿ ಆರಂಭಿಸಿ ನಂತರ ರಾಜ್ಯದ ಎಲ್ಲಾ ಕಡೆ ಇದನ್ನು ವಿಸ್ತರಿಸುವ ಆಲೋಚನೆ ಇದೆ ಎಂದು ತಿಳಿಸಲಾಗಿದೆ.

ತಾಯಿಯ ಹಾಲು ಮಗುವಿಗೆ ಅಮೃತ ಎನ್ನುವ ಘೋಷಣೆಯನ್ನು ಕೇಳುತ್ತಲೇ ಬಂದಿದ್ದರೂ ಎದೆಹಾಲು ನೀಡುವುದೆಂದರೆ ಯಾರಿಗೂ ಕಾಣದ ಹಾಗೆ ಗುಟ್ಟಾಗಿ ಮಾಡಬೇಕಾದ ಕ್ರಿಯೆ ಎನ್ನುವ ನಂಬಿಕೆ ನಮ್ಮಲ್ಲಿ ಬಲವಾಗಿಯೇ ಬೇರೂರಿದೆ. ಭಾರತದಲ್ಲಿ ಶೇ 6ರಷ್ಟು ಮಹಿಳೆಯರು ಮಾತ್ರ ಸಾರ್ವಜನಿಕವಾಗಿ ಹಾಲುಣಿಸುವುದನ್ನು ಅನುಮೋದಿಸುತ್ತಾರೆ. ಸಾರ್ವಜನಿಕ ಸ್ಥಳಗಳಲ್ಲಿ ಹಾಲುಣಿಸಿದರೆ ಕೊಂಕುಮಾತು- ಕೊಳಕು ನೋಟಗಳನ್ನು ಎದುರಿಸುವುದೇ ಹೆಚ್ಚು. ಹೀಗಾಗಿ ಹಾಲುಣಿಸುವ ಸಹಜಕ್ರಿಯೆ ಬಹಳಷ್ಟು ತಾಯಂದಿರಿಗೆ ನಾಚಿಕೆಯ ವಿಷಯವಾಗಿದೆ. ಅದರೊಂದಿಗೆ ಎಲ್ಲಾದರೂ ತಮ್ಮ ದೇಹ ಪ್ರದರ್ಶನವಾದರೆ ಎನ್ನುವ ಹೆದರಿಕೆಯೂ ಸೇರಿದೆ. ಆದರೆ ಸಮಸ್ಯೆ ಎಂದರೆ ಪ್ರಯಾಣದ ಸಮಯದಲ್ಲಿ ಬಸ್‌ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳು ಮಾತ್ರವಲ್ಲ ಅತ್ಯಾಧುನಿಕ ಮಾಲ್‌ಗಳಲ್ಲಿಯೂ ಮಗುವಿಗೆ ಹಾಲುಣಿಸಲು ಯಾವುದೇ ರೀತಿಯ ಪ್ರತ್ಯೇಕ ವ್ಯವಸ್ಥೆ ಇಲ್ಲ.

ಕೆಲ ವರ್ಷಗಳ ಹಿಂದೆ ಕೋಲ್ಕತ್ತದ ಅತ್ಯಾಧುನಿಕ ಮಾಲ್‌ನಲ್ಲಿ ಅಳುತ್ತಿದ್ದ ಏಳು ತಿಂಗಳ ಮಗುವಿಗೆ ನೆಲದಲ್ಲಿ ಕುಳಿತು ಹಾಲುಣಿಸಲು ತಾಯಿ ಪ್ರಯತ್ನಿಸಿದ್ದಳು. ಕೂಡಲೇ ‘ಮಾಲ್ ಇರುವುದು ಶಾಪಿಂಗ್‌ಗೆ ಮಾತ್ರ! ಇಲ್ಲಿ ನೆಲದ ಮೇಲೆ ಕುಳಿತು ಹಾಲು ಉಣಿಸುವಂತಿಲ್ಲ. ಹಾಗಾಗಿ ನೀವು ನಿಮ್ಮ ಮನೆಯ ಕೆಲಸವನ್ನೆಲ್ಲ ಮನೆಯಲ್ಲೇ ಮುಗಿಸಿ ಅಥವಾ ಸರಿಯಾಗಿ ಪ್ಲಾನ್ ಮಾಡಿಕೊಂಡು ಮಾಲ್‌ಗೆ ಬನ್ನಿ. ಬೇಕಾದರೆ ವಾಶ್‌ರೂಮಿನಲ್ಲಿ ಕುಡಿಸಿ’ ಎಂದು ಸಿಬ್ಬಂದಿ ಆಕೆಗೆ ಹೆದರಿಸಿದ್ದು ಸುದ್ದಿಯಾಗಿತ್ತು. ಕೆಲಸ ಮಾಡುವ ಸ್ಥಳಗಳಲ್ಲಿಯೂ ಹಾಲುಣಿಸುವ ಸುಸಜ್ಜಿತ ಸೌಲಭ್ಯಗಳಿಲ್ಲದೇ ಮಹಿಳೆಯರು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಕಾನೂನಿನ ಪ್ರಕಾರ ಐವತ್ತಕ್ಕಿಂತ ಹೆಚ್ಚು ಉದ್ಯೋಗಿಗಳಿದ್ದರೆ ಹತ್ತಿರದಲ್ಲಿಯೇ ಶಿಶುಪಾಲನಾ ಸೌಲಭ್ಯವನ್ನು ಕಂಪನಿ ನೀಡಬೇಕು. ದಿನಕ್ಕೆ ನಾಲ್ಕು ಬಾರಿ ಈ ಕೇಂದ್ರಕ್ಕೆ ತೆರಳಿ ಆಹಾರ ನೀಡಲು ತಾಯಿಗೆ ಅನುಮತಿ ಇದೆ. ಆದರೆ ಈ ಸೌಲಭ್ಯ ನೀಡುವವರೂ, ಬಳಸುವವರೂ ಕಡಿಮೆ.



ವೈದ್ಯರು ‘ಮಗುವಿಗೆ ಆರು ತಿಂಗಳು ಬರೀ ಎದೆ ಹಾಲನ್ನೇ ಕುಡಿಸಬೇಕು. ನಂತರ ಬೇರೆ ಆಹಾರದ ಜತೆ ಎದೆ ಹಾಲನ್ನೂ ಕುಡಿಸಬೇಕು. ತಾಯಿಯ ಹಾಲು, ಮಗುವಿಗೆ ಎಲ್ಲ ಪೌಷ್ಟಿಕಾಂಶಗಳನ್ನು ಒಳಗೊಂಡ ಸಂಪೂರ್ಣ ಆಹಾರ. ಇದರಿಂದ ವಂಚಿತವಾದ ಮಗು ಅಪೌಷ್ಟಿಕತೆಯಿಂದ ಬಳಲುವುದಲ್ಲದೇ ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಬೆಳವಣಿಗೆಯಲ್ಲಿ ಹಿಂದುಳಿಯುತ್ತದೆ. ಹಾಲುಣಿಸುವ ಮಹಿಳೆಯರು ದಿನಕ್ಕೆ ಎಂಟರಿಂದ ಹತ್ತು ಬಾರಿ ಹಾಲುಣಿಸದಿದ್ದರೆ ಹಾಲು, ಸ್ತನಗಳಲ್ಲಿ ತುಂಬಿಕೊಳ್ಳುತ್ತದೆ. ಹಾಲಿನ ಒತ್ತಡ ಹೆಚ್ಚಿದಂತೆ ತೀವ್ರತರವಾದ ನೋವು ಕಾಣುತ್ತದೆ. ಹೀಗಾಗಿ ಹಾಲು ಕಟ್ಟಿಕೊಳ್ಳದಂತೆ ಆಗಾಗ್ಗೆ ಹಾಲು ಕುಡಿಸುವುದು ತಾಯಿಯ ಆರೋಗ್ಯದ ದೃಷ್ಟಿಯಿಂದಲೂ ಅಗತ್ಯ’ ಎಂದು ಅಭಿಪ್ರಾಯಪಡುತ್ತಾರೆ.

ಕೆಲ ವರ್ಷಗಳ ಹಿಂದೆ ತಮಿಳುನಾಡಿನ ಬಸ್ ನಿಲ್ದಾಣಗಳಲ್ಲಿ ಈ ಹಾಲುಣಿಸುವ ಕೊಠಡಿಗಳನ್ನು ತೆರೆಯಲಾಗಿತ್ತು. ಆದರೆ ಬೇಸರದ ಸಂಗತಿ ಎಂದರೆ ಗಾಳಿ– ಬೆಳಕು ಸರಿಯಾಗಿಲ್ಲದ, ಕೊಳಕಾಗಿದ್ದ ಇಂಥ ಕೋಣೆಗಳನ್ನು ಹೆಚ್ಚಿನ ಮಹಿಳೆಯರು ಬಳಸಲೇ ಇಲ್ಲ. ಮತ್ತೆ ಕೆಲವರು ಭದ್ರತೆ ಸರಿಯಾಗಿಲ್ಲ ಎನ್ನುವ ಕಾರಣಕ್ಕೆ ಹಿಂಜರಿದರು. ಹೀಗಾಗಿ ಹಾಲುಣಿಸುವ ಕೋಣೆಗಳ ಸ್ವಚ್ಛತೆ– ಸುರಕ್ಷತೆಯ ಬಗ್ಗೆಯೂ ಗಮನವಹಿಸುವುದು ಅಗತ್ಯ.

ಎದೆಹಾಲು ಕುಡಿಯುವುದು ಮಗುವಿನ ಹಕ್ಕು. ಅದನ್ನು ಯಾರೂ ನಿರಾಕರಿಸುವಂತಿಲ್ಲ. ತಾಯಿ– ಮಗುವನ್ನು ಬೆಸೆಯುವ ಸಹಜಕ್ರಿಯೆ ಹಾಲುಣಿಸುವಿಕೆ. ಅದನ್ನು ಗೌರವದಿಂದ ಕಾಣಬೇಕು; ಎಲ್ಲಾ ಅನುಕೂಲ ಮಾಡಿಕೊಡಬೇಕು! ತಾಯಂದಿರಿಗೆ ಯಾವುದೇ ರೀತಿಯ ಸಂಕೋಚವಿಲ್ಲದೆ ಸುರಕ್ಷಿತ– ಸ್ವಚ್ಛ ಸ್ಥಳದಲ್ಲಿ ಮಗುವಿಗೆ ಹಾಲುಣಿಸಲು ಅವಕಾಶ ನೀಡುವಲ್ಲಿ ಈ ಯೋಜನೆ ಯಶಸ್ವಿಯಾಗಲಿ!

ವಾಚಕರ ವಾಣಿ

ಫಲಿಸದ ಪೂಜಾಫಲ

ವಿವಾಹದ ವೇದಿಕೆ ಸಿದ್ಧವಾಗಿದೆ. ಪುರೋಹಿತ ಮಂತ್ರ ಹೇಳುತ್ತಾ ವರನಿಗೆ ಮಾಂಗಲ್ಯಧಾರಣೆ ಮಾಡುವಂತೆ ಸೂಚಿಸುತ್ತಾನೆ. ಸುತ್ತಮುತ್ತ ಬಂಧುಬಾಂಧವರು ನೆರೆದಿದ್ದಾರೆ. ವಧುವಿಗೆ ಮಾಂಗಲ್ಯ ಕಟ್ಟಲು ವರ ಮುಂದಾಗುತ್ತಾನೆ. ಆದರೆ ವಧು ಅದನ್ನು ನಿರಾಕರಿಸುತ್ತಾಳೆ!

ಇದಾವುದರ ಅರಿವಿಲ್ಲದ ವಾದ್ಯದವರು ಹಿನ್ನೆಲೆಯಲ್ಲಿ ‘ಫಲಿಸಿತು ಒಲವಿನ ಪೂಜಾಫಲ, ಎನಗಿಂತು ಕೂಡಿಬಂತೆ ಕಂಕಣಬಲ...’ ಹಾಡನ್ನು ನುಡಿಸುತ್ತಿದ್ದಾರೆ. ಇಂಥದ್ದೊಂದು ಘಟನೆ ಚಿತ್ರದುರ್ಗದಲ್ಲಿ ನಡೆದಿರುವುದರ ವಿಡಿಯೊ ವೈರಲ್ ಆಗಿದೆ. ನೋಡುವುದಕ್ಕೆ ತಮಾಷೆಯಾಗಿ ಕಂಡರೂ ಈ ಘಟನೆ ಎಷ್ಟು ಜನರನ್ನು ಆತಂಕಕ್ಕೆ ಈಡುಮಾಡಿದೆ? ಎಷ್ಟು ಸಂಪನ್ಮೂಲವನ್ನು ನಷ್ಟ ಮಾಡಿದೆ? ಎಷ್ಟು ಜನರಿಗೆ ಮುಜುಗರ ತಂದಿದೆ ಎಂಬುದನ್ನು ಊಹಿಸಲು ಕಷ್ಟವಾಗುತ್ತದೆ. ಯಾಕೆಂದರೆ ಒಂದು ಮದುವೆಯನ್ನು ಗೊತ್ತುಮಾಡಲು ಎಷ್ಟೊಂದು ಕಸರತ್ತು ನಡೆದಿರುತ್ತದೆ. ಹಣಕಾಸು ಕೂಡಿಸಿಕೊಂಡು ಅಂತಹ ಒಂದು ಸುಸಂದರ್ಭಕ್ಕೆ ಎಲ್ಲರೂ ಕಾಯುತ್ತಿರುತ್ತಾರೆ! ಕಡೆ ಗಳಿಗೆಯ ಈ ನಡವಳಿಕೆ ಅತ್ಯಂತ ಬೇಜವಾಬ್ದಾರಿಯದಾಗಿರುತ್ತದೆ.

ವಧು ತನ್ನ ಪೋಷಕರ ಒತ್ತಡಕ್ಕೆ ಮಣಿದು ಈ ವಿವಾಹಕ್ಕೆ ಸಿದ್ಧವಾದಳೋ, ತಿಳಿದೂ ತಿಳಿದೂ ಆ ರೀತಿ ನಡೆದುಕೊಂಡಳೋ ತಿಳಿಯದು. ಆದರೆ ಇದೇ ನಿಲುವನ್ನು ಮೊದಲೇ ತಳೆದಿದ್ದರೆ ಕುಟುಂಬಗಳು ಅವಮಾನಕ್ಕೊಳಗಾಗುತ್ತಿರಲಿಲ್ಲ ಮತ್ತು ಅಷ್ಟೊಂದು ಸಂಪನ್ಮೂಲವೂ ವ್ಯರ್ಥವಾಗುತ್ತಿರಲಿಲ್ಲ. ಇಂಥ ಘಟನೆಗಳು ಹೊಸವೇನೂ ಅಲ್ಲ. ಅಲ್ಲಲ್ಲಿ ನಡೆಯುತ್ತಲೇ ಇವೆ. ಮುಂದಾದರೂ ವಧು, ವರರು ಜವಾಬ್ದಾರಿಯುತವಾಗಿ ವರ್ತಿಸಿ ತಮ್ಮ ಪೋಷಕರು ಹಾಗೂ ಬಂಧು ಮಿತ್ರರನ್ನು ಇಂತಹ ಮುಜುಗರದಿಂದ ತಪ್ಪಿಸಬೇಕಾದ ಅಗತ್ಯವಿದೆ.

ಈ. ಬಸವರಾಜು, ಬೆಂಗಳೂರು

ಮಾರ್ಗೋಪಾಯ ಶೋಧಿಸಿ

‘ಮಂಗ, ಕಾಡುಕೋಣ, ಕಾಡೆಮ್ಮೆ, ಕಾಡುಹಂದಿಗಳ ಹಾವಳಿಯಿಂದ ರೈತರು ಬದುಕುವುದೇ ಕಷ್ಟವಾಗಿದೆ’ಎಂದು ಬಿಜೆಪಿ ಶಾಸಕ ಆರಗ ಜ್ಞಾನೇಂದ್ರ ಅವರು ಬೆಳಗಾವಿ ವಿಧಾನಸಭಾ ಅಧಿವೇಶನದಲ್ಲಿ ಹೇಳಿರುವ ಮಾತು ಅಕ್ಷರಶಃ ಸತ್ಯ. ಮಲೆನಾಡಿನ ಗ್ರಾಮೀಣ ಪ್ರದೇಶಗಳಲ್ಲಿ ರೈತರ ಜಮೀನುಗಳಿಗೆ ನುಗ್ಗಿ ಈ ಪ್ರಾಣಿಗಳು ರೈತರ ಬದುಕಿನ ಆಸರೆಯಾಗಿರುವ ಬೆಳೆಗಳನ್ನು ನಾಶಮಾಡುತ್ತಿವೆ. ರೈತರು ದಿಕ್ಕು ತೋಚದೆ ಕಂಗಾಲಾಗಿದ್ದಾರೆ.

ಪ್ರಾಣಿಗಳ ತಂಟೆಗೆ ಹೋದರೆ ಶಿಕ್ಷೆ ವಿಧಿಸಲಾಗುವುದು ಎನ್ನುವ ಸರ್ಕಾರ, ಆ ಬೆಳೆಗಳಿಂದ ಬರುವ ಆದಾಯವನ್ನೇ ನಂಬಿ ಬದುಕುವ ರೈತರ ಫಸಲಿಗೆ ರಕ್ಷಣೆ ಕೊಡುವ ಕರ್ತವ್ಯವನ್ನೂ ಸರಿಯಾಗಿ ನಿಭಾಯಿಸಬೇಕು, ಅಲ್ಲವೇ? ಪ್ರಾಣಿ ಹಾವಳಿ ನಿಯಂತ್ರಿಸಿ, ಬೆಳೆ ರಕ್ಷಣೆಗೆ ಸರ್ಕಾರ ಮಾರ್ಗೋಪಾಯ ಶೋಧಿಸುವುದು ತುರ್ತು ಅಗತ್ಯ.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಯೋಗ್ಯವಾದುದು ವಿರಳ!

‘ಪ್ರಶಸ್ತಿ ಉದ್ಯಮ’ ಕುರಿತ ಚರ್ಚೆ (ಸಂಗತ, ಡಿ. 6; ವಾ.ವಾ., ಡಿ. 7, 8) ಆಸಕ್ತಿದಾಯಕವಾಗಿದೆ. ಹಲವು ದಶಕಗಳ ನನ್ನ ಅವಲೋಕನದ ಆಧಾರದಿಂದ ನಾನು ಹೇಳುವುದು ಇಷ್ಟು: ಪ್ರಶಸ್ತಿ ಎಂಬುದು ಎಂದೋ ಉದ್ಯಮವಾಗಿದೆ. ಮಾತ್ರವಲ್ಲ, ಪರಮ ಭ್ರಷ್ಟವೂ ಆಗಿದೆ. ಯೋಗ್ಯವಾದುದು ತೀರಾ ವಿರಳ.

ಎಚ್. ಆನಂದರಾಮ ಶಾಸ್ತ್ರೀ, ಬೆಂಗಳೂರು

ಅಪಾಯ ಅರಿತರೆ ಪಕ್ಷಕ್ಕೆ ಒಳಿತು

ಮೂರು ರಾಜ್ಯಗಳಲ್ಲಿ ಗೆಲುವು ಸಾಧಿಸಿದ ನಂತರ ಎಂದಿನಂತೆ ಬಿಜೆಪಿ ಗರ್ಭಗುಡಿಯಲ್ಲಿ ಶಾಸಕಾಂಗ ಪಕ್ಷದ ನಾಯಕರ ಆಯ್ಕೆಗೆ ಸಂಬಂಧಿಸಿದ ಕಸರತ್ತು ನಡೆಯುತ್ತಿದೆ. ರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಸ್ಥಳೀಯ ನಾಯಕತ್ವವೇ ಪ್ರಧಾನ ಪಾತ್ರ ವಹಿಸುತ್ತದೆ. ಇಲ್ಲಿ ವರಿಷ್ಠರ ಪಾತ್ರ ಅಷ್ಟಾಗಿರದು. ನರೇಂದ್ರ ಮೋದಿ, ಅಮಿತ್ ಶಾ ಅವರು ರೋಡ್ ಷೋ ಮಾಡಿದ ಮಾತ್ರಕ್ಕೆ ಜಯ ಲಭಿಸಿತೆಂದು ಭಾವಿಸಿದರೆ ತಪ್ಪಾಗುತ್ತದೆ.

ಹಾಗೇನಾದರೂ ಅದು ನಿಜವೇ ಆಗಿದ್ದರೆ ಕರ್ನಾಟಕದಲ್ಲಿ 30ಕ್ಕೂ ಹೆಚ್ಚು ರೋಡ್ ಷೋ ಮಾಡಿದರೂ ಆ ಪಕ್ಷ ಮಕಾಡೆ ಮಲಗಿದ್ದು ಏಕೆ? ಕರ್ನಾಟಕದಲ್ಲಿ ಸ್ಥಳೀಯ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಇದ್ದುದು ಸೋಲಿಗೆ ಕಾರಣ ಎನ್ನುವುದು ಫಲಿತಾಂಶದ ನಂತರವಷ್ಟೇ ವರಿಷ್ಠರ ಅರಿವಿಗೆ ಬಂದಿರಬಹುದು. ಇದೀಗ ಮೂರು ರಾಜ್ಯಗಳಲ್ಲಿ ಗೆಲುವು ಸಾಧಿಸಿದ ನಂತರ ವರಿಷ್ಠರು ಮತ್ತೆ ಸ್ಥಳೀಯ ನಾಯಕತ್ವವನ್ನು ಕಡೆಗಣಿಸುವ ಕೆಲಸ ಮಾಡುತ್ತಿರುವಂತಿದೆ. ಈ ನಡೆ, ಭವಿಷ್ಯದಲ್ಲಿ ಪಕ್ಷಕ್ಕೆ ಅಪಾಯ ತರುವುದು ನಿಶ್ಚಿತ ಎನ್ನುವುದನ್ನು ನಾಯಕರು ಅರಿತರೆ ಪಕ್ಷಕ್ಕೆ ಒಳಿತು.

ಬಿ.ಎಂ ಸುವರ್ಣ, ಮೈಸೂರು

ದುಃಖ–ಸಂಭ್ರಮಕ್ಕೆ ಅರ್ಥ ಇದೆಯೇ?

ಚುನಾವಣೆಯನ್ನು ಪ್ರಜಾಸತ್ತೆಯ ಆಧಾರಸ್ತಂಭ ಎಂದು ಭಾವಿಸಲಾಗುತ್ತದೆ. ಆದರೆ ನಮ್ಮಲ್ಲಿ ಚುನಾವಣೆಯು ಎಲ್ಲ ವಿಧದ, ಎಲ್ಲ ಸ್ತರಗಳ ಅನಾಚಾರ, ದುರಾಚಾರದ ಜೂಜುಕಟ್ಟೆಗಳ ಶೃಂಗ ಚಟುವಟಿಕೆಯೇ ಆಗಿರುತ್ತದೆ! ಈ ಜಾತ್ರೆಯಲ್ಲಿ ಆಗುವಷ್ಟು ಕಪ್ಪು ಹಣದ ಕೈಬದಲಾವಣೆ ಬೇರಾವುದೇ ಜೂಜು–ಪಂದ್ಯದಲ್ಲೂ ನಡೆಯುವುದಿಲ್ಲ.

ರಾಜಕಾರಣಿಗಳು ಮಾತೆತ್ತಿದರೆ ಚುನಾವಣಾ ವೆಚ್ಚದ ಬಗ್ಗೆ ಬೀಗುವುದು ಮತ್ತು ಸಭ್ಯಾತಿಸಭ್ಯರು ನಿಂತ ನೆಲ ಕುಸಿದಂತೆ ಕಂಗಾಲಾಗುವುದೇ ಇದಕ್ಕೆ ಸ್ಪಷ್ಟ ಪುರಾವೆ! ಈ ಎಲ್ಲದರ ಬಗ್ಗೆ ಗೊತ್ತಿದ್ದೂ ಪ್ರಶ್ನಿಸಲಾರದಷ್ಟು ಜಡತ್ವ ನಮ್ಮ ವ್ಯವಸ್ಥೆಯಲ್ಲಿ ಆವರಿಸಿಕೊಂಡಿದೆ. ಒಟ್ಟಾರೆ ಸ್ಥಿತಿ ಹೀಗಿರಬೇಕಾದರೆ ಯಾವ ಪಕ್ಷ ಗೆದ್ದರೂ ಸೋತರೂ ಸಾರ್ವಜನಿಕರು ಸಂಭ್ರಮಿಸುವುದಕ್ಕಾಗಲೀ, ಶೋಕಿಸುವುದಕ್ಕಾಗಲೀ ಏನಾದರೂ ಅರ್ಥ ಇದೆಯೇ?

ಆರ್.ಕೆ.ದಿವಾಕರ, ಎಳೇನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಚಂದನವನದ ನಂದಾದೀಪ





ಭಾರತಿ ಅವರೊಂದಿಗಿನ ಆತ್ಮೀಯ ಕ್ಷಣ...



ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರಿಂದ ಪ್ರಶಸ್ತಿ ಸ್ವೀಕರಿಸಿದ ಸಂದರ್ಭ...

ಬೆಳ್ತಂಗಡಿಯಿಂದ ಬೆಂಗಳೂರುವರೆಗೆ...

ದಕ್ಷಿಣ ಕನ್ನಡದ ಬೆಳ್ತಂಗಡಿ ಲೀಲಾವತಿ ತವರು. ಮಹಾಲಿಂಗ ಭಾಗವತರ ಶ್ರೀ ಸತ್ಯ ಸಾಮ್ರಾಜ್ಯ ನಾಟಕದ ಕಂಪನಿಯನ್ನು ಅವರು ಚಿಕ್ಕ ವಯಸ್ಸಿನಲ್ಲೇ ಸೇರಿಕೊಂಡಿದ್ದರು. ಶಂಕರ್‌ಸಿಂಗ್ ನಿರ್ಮಾಣದ 'ನಾಗಕನ್ನಿಕಾ' ಚಿತ್ರದಲ್ಲಿ ಪುಟ್ಟ ಪಾತ್ರದಲ್ಲಿ 1949ರಲ್ಲಿ ನಟಿಸಿದ್ದ ಅವರು, 1958ರಲ್ಲಿ ಸುಬ್ಬಯ್ಯನಾಯ್ಡು ಅವರ 'ಭಕ್ತ ಪ್ರಹ್ಲಾದ' ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. 'ರಾಣಿ ಹೊನ್ನಮ್ಮ' ಪೂರ್ಣ-ಪ್ರಮಾಣದ ನಾಯಕಿಯಾಗಿ ಅವರು ಗಮನಸೆಳೆದ ಮೊದಲ ಚಿತ್ರ. 'ರಣಧೀರ ಕಂಠೀರವ' ಅವರಿಗೆ ಹೆಸರು ತಂದುಕೊಟ್ಟ ಚಿತ್ರ. 'ಕಣ್ತೆರೆದು ನೋಡು', 'ಗಾಳಿಗೋಪುರ', 'ಕನ್ಯಾರತ್ನ' , 'ಕುಲವಧು', 'ನಂದಾದೀಪ', 'ಮನ ಮೆಚ್ಚಿದ ಮಡದಿ', 'ಮಾಂಗಲ್ಯ ಯೋಗ', 'ಭಕ್ತ ಕುಂಬಾರ' 'ಸಂತ ತುಕಾರಾಂ', 'ತುಂಬಿದ ಕೊಡ', 'ಮದುವೆ ಮಾಡಿ ನೋಡು', 'ಗಂಗೆ ಗೌರಿ', 'ನಾ ನಿನ್ನ ಮರೆಯಲಾರೆ' ಸಿನಿಮಾಗಳಲ್ಲೂ ಅವರ ನಟನೆಯ ಕೌಶಲ ಕಣ್ಣಿಗೆ ಕಟ್ಟಿದೆ. ವಯಸ್ಸು ಮಾಗಿದ ಮೇಲೆ ಪೋಷಕ ಪಾತ್ರಗಳಲ್ಲೂ ಅವರು ಸತತವಾಗಿ ಅಭಿನಯಿಸಿದರು. 'ಗೆಜ್ಜೆಪೂಜೆ' ಚಿತ್ರದಿಂದ ಇಂತಹ ಪಾತ್ರಗಳು ಅವರಿಗೆ ಬರತೊಡಗಿದವು. 'ಡಾಕ್ಟರ್ ಕೃಷ್ಣ' ಸಿನಿಮಾದ ಪೋಷಕ ಪಾತ್ರಕ್ಕೆ ರಾಜ್ಯ ಪ್ರಶಸ್ತಿಯೂ ಸಂದಿತ್ತು. ಪುತ್ರ ವಿನೋದ್ ರಾಜ್ ಜೊತೆಗೂ ಅವರು ಕೆಲವು ಸಿನಿಮಾಗಳಲ್ಲಿ ಅಭಿನಯಿಸಿದ್ದರು. ತಾವೇ ನಿರ್ಮಿಸಿ ಮಗನೊಟ್ಟಿಗೆ ಅಭಿನಯಿಸಿದ್ದ 'ಯಾರದು?' ಅವರು ಬಣ್ಣ ಹಚ್ಚಿದ ಕೊನೆಯ ಚಿತ್ರವಾಗಿತ್ತು.

ಜೀವಮಾನದ ಸಾಧನೆಗಾಗಿ ಡಾ. ರಾಜ್‌ಕುಮಾರ್ ಪ್ರಶಸ್ತಿಗೆ ಭಾಜನರಾಗಿದ್ದರು. ತೋಟಗಾರಿಕೆಯಲ್ಲಿ ಲೀಲಾವತಿ ಅವರಿಗೆ ಅಪಾರ ಆಸಕ್ತಿ ಇತ್ತು. ಬೆಂಗಳೂರು–ಮಂಗಳೂರು ರಸ್ತೆಯ ಸೋಲದೇವನಹಳ್ಳಿಯಲ್ಲಿ, ಸುತ್ತಮುತ್ತಲ ಜನರಿಗೆ ಅನುಕೂಲವಾಗಲಿ ಎಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕಟ್ಟಿಸಿಕೊಟ್ಟಿದ್ದರು. ಅವರು ನಿರ್ಮಿಸಿಕೊಟ್ಟಿದ್ದ ಪಶು ಚಿಕಿತ್ಸಾ ಆಸ್ಪತ್ರೆ ಇತ್ತೀಚೆಗಷ್ಟೇ ಕಾರ್ಯಾರಂಭ ಮಾಡಿತ್ತು.

ಅವರು ಅನಾರೋಗ್ಯಕ್ಕೀಡಾದ ವಿಚಾರ ತಿಳಿದು ಕಳೆದ ವಾರವಷ್ಟೇ ಅವರ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಪುತ್ರ ವಿನೋದ್ ರಾಜ್ ಅವರೊಂದಿಗೆ ಮಾತನಾಡಿದ್ದೆ. ಹಲವು ದಶಕಗಳ ಕಾಲ ತಮ್ಮ ಮನೋಜ್ಞ ಅಭಿನಯದ ಮೂಲಕ ಪ್ರೇಕ್ಷಕರನ್ನು ರಂಜಿಸಿದ ಲೀಲಾವತಿ ಅವರು ಗುಣಮುಖರಾಗಿ ಇನ್ನಷ್ಟು ಕಾಲ ನಮ್ಮ ನಡುವೆ ಇರುತ್ತಾರೆಂಬ ನನ್ನ ನಂಬಿಕೆ ಹುಸಿಯಾಗಿದೆ.
ಸಿದ್ದರಾಮಯ್ಯ, ಮುಖ್ಯಮಂತ್ರಿ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮರೆಯಾದ ಕುಲವಧು

• ವಿಶಾಖ ಎನ್.

ಲೀಲಾವತಿ ಸಿನಿಮಾ ನಟಿಯಾದಾಗ ಇನ್ನೂ ಷೋಡಶಿ. ಆಗೆಲ್ಲ ನಾಯಕಿಯರು ಚಿತ್ರಕತೆ ಏನು ಎಂದೆಲ್ಲ ವಿಚಾರಿಸುವ ಹಾಗಿರಲಿಲ್ಲ. 'ಇಂಥ ನಾಯಕನಿಗೆ ನಾಯಕಿ' ಎಂದು ನಿರ್ಮಾಪಕರು ಹೇಳಿದರಾಯಿತು. ಕತೆಯ ಎಳೆ ಇದು ಎಂದು ಕೇಳಿಸಿಕೊಂಡು ಒಪ್ಪಿಕೊಳ್ಳಬೇಕು ಅಥವಾ ಬಿಡಬೇಕು. ನಿರ್ದೇಶಕ ಯಾರು, ಕ್ಯಾಮೆರಾಮನ್ ಯಾರು ಎಂದೆಲ್ಲ ಕೇಳಿದರೆ ನಿರ್ಮಾಪಕರು ಕೆಂಡಾಮಂಡಲ ಆಗುತ್ತಿದ್ದರು. ಸಂಭಾಷಣೆ ಹೇಳಲು ತಡವರಿಸಿದರೆ, 'ಏನು ಮಸಾಲೆ ದೋಸೆ ತಿಂತೀರಾ' ಎಂದೆಲ್ಲ ದೂರದಿಂದ ಯಾರು ಯಾರೋ ಹಂಗಿಸುತ್ತಿದ್ದರು. ಒಂದೂವರೆ ದಶಕದ ಹಿಂದೆ 'ಮಯೂರ' ಮಾಸಪತ್ರಿಕೆಗೆ ಸುದೀರ್ಘ ಸಂದರ್ಶನ ನೀಡಿದಾಗ ಲೀಲಾವತಿ ಖುದ್ದು ಈ ಅನುಭವಗಳನ್ನು ಹಂಚಿಕೊಂಡಿದ್ದರು.



ವಿನೋದ್ ರಾಜ್ ಜತೆ ಹಾಡಿಗೆ ಹೆಜ್ಜೆ

ಕಷ್ಟಗಳ ಮಳೆಯಲ್ಲಿ ಕಲ್ಲಾಗಿ...

ತಂದೆ-ತಾಯಿಯನ್ನು ಚಿಕ್ಕ ವಯಸ್ಸಿನಲ್ಲಿ ಕಳೆದುಕೊಂಡ ದುಃಖವನ್ನು ನುಂಗಿಯೇ ಲೀಲಾವತಿ ನಟಿಯಾಗಿ ಅಡಿಯಿಟ್ಟಿದ್ದರು. ನಾಟಕ ಕಂಪನಿಯಲ್ಲಿ ಕಲಿತ ಸಂಭಾಷಣೆಯನ್ನು ಗಟ್ಟಿಯಾಗಿ ಹೇಳುವ ವರಸೆಯನ್ನು ಕಣ್ಣಿಗೊತ್ತಿಕೊಂಡಿದ್ದರು. ಪ್ರತ್ಯೇಕವಾಗಿ ಡಬ್ಬಿಂಗ್ ಮಾಡದೇ, ಚಿತ್ರೀಕರಣದ ಸಂದರ್ಭದಲ್ಲಿಯೇ ಸಂಭಾಷಣೆ ಹೇಳಬೇಕಾದ ಕಾಲಮಾನದ ನಟಿ ಅವರು. 'ಪಾದುಕಾ ಪಟ್ಟಾಭಿಷೇಕ' ಎಂಬ ತೆಲುಗು ಸಿನಿಮಾದಲ್ಲಿ ಏಳು ಪುಟಗಳ ಒಂದೇ ಸುದೀರ್ಘ ಸಂಭಾಷಣೆ ಇತ್ತಂತೆ. ಅದನ್ನು ಉರುಹೊಡೆದು, ಒಂದಿನಿತೂ ತೊದಲದಂತೆ ಹೇಳಿ, ಸೈ ಎನಿಸಿಕೊಂಡಿದ್ದನ್ನು ಅವರು ಪದೇ ಪದೇ ನೆನಪಿಸಿಕೊಳ್ಳುತ್ತಿದ್ದರು. 'ಚಂದ್ರಹಾಸ' ಚಿತ್ರದಲ್ಲಿ ಬಿ.ಎಸ್. ರಂಗ ಒಂದೇ ಶಾಟ್‌ನಲ್ಲಿ ಒಂದಿಡೀ ಹಾಡನ್ನು ಮುಗಿಸಿದ್ದ ಪ್ರಯೋಗದ ಭಾಗವಾಗಿದ್ದ ಲೀಲಾವತಿ, ರೀಟೇಕ್ ಇಲ್ಲದೆ ಅಭಿನಯಿಸುವುದೇ ಶ್ರೇಷ್ಠ ಎಂದು ನಂಬಿದ್ದರು.



ಕನ್ನಡಿಗರ ನೆಚ್ಚಿನ ತಾರಾಜೋಡಿ
ತೂಗುದೀಪ 1966



ರಾಜ್ ಪುತ್ಥಳಿ ಎದುರು... ...ಮಗನೊಂದಿಗೆ ಖುಷಿಯ ಕ್ಷಣ



ಮೇಕಪ್ ಹುಚ್ಚು

ಲೀಲಾವತಿ ಅವರಿಗೆ ಮೊದಮೊದಲು ತಾವೇ ಮೇಕಪ್ ಮಾಡಿಕೊಳ್ಳುವ ಹುಚ್ಚು ಇತ್ತು. ಜೋಸಪಿನ್ ಎಂಬೊಬ್ಬರು ಹೇರ್-ಸ್ಟೈಲಿಸ್ಟ್ ಆ ಕಾಲದಲ್ಲೇ ಸಿನಿಮಾ ಸೆಟ್‌ನಲ್ಲಿ ಇರುತ್ತಿದ್ದರು. ಸುಬ್ಬಣ್ಣ ಹಾಗೂ ದೊರೆಸ್ವಾಮಿ ಇಬ್ಬರೂ ಲೀಲಾವತಿ ಅವರ ಮೇಕಪ್‌ಮನ್‌ಗಳು. ಆದರೆ, ಅವರನ್ನು ದೂರದಲ್ಲಿ ಎಲ್ಲೋ ಕೂರಿಸಿ, ಖುದ್ದು ಲೀಲಾವತಿ ಅವರೇ ಮೇಕಪ್ ಮಾಡಿಕೊಳ್ಳುತ್ತಿದ್ದರು. ಬೆಂಕಿಕಡ್ಡಿಯ ತುದಿಯನ್ನು ಬ್ರಶ್‌ನಂತೆ ಮಾಡಿಕೊಂಡು ಅದನ್ನು ಮೇಕಪ್ ಪರಿಕರವಾಗಿ ಬಳಸಿದ್ದರು. ನಿರ್ಮಾಪಕರು ಮೇಕಪ್‌ಮನ್‌ಗಳಿಗೆ ಎಂದು ಕೊಡುತ್ತಿದ್ದ ಸಂಭಾವನೆಯನ್ನು ಸಲ್ಲಬೇಕಾದವರಿಗೆ ಕೊಟ್ಟುಬಿಡುತ್ತಿದ್ದರು.

ಲೀಲಾವತಿ ಅವರದ್ದು ಜಿಡ್ಡಿನ ಚರ್ಮ. ಹಬೆ ತೆಗೆದುಕೊಂಡರೆ ಮುಖದ ಜಿಡ್ಡು ಹೋಗುತ್ತದೆ ಎಂದು ಯಾರೋ ಒಬ್ಬರು ಸಲಹೆ ಕೊಟ್ಟಿದ್ದರು. ಕೊತಕೊತ ಕುದಿಯುವ ನೀರಿನ ಪಾತ್ರೆಗೆ ಮುಖವನ್ನು ತುಂಬಾ ಹತ್ತಿರವಿಟ್ಟ ನಟಿಗೆ ಕ್ಷಣಮಾತ್ರದಲ್ಲಿ ಉರಿ ಕಾಡತೊಡಗಿತು. ಮುಖವೆಲ್ಲ ಹಬೆಯ ಶಾಖಕ್ಕೆ ಊದಿಕೊಂಡಂತಾಗಿತ್ತು. ಚಿಕ್ಕಪ್ರಾಯದಲ್ಲಿ ಸೌಂದರ್ಯದ ವಿಷಯದಲ್ಲಿ ಯಾರು ಯಾರೋ ಕೊಡುತ್ತಿದ್ದ ಸಲಹೆಗಳನ್ನೆಲ್ಲ ಹೀಗೆ ಜಾರಿಗೆ ತರಲು ಹೋಗಿ ಪಟ್ಟ ಪಡಿಪಾಟಲನ್ನು ಅವರು ಚಿತ್ರವತ್ತಾಗಿ ಹೇಳಿಕೊಳ್ಳುತ್ತಿದ್ದರು.

'ಕಿತ್ತೂರು ಚನ್ನಮ್ಮ' ಸಿನಿಮಾ ಚಿತ್ರೀಕರಣ ಮುಗಿದ ಮೇಲೆ ಒಂದು ಕ್ಲೋಸಪ್ ದೃಶ್ಯದಲ್ಲಿ ತಮ್ಮ ಮುಖವನ್ನು ಲೀಲಾವತಿ ತಾವೇ ತೆರೆಮೇಲೆ ನೋಡಿದ್ದರು. ತಮ್ಮದು ದಪ್ಪ ಮುಖ ಎನಿಸಿತು. ಕನ್ನಡಿಯಲ್ಲಿ ತಮ್ಮನ್ನು ತಾವೇ ನೋಡಿಕೊಂಡು, ತಮ್ಮ ಮುಖ ಅಷ್ಟು ದಪ್ಪ ಇಲ್ಲವಲ್ಲ; ತೆರೆಮೇಲೆ ಯಾಕೆ ಹಾಗೆ ಕಂಡಿದೆ ಎಂದು ಒಂದಿಡೀ ರಾತ್ರಿ ಕಣ್ಣೀರು ಹಾಕಿದ್ದರು.



ಕಲ್ಲಾಗು ಕಷ್ಟಗಳ ಮಳೆ ಸುರಿಯೆ ಎಂಬ ಭಾವಕ್ಕೆ ರೂಪಕವೀ ಚಿತ್ರ

ಪ್ರಾಣಿಪ್ರೀತಿ, ಕೃಷಿ ಬದುಕಿನ ರೀತಿ

ಸಪೋಟಾ, ಚೀನಾ ಸೇಬು ಮೊದಲಾದ ಹಣ್ಣುಗಳನ್ನು ಲೀಲಾವತಿ ಖುಷಿಯಿಂದ ಬೆಳೆಯುತ್ತಿದ್ದರು. ನೆಲಮಂಗಲ ಬಳಿಯ ಮೈಲನಹಳ್ಳಿ ಹತ್ತಿರ ಮೊದಲು ಅವರ ಫಾರ್ಮ್‌ಹೌಸ್ ಇತ್ತು. ಸೋಲದೇವನಹಳ್ಳಿಯ ಜಾಗದಲ್ಲೂ ಕೃಷಿ ಚಟುವಟಿಕೆ ನಡೆಸುತ್ತಿದ್ದರು. ಫಸಲು ಚೆನ್ನಾಗಿ ಬಂದರೆ ಲೀಲಾವತಿ-ವಿನೋದ್ ರಾಜ್ ಇಬ್ಬರಿಗೂ ಬಲು ಖುಷಿ. ಕೈಕೊಟ್ಟರೆ ಕಣ್ಣಂಚಲ್ಲಿ ನೀರು. ಚಿಕ್ಕಂದಿನಲ್ಲೇ ಬೀದಿನಾಯಿಗಳನ್ನು ಸಲಹುವ ಮಾತೃಹೃದಯ ಲೀಲಾವತಿ ಅವರದ್ದಾಗಿತ್ತು. ಅದೇ ಮುಂದುವರಿದು, ಅವರು ಒಂದೇ ಸಮಯದಲ್ಲಿ ಹತ್ತು ನಾಯಿಗಳನ್ನು ಸಾಕಿದ್ದರು. ಮನೆಯ ಗೋಡೆಗಳ ಸಂದಿನಲ್ಲಿ ಇರುವೆಗಳು ಸರತಿಯಲ್ಲಿ ಸಾಗುತ್ತಿದ್ದರೆ, ಅವಕ್ಕೂ ಸಕ್ಕರೆಯ ಹರಳುಗಳ ಮೇವು ಕೊಡುವಷ್ಟು ಔದಾರ್ಯ ಅವರದ್ದಾಗಿತ್ತು. ಸ್ವರದ ತಲೆಮೇಲೆ ಕೂತಂತೆ ಅವರು ಹೇಳುತ್ತಿದ್ದ ಸಂಭಾಷಣೆಯ ಏರಿಳಿತ ನಮ್ಮೆಲ್ಲರ ಕಿವಿಗಳಲ್ಲಿ ತುಂಬಿರುವಂತೆ ಅವರು ಸಾಕಿ-ಸಲಹಿದ ಪ್ರಾಣಿಗಳ ಹೃದಯವನ್ನೂ ತುಂಬಿರಬೇಕು.

ದಿಗ್ಗಜ ನಾಯಕರ ಜೊತೆ ತೆರೆ ಮೇಲೆ

ರಾಜ್‌ಕುಮಾರ್, ಎಂ.ಜಿ.ಆರ್, ಎನ್.ಟಿ.ಆರ್, ಶಿವಾಜಿ ಗಣೇಶನ್, ಜೆಮಿನಿ ಗಣೇಶನ್ ಇಂತಹ ಘಟಾನುಘಟಿ ನಾಯಕರ ಜೊತೆ ತೆರೆ ಹಂಚಿಕೊಂಡವರು ಲೀಲಾವತಿ. ಬಡತನ ಮೀರಿ ನಟಿಯಾಗಬೇಕೆಂದು ಮಂಗಳೂರಿನಿಂದ ಮೈಸೂರಿಗೆ ವಲಸೆ ಬಂದ ಲೀಲಾ ಕಿರಣ್, ದೊಡ್ಡ ನಟಿಯಾದದ್ದೇ ಸಿನಿಮೀಯ. ನಾಯಕಿಯಾಗುವ ವಯಸ್ಸು ಮೀರಿದ ಮೇಲೆ ಅವರು ಪೋಷಕ ಪಾತ್ರಗಳಿಗೆ ಜೀವತುಂಬಲೂ ಹಿಂದೇಟು ಹಾಕಲಿಲ್ಲ. ಅಲ್ಲಿಯೂ ಅವರದ್ದು ಭರ್ಜರಿ ಇನಿಂಗ್ಸ್. ವಿಷ್ಣುವರ್ಧನ್, ರವಿಚಂದ್ರನ್, ಶಂಕರ್‌ನಾಗ್, ಟೈಗರ್ ಪ್ರಭಾಕರ್, ಕಮಲ ಹಾಸನ್, ರಜನಿಕಾಂತ್, ಚಿರಂಜೀವಿ ಹೀಗೆ ದೊಡ್ಡ ನಾಯಕರ ಜೊತೆ ಅಭಿನಯಿಸಿದರು. ನಾಯಕಿಯಾಗಿ ಅವರು ರಾಜ್‌ಕುಮಾರ್ ಜೋಡಿಯಾಗಿ ಮಾಡಿರುವ ಮೋಡಿಗೆ ಅಸಂಖ್ಯ ಉದಾಹರಣೆಗಳಿವೆ. 'ಭಕ್ತ ಕುಂಬಾರ' ಸಿನಿಮಾದಲ್ಲಿ ಮಣ್ಣು ತುಳಿಯುವಾಗ ಅಂಬೆಗಾಲಿಟ್ಟು ಕಾಲಡಿಗೆ ಬರುವ ಮಗುವನ್ನೂ ಕೆಲಸದಲ್ಲಿ ಮೈಮರೆತು ತುಳಿಯುವ ಸನ್ನಿವೇಶವಿದೆ. ಮಗುವನ್ನು ಕಳೆದುಕೊಂಡಾಗ ದುಃಖ ಒತ್ತರಿಸಿ ಬರಬೇಕು. ಆ ದೃಶ್ಯದಲ್ಲಿ ನಟಿಸಲು ಪರದಾಡುತ್ತಿದ್ದಾಗ, 'ನಿನ್ನದೇ ಮಗುವನ್ನು ಕಳೆದುಕೊಂಡೆ ಎಂದು ಭಾವಿಸಿ ಅಭಿನಯಿಸು. ಚೆನ್ನಾಗಿ ಆಗುತ್ತದೆ' ಎಂದು ರಾಜ್‌ಕುಮಾರ್ ಸಲಹೆ ನೀಡಿದ್ದನ್ನು ಅವರು ಸ್ಮರಿಸಿಕೊಂಡಿದ್ದರು.

ತಮ್ಮ ಮಗ ಚಿತ್ರನಟ ಆಗುವುದು ಅವರಿಗೆ ಇಷ್ಟವಿರಲಿಲ್ಲ. ಅದಕ್ಕೆಂದೇ ದೂರದ ಕಾಲೇಜಿಗೆ ಸೇರಿಸಿದ್ದರು. ಅಲ್ಲಿ ಡೊನೇಷನ್ ಕೇಳಿದಾಗ, ಕೊಡಲು ಹಣವಿಲ್ಲ ಎಂದು ಹಣ್ಣು ಕೊಟ್ಟು ಬಂದಿದ್ದರು. ಲೀಲಾವತಿ ಅವರಿಗೆ ಕೃಷಿ ಎಂದರೆ ಪ್ರೀತಿ. ಪ್ರಾಣಿಗಳೆಂದರೆ ಇಷ್ಟ. ಕೊನೆಗೆ ತಮ್ಮ ಮಗ ವಿನೋದ್ ರಾಜ್ ನಟನೇ ಆಗಲು ಬಯಸಿದಾಗ, ದ್ವಾರಕೀಶ್ 'ಡಾನ್ಸ್ ರಾಜಾ ಡಾನ್ಸ್' ಚಿತ್ರದ ಮೂಲಕ ಕನಸು ಈಡೇರಿಸಿದ್ದರ ಕುರಿತು ಅವರಿಗೆ ಅಭಿಮಾನ, ಹೆಮ್ಮೆ ಇತ್ತು.

ಕಾಡುವ ಆ ಸಾವಿನ ಅಭಿನಯ

ಒಂದೊಮ್ಮೆ ವೀರಾಸ್ವಾಮಿ ನಿರ್ಮಾಣದ ಚಿತ್ರವೊಂದರಲ್ಲಿ ಲೀಲಾವತಿ ಅವರು ವಿಷ್ಣುವರ್ಧನ್ ಅವರಿಗೆ ತಾಯಿಯಾಗಿ ನಟಿಸಿದ್ದರು. ಸತ್ತಂತೆ ನಟಿಸಬೇಕಾದ ಸನ್ನಿವೇಶದ ಚಿತ್ರೀಕರಣ ನಡೆದಿತ್ತು. ವಿಷ್ಣುವರ್ಧನ್ ದುಃಖ ತುಂಬಿಕೊಂಡು ತಮ್ಮ ಮೇಲೆ ಬಿದ್ದಾಗಲೂ ಉಸಿರನ್ನು ಬಿಗಿಹಿಡಿದೇ ನಟಿಸಬೇಕಾದ ಅನಿವಾರ್ಯ ಸ್ಥಿತಿ. ಕೆಲವು ರೀಟೇಕ್‌ಗಳ ನಂತರ ದೃಶ್ಯ 'ಓಕೆ' ಆಯಿತು. ಅಷ್ಟು ಹೊತ್ತಿಗೆ ಲೀಲಾವತಿ ಹಲವು ಟೇಕ್‌ಗಳಲ್ಲಿ ಉಸಿರುಗಟ್ಟಿ ಸುಸ್ತಾಗಿದ್ದರು. ಖುದ್ದು ವೀರಾಸ್ವಾಮಿ ಆ ಅಭಿನಯವನ್ನು ಶ್ಲಾಘಿಸಿದ್ದರು. ಇತ್ತೀಚೆಗೆ ಅವರು ಸುದೀರ್ಘಾವಧಿ ಅನಾರೋಗ್ಯದಿಂದ ಬಳಲಿದ ಸಂದರ್ಭದ ರೂಪಕದಂತೆ ಆ ಸಿನಿಮಾ ದೃಶ್ಯ ಕಾಡುತ್ತದೆ.

ಈಗ ಲೀಲಾವತಿ ನಿಜ ಬದುಕಿನಲ್ಲೂ ಕೊನೆಯುಸಿರು ಚೆಲ್ಲಿ, ನೆನಪುಗಳ ಫಸಲನ್ನು ಜೋಡಿಸಿಟ್ಟು ಹೋಗಿದ್ದಾರೆ. ❖





ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ರಾಜ್‌ಕುಮಾರ್ ಅವರು ಲೀಲಾವತಿ ಅವರನ್ನು ಸನ್ಮಾನಿಸಿದ್ದರು. ಪಾರ್ವತಮ್ಮ ರಾಜ್‌ಕುಮಾರ್ ಅವರೂ ಆ ಸಂದರ್ಭಕ್ಕೆ ಸಾಕ್ಷಿಯಾಗಿದ್ದರು.

ಭಗವಂತ ನನ್ನನ್ನು ಒಂಟಿ ಮಾಡಿದ. ಅಮ್ಮನ ಕೊನೆಯ ಕ್ಷಣದಲ್ಲಿ ನನ್ನ ಜೊತೆಗಿದ್ದವರೇ ನನ್ನ ಬಂಧುಗಳು, ಅಣ್ಣ-ತಮ್ಮಂದಿರು.
ವಿನೋದ್ ರಾಜ್, ಲೀಲಾವತಿ ಪುತ್ರ

ಸುಮಾರು 60–70 ಸಿನಿಮಾಗಳಲ್ಲಿ ಅವರ ಜೊತೆ ನಟಿಸಿದ್ದೇನೆ. ವೈಯಕ್ತಿಕ ಜೀವನದಲ್ಲಿ ನಗುನಗುತ್ತಾ ಮಾತನಾಡುತ್ತಿದ್ದರು. 'ಗೋಲ್‌ಮಾಲ್ ರಾಧಾಕೃಷ್ಣ'ದಲ್ಲಿ ಲೀಲಾವತಿ ಅವರು ನನ್ನ ಅಜ್ಜಿ ಪಾತ್ರ ಮಾಡಿದ್ದರು. ಆ ಪಾತ್ರವನ್ನು ಅವರು ಲೀಲಾಜಾಲವಾಗಿ ನಿಭಾಯಿಸಿ, ನಮ್ಮನ್ನೆಲ್ಲ ನಗಿಸಿದ್ದರು. ಕನ್ನಡ ಚಿತ್ರರಂಗಕ್ಕೆ ಅವರು ನೀಡಿದ ಕೊಡುಗೆ ಅಪಾರ.
ಅನಂತನಾಗ್, ನಟ

ಮನಸ್ಸಿಗೆ ಬೇಜಾರಾಗಿದೆ. ಕಳೆದ ಬಾರಿ ಭೇಟಿಯಾದಾಗ ಮಾತನಾಡಿಸಲು ಪ್ರಯತ್ನಪಟ್ಟರು. ಲೀಲಾವತಿಯವರ ನಿಧನ ಕನ್ನಡ ಚಿತ್ರರಂಗಕ್ಕೆ ದೊಡ್ಡ ನಷ್ಟ. ವಿನೋದ್‌ಗೆ ಧೈರ್ಯ ತುಂಬಿದ್ದೇನೆ. ಅವರು ತಾಯಿಯನ್ನು ತುಂಬಾ ಹಚ್ಚಿಕೊಂಡಿದ್ದರು. ಹೀಗಾಗಿ ಅವರಿಗೆ ಹೆಚ್ಚಿನ ನೋವು ಆಗಿದೆ.
ಶಿವರಾಜ್‌ಕುಮಾರ್, ನಟ


ನಾನು ಚಿತ್ರರಂಗಕ್ಕೆ ಬಂದ ದಿನದಿಂದಲೂ ನನ್ನನ್ನು ನೋಡಿದವರು ಲೀಲಾವತಿಯವರು. ಅದು ನನ್ನ ಅದೃಷ್ಟವೆಂದೇ ಹೇಳುತ್ತೇನೆ. ನಾನು ಅವರನ್ನು ಲೀಲಮ್ಮ ಎಂದೇ ಕರೆಯುತ್ತಿದ್ದೆ. ತೆರೆ ಮೇಲೆ ರಾಜ್‌ಕುಮಾರ್–ಲೀಲಾವತಿ ಜೋಡಿ ಅತ್ಯಂತ ಜನಪ್ರಿಯವಾಗಿತ್ತು. ಲೀಲಮ್ಮನವರ ಅಭಿನಯ ಶಕ್ತಿ ಎಂಥದ್ದು ಎಂಬುದನ್ನು ತಿಳಿಯಬೇಕೆಂದರೆ 'ಭಕ್ತ ಕುಂಬಾರ' ಚಿತ್ರವೊಂದೇ ಸಾಕು.
ದ್ವಾರಕೀಶ್, ನಟ–ನಿರ್ಮಾಪಕ

ಸಹಜ ಸುಂದರಿ, ಸಹಜ ಕಲಾವಿದೆ. ಅಂಥವರು ಮತ್ತೆ ನಮ್ಮಲ್ಲಿ ಹುಟ್ಟಲ್ಲ. ಬಹಳ ನೋವಿನ ಜೀವನ ಕಂಡವರು. ಯಾರ ಹಂಗಿಗೂ ಒಳಗಾಗದೆ ಹೆಣ್ಣಾಗಿ ಬದುಕಿ ತೋರಿಸಿದವರು. ನಮಗೆಲ್ಲ ಮಾದರಿ.
ಗಿರಿಜಾ ಲೋಕೇಶ್, ನಟಿ

ಪದಬಂಧ 5524 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಒಂದೇ ಕಾಲದಲ್ಲಿದ್ದವನು (5)
4.ಅಕಾರ ಮೊದಲಾದ ವರ್ಣ (3)
5.ದ್ರವ ಒಸರುವ ಜಿಹ್ವೆ (3)
8.ಅಂಕಣದಲ್ಲಿರುವ ಸಂಖ್ಯೆ (2)
9.ಭತ್ತ ರಾಗಿ ಮುಂತಾದವುಗಳ ಸಣ್ಣ ಸಸಿ (2)
10.ದರ್ಜಿ ಇಲ್ಲಿದ್ದಾನೆ (3)
11.ತಿರುಗಿದಾಗ ಕಾಣಿಸಿದ ಕುಲ (2)
12.ಕಡಿವಾಣಕ್ಕೊಂದು ಪರ್ಯಾಯ ಪದ (2)
13.ದುಡ್ಡಿಲ್ಲದವನು ತಿರುಗಿ ನಿಂತಿದ್ದಾನಲ್ಲಾ (3)
15.ಸೀತೆಯ ತಂದೆ (3)
16.ಕೆಂಪು ಶ್ರೀಗಂಧವಿದು (5)

ಮೇಲಿಂದ ಕೆಳಕ್ಕೆ
1.ಈ ಪ್ರಕಾರವಾಗಿ ಕಟ್ಟಿರುವ ಗೋಡೆ (3)
2.ಸರಕ್ಕನೆ ಹೋಗಿ ತಂದು ಧರಿಸಿದ ಮಾಲೆ (2)
3.ಪಾಪಿಗಳ ಲೋಕ (3)
4.ಒಂದನ್ನೊಂದು ಅಗಲದೇ ಇರುವಿಕೆ (5)
6.ಒಳ್ಳೆತನದ ಸೋಗಿನಲ್ಲಿ ಮೋಸ ಮಾಡುವವನು (5)
7.ಲಜ್ಜೆ ಹೀಗೆ ಬಂದಿದೆ (3)
8.ಪದಾರ್ಥಗಳನ್ನು ಮಾರುವ ಸ್ಥಳ (3)
12.ಬರವಿದ್ದಾಗ ದಿಟ್ಟಿಸಿ ನೋಡಿದ ಆಕಾಶ (3)
14.ಅಸಾಮಾನ್ಯವಾದ ವ್ಯಕ್ತಿ (3)
15.ಜವಾನನ ಹತ್ತಿರ ನೆರೆದ ಮಂದಿ (2)



5523ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಕ್ಷ 3.ಗಟಾರ
5.ಕಮರಿ 7.ಅನುಮತಿ
9.ನೆಮ್ಮದಿ 10.ಕಟಕ
11.ಪುರೋಗಾಮಿ
13.ಚರಕ 15.ನಗರ
16.ಣಿಮಾ

ಮೇಲಿಂದ ಕೆಳಕ್ಕೆ:
2.ಕ್ಷಣಿಕ 3.ಗಡಾರಿ
4.ರಸುಅ 6.ಮಸೀದಿ
8.ತಿಲಕ 9.ನೆನಪು
10.ಕಮ್ಮಾರ 12.ಮಿಥುನ
13.ಚತುರ 14.ಕಲ್ಯಾಣಿ

ಸುಡೊಕು 5910

		6		7		3		8
		9	2		4			
7		1		5		4		9
	9		5				7	
1				4				3
	6				8		5	
9		5			6			1
				3			8	
6		8	4			9	3	5

5909 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶನಿವಾರ ಡಿಸೆಂಬರ್ 9, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಏಕಾದಶಿ ಗಂ. 06-32 ನಕ್ಷತ್ರ: ಚಿತ್ತ ಗಂ. 10-43 ಯೋಗ: ಶೋಭನಾ ಗಂ 23-37 ಕರಣ: ಬಾಲವ ಗಂ. 06-32, ವೃಶ್ಚಿಕ ಮಾಸದ 23 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 2.
ರಾಹುಕಾಲ: ಬೆಳಗ್ಗೆ 09-00 – 10-30
ಸೂರ್ಯೋದಯ: 06-46 ಸೂರ್ಯಾಸ್ತ: 06-00
ಮುಸ್ಲಿಂ ದಿನಾಂಕ: 24 ಜುಮಾದುಲ್ಲಾವಲ್
ದಿನ ವಿಶೇಷ: ಉತ್ಪನ್ನ ಏಕಾದಶಿ, **ಅದೃಷ್ಟ ಸಂಖ್ಯೆ:** 9, 12

ಮೇಷ: ಶಸ್ತ್ರ ವೈದ್ಯ ವೃತ್ತಿಯವರು ಸವಾಲು ಎನಿಸುವ ಪರಿಸ್ಥಿತಿ ಎದುರಿಸಬೇಕಾಗುವುದು. ಬಹುಜನರ ಒಡನಾಟದಿಂದ ಬಲ, ವಿಶ್ವಾಸ, ಪ್ರೀತಿಯನ್ನು ಪಡೆಯುವಂತಾಗಲಿದೆ. ಹಗಲು ರಾತ್ರಿಯ ವ್ಯತ್ಯಾಸವಿಲ್ಲದೇ ಶ್ರಮ ಪಡಬೇಕಾಗಲಿದೆ.

ವೃಷಭ: ಸಹೋದ್ಯೋಗಿಗಳೊಂದಿಗೆ ಸಂಯಮದಿಂದ ವರ್ತಿಸಿ, ಅದರ ಫಲವಾಗಿ ಕೆಲಸ ಸಾಧಿಸಿಕೊಳ್ಳುವಿರಿ. ನಿಮ್ಮ ಹೊಸ ಹೊಸ ಆಸೆಗಳನ್ನು ಈಡೇರಿಸಿಕೊಳ್ಳುವಂತಹ ಉತ್ತಮ ಅವಕಾಶಗಳು ಈ ದಿನ ಎದುರಾಗುವುವು.

ಮಿಥುನ: ನೀವು ಕೈಗೊಂಡ ಪೂರ್ವನಿಯೋಜಿತ ಕಾರ್ಯಗಳೆಲ್ಲ ಉತ್ತಮವಾಗಿ ನಡೆಯುವವು. ಸೃಜನಶೀಲ ಯೋಜನೆಗಳಲ್ಲಿ ನಿಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಳ್ಳುವಿರಿ. ಷೇರು ಮಾರಾಟದಿಂದ ಅಧಿಕ ಲಾಭವಿದೆ.

ಕರ್ಕಾಟಕ: ಆರ್ಥಿಕ ಬಲ ಮತ್ತು ನೆಮ್ಮದಿಯನ್ನು ಸದ್ಯದ ಪರಿಸ್ಥಿತಿಯಲ್ಲಿ ಕಡಿಮೆ ಹೊಂದಿರುವ ನಿಮಗೆ ಮಹಾಗಣಪತಿಯ ಆರಾಧನೆ ಶುಭವನ್ನುಂಟುಮಾಡುವುದು. ನಾಯಕತ್ವದ ಹೊಣೆ ನಿಭಾಯಿಸುವುದು ಅನಿವಾರ್ಯವಾಗುವುದು.

ಸಿಂಹ: ಸಮರ್ಥವಾಗಿ ಯೋಜನೆಗಳನ್ನು ಪೂರ್ಣಗೊಳಿಸುವಿರಿ, ಆದರೆ ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ತೆಗೆದುಕೊಳ್ಳುವುದು ಉತ್ತಮ. ಗೆಳೆಯರ ಜೊತೆಗೂಡಿ ದೂರದ ಊರಿಗೆ ಪ್ರವಾಸಕ್ಕೆ ತೆರಳುವ ಮನಸ್ಸಾಗಲಿದೆ.

ಕನ್ಯಾ: ನಿಮ್ಮ ಭಾವನೆಗಳಿಗೆ ನಿಮ್ಮ ಮಕ್ಕಳು ಅಥವಾ ಸಹಚರರು ಸ್ಪಂದಿಸದೇ ಇರುವುದು ಬೇಸರಕ್ಕೆ ಮುಖ್ಯ ಕಾರಣವಾಗುತ್ತದೆ. ಸಂಯಮದಿಂದ ನಡೆದುಕೊಳ್ಳುವುದು ವ್ಯಾವಹಾರಿಕವಾಗಿ ಲಾಭವನ್ನು ತಂದುಕೊಡುವುದು.

ತುಲಾ: ದೈನಂದಿನ ಯಾಂತ್ರಿಕ ಬದುಕಿನಿಂದ ಸ್ವಲ್ಪ ವಿರಾಮ ಪಡೆದು ಕುಟುಂಬದೊಂದಿಗೆ ಕಾಲ ಕಳೆಯುವ ಆಲೋಚನೆ ಕೈಗೂಡಲಿದೆ. ಫೋಟೋ ಸ್ಟುಡಿಯೋದವರಿಗೆ ಹೆಚ್ಚಿನ ಅವಕಾಶಗಳೊಂದಿಗೆ ಜನಪ್ರಿಯತೆಯೂ ಹೆಚ್ಚುವುದು.

ವೃಶ್ಚಿಕ: ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಹಂತ ಹಂತವಾಗಿ ಅಭಿವೃದ್ಧಿ ಕಾಣುವಿರಿ. ನಿಮ್ಮ ಅಗಾಧ ಅನುಭವ, ಪ್ರಯತ್ನ ಬಲ ಹಾಗೂ ಆತ್ಮವಿಶ್ವಾಸದಿಂದ ರಂಗಕಲೆಯಲ್ಲಿ ಹೆಸರು ಮಾಡುವಂತಾಗಲಿದೆ.


ಧನು: ಸರಿ ತಪ್ಪುಗಳ ವಿಚಾರದಲ್ಲಿ ಈ ದಿನ ನೀವು ಯಾರಲ್ಲಿಯೂ ವಾದ ಮಾಡುವುದು ಸರಿಯಲ್ಲ. ವಿಶ್ವಾಸದಲ್ಲಿ ಯಾರಿಗೂ ಹಣ ನೀಡಬೇಡಿ. ದಿನಸಿ ವ್ಯವಹಾರಗಳಲ್ಲಿ ಹೆಚ್ಚಿನ ಹೂಡಿಕೆಯಿಂದ ಲಾಭವಾಗುವುದು.

ಮಕರ: ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ. ಆಂಜನೇಯ ಸಹಿತ ಶ್ರೀರಾಮಚಂದ್ರನನ್ನು ಮನಃಪೂರ್ವಕವಾಗಿ ಪೂಜಿಸಿಕೊಂಡು ಕೆಲಸ ಮುಂದುವರಿಸಿ, ಫಲಕಾರಿಯಾಗುವುದು.

ಕುಂಭ: ಉದ್ಯೋಗದಲ್ಲಿ ಅಧಿಕ ಲಾಭ ಮಾಡುವ ಉದ್ದೇಶದಿಂದ ಕೈ ಸುಡುವ ಕೆಲಸ ಮಾಡದಿರಿ. ನೀವು ಅನಾವಶ್ಯಕವಾಗಿ ಮನಸ್ಸಿನಲ್ಲಿ ಇಟ್ಟುಕೊಂಡಿರುವ ಅನುಮಾನವನ್ನು, ಕೆಟ್ಟ ಆಲೋಚನೆಯನ್ನು ತೆಗೆದುಹಾಕಿ.

ಮೀನ: ರಹಸ್ಯವಾಗಿ ಸಿಗುವ ಬೆಂಬಲದಿಂದ ನಿಮ್ಮ ಕನಸುಗಳು ನನಸಾಗಲಿದೆ. ಯಾವುದೇ ಗೊಂದಲಗಳಿಗೆ ಒಳಗಾಗದೆ ನಿಮ್ಮ ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗಲಿದೆ. ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳಿರಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,901
ಇಂದಿನ ಅಂತ್ಯ	20,969
▲	68
ದಿನದ ಗರಿಷ್ಠ	21,006

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹560
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹562

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1600 (1600)
ಸೋಯಾ (ರಿಫೈಂಡ್)	₹915 (915)
ಸೂರ್ಯಕಾಂತಿ (ರಿಫೈಂಡ್)	₹925 (920)
ಪಾಮೋಲಿನ್	₹832 (825)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹238-480
ದ್ವಿತಳಿ (ಬಿ.ವಿ)	₹222-608

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹127

ವಿನಿಮಯ ದರ

$ ಡಾಲರ್	83.40
£ ಪೌಂಡ್	104.74
€ ಯುರೊ	89.83
¥ ಯೆನ್ (100ಕ್ಕೆ)	58

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-7835
ಬಂಟ್ವಾಳ	₹9000-10500
ತಿಪಟೂರು	₹7000-7758
ತುರುವೇಕೆರೆ	₹7800-7800

ಗೋಧಿ ದಾಸ್ತಾನು ಮಿತಿ ಇನ್ನಷ್ಟು ತಗ್ಗಿಸಿದ ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ತಕ್ಷಣದಿಂದ ಜಾರಿಗೆ ಬರುವಂತೆ ಗೋಧಿ ದಾಸ್ತಾನಿನ ಮಿತಿಯನ್ನು ಇನ್ನಷ್ಟು ಇಳಿಕೆ ಮಾಡಿದೆ. ಅಕ್ರಮ ದಾಸ್ತಾನು ತಡೆಯಲು ಮತ್ತು ಬೆಲೆ ಏರಿಕೆ ನಿಯಂತ್ರಿಸಲು ಈ ಕ್ರಮ ಕೈಗೊಂಡಿರುವುದಾಗಿ ಹೇಳಿದೆ.

ಸಗಟು ವ್ಯಾಪಾರಿಗಳ ನಿಗದಿಪಡಿಸಿದ್ದ ದಾಸ್ತಾನು ಮಿತಿಯನ್ನು 2 ಸಾವಿರ ಟನ್‌ನಿಂದ 1 ಸಾವಿರ ಟನ್‌ಗೆ ಇಳಿಸಲಾಗಿದೆ ಎಂದು ಕೇಂದ್ರ ಆಹಾರ ಕಾರ್ಯದರ್ಶಿ ಸಂಜೀವ್ ಚೋಪ್ರಾ ತಿಳಿಸಿದ್ದಾರೆ.

ಚಿಲ್ಲರೆ ಮಾರಾಟಗಾರರ 10 ಟನ್ ಬದಲಿಗೆ 5 ಟನ್, ದೊಡ್ಡ ಪ್ರಮಾಣದಲ್ಲಿ ವಹಿವಾಟು ನಡೆಸುವ ದೊಡ್ಡ ಮಳಿಗೆಗಳಿಗೆ ಪ್ರತಿ ಮಳಿಗೆಗೆ 5 ಟನ್ ದಾಸ್ತಾನು ಮಿತಿ ನೀಡಲಾಗಿದೆ. ದಾಸ್ತಾನು ಮಿತಿಯನ್ನು ತಗ್ಗಿಸಲು ವ್ಯಾಪಾರಿಗಳಿಗೆ 30 ದಿನ ಕಾಲಾವಕಾಶ ನೀಡಲಾಗಿದೆ ಎಂದು ಹೇಳಿದ್ದಾರೆ.

ಈರುಳ್ಳಿ ರಫ್ತಿಗೆ ನಿಷೇಧ

ನವದೆಹಲಿ (ಪಿಟಿಐ): ದೇಶದಲ್ಲಿ ಈರುಳ್ಳಿ ಬೆಲೆ ನಿಯಂತ್ರಿಸಲು ಮತ್ತು ಲಭ್ಯತೆ ಸುಧಾರಿಸಲು 2024ರ ಮಾರ್ಚ್ 31ರವರೆಗೂ ರಫ್ತು ಮಾಡುವುದಕ್ಕೆ ನಿಷೇಧ ಹೇರಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ವಿದೇಶಿ ವ್ಯಾಪಾರಗಳ ಮಹಾ ನಿರ್ದೇಶನಾಲಯವು ಈ ಕುರಿತು ಪ್ರಕಟಣೆ ಹೊರಡಿಸಿದೆ. ಈ ಆದೇಶ ಹೊರಬೀಳುವುದಕ್ಕೂ ಮುನ್ನ ಆಗಿರುವ ರಫ್ತು ಒಪ್ಪಂದಗಳಿಗೆ ಯಾವುದೇ ಸಮಸ್ಯೆ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ದೆಹಲಿಯಲ್ಲಿ ಚಿಲ್ಲರೆ ಮಾರಾಟದ ದರ ಕೆ.ಜಿಗೆ ₹70–80ರವರೆಗೆ ಇದೆ.

ದರ ನಿಯಂತ್ರಿಸಲು ಕೇಂದ್ರ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಈರುಳ್ಳಿ ಬೆಲೆ ಹೆಚ್ಚಿರುವ ರಾಜ್ಯಗಳಲ್ಲಿ ತನ್ನ ಬಳಿ ಇರುವ ಹೆಚ್ಚುವರಿ ದಾಸ್ತಾನನ್ನು ಕೆ.ಜಿಗೆ ₹25ರಂತೆ ಮಾರಾಟ ಮಾಡುತ್ತಿದೆ. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್ 1ರಿಂದ ಆಗಸ್ಟ್ 4ರವರೆಗಿನ ಅವಧಿಯಲ್ಲಿ 9.75 ಲಕ್ಷ ಟನ್‌ನಷ್ಟು ಈರುಳ್ಳಿ ರಫ್ತು ಮಾಡಲಾಗಿದೆ.

ಮಹಾರಾಷ್ಟ್ರದಲ್ಲಿ ರೈತರ ಪ್ರತಿಭಟನೆ

ಮುಂಬೈ (ಪಿಟಿಐ): ಕೇಂದ್ರ ಸರ್ಕಾರವು ಈರುಳ್ಳಿ ರಫ್ತನ್ನು ನಿಷೇಧಿಸಿರುವುದನ್ನು ವಿರೋಧಿಸಿ ನಾಸಿಕ್ ಜಿಲ್ಲೆಯ ಮಹಾರಾಷ್ಟ್ರ – ಆಗ್ರಾ ಹೆದ್ದಾರಿಯ 3 ಸ್ಥಳಗಳಲ್ಲಿ ನೂರಾರು ರೈತರು ಶುಕ್ರವಾರ ರಸ್ತೆ ತಡೆ ನಡೆಸಿ, ಪ್ರತಿಭಟಿಸಿದರು.



‘ನಾಸಿಕ್ ಜಿಲ್ಲೆಯ ಲಾಸಲ್‌ಗಾಂವ್, ನಂದಗಾಂವ್, ಪಿಂಪಲ್‌ಗಾಂವ್ ಹಾಗೂ ಉಮರಾನೆಯ ಈರುಳ್ಳಿ ಮಾರುಕಟ್ಟೆಗಳಲ್ಲಿ ಕಳೆದ 4–5 ದಿನಗಳಿಂದ ಪ್ರತಿಭಟನೆ ನಡೆಯುತ್ತಿದೆ. ಇದರಿಂದಾಗಿ ಮಾರುಕಟ್ಟೆಗಳಲ್ಲಿ ಯಾವುದೇ ಚಟುವಟಿಕೆ ನಡೆಯುತ್ತಿಲ್ಲ’ ಎಂದು ಅಧಿಕಾರಿಗಳು ತಿಳಿಸಿದರು.

‘ಮಹಾರಾಷ್ಟ್ರ – ಆಗ್ರಾ ಹೆದ್ದಾರಿಯಲ್ಲಿ ಟ್ರ್ಯಾಕ್ಟರ್‌ಗಳ ಮೂಲಕ ರೈತರು ರಸ್ತೆ ತಡೆ ನಡೆಸಿದ್ದಾರೆ. ಜೈಖೇಡಾ, ಚಂದ್ವಾಡ್, ಮುಂಗ್ಸೆ ಹಾಗೂ ಮಾಲೆಗಾಂವ್‌ನಲ್ಲೂ ರಸ್ತೆ ತಡೆ ನಡೆದಿವೆ’ ಎಂದರು.

ಬ್ಯಾಂಕ್ ನೌಕರರ ವೇತನ ಶೇ 17ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ನೌಕರರಿಗೆ ವೇತನದಲ್ಲಿ ಶೇ 17ರಷ್ಟು ಹೆಚ್ಚಳ ಮಾಡಲು ಭಾರತೀಯ ಬ್ಯಾಂಕುಗಳ ಒಕ್ಕೂಟ (ಐಬಿಎ) ಒಪ್ಪಿಗೆ ನೀಡಿದೆ.

ಈ ಹೆಚ್ಚಳವು 2022ರ ನವೆಂಬರ್ 1ರಿಂದಲೇ ಅನ್ವಯವಾಗುವಂತೆ ಐದು ವರ್ಷಗಳ ಅವಧಿಗೆ ಇದು ಜಾರಿಯಲ್ಲಿ ಇರಲಿದೆ. ಈ ಸಂಬಂಧ ಗುರುವಾರ ನಡೆದ ಸಭೆಯಲ್ಲಿ ಐಬಿಎ ಮತ್ತು 9 ಸಂಘಟನೆಗಳನ್ನು ಒಳಗೊಂಡಿರುವ ಬ್ಯಾಂಕ್ ಸಂಘಟನೆಗಳ ಸಂಯುಕ್ತ ವೇದಿಕೆ (ಯುಎಫ್‌ಬಿಯು) ಒಪ್ಪಂದಕ್ಕೆ ಸಹಿ ಮಾಡಿವೆ. ವೇತನ ಹೆಚ್ಚಳದಿಂದ ಎಸ್‌ಬಿಐ ಒಳಗೊಂಡು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿಗೆ ₹12,449 ಕೋಟಿಯಷ್ಟು ಹೊರೆ ಆಗಲಿದೆ.

ಪ್ರತಿ ಶನಿವಾರವೂ ಬ್ಯಾಂಕ್‌ಗೆ ರಜಾ ದಿನವಾಗಿ ಘೋಷಿಸುವಂತೆ ಕೇಂದ್ರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಐಬಿಎ ತಿಳಿಸಿದೆ. ಇದರಿಂದ ವಾರದಲ್ಲಿ 5 ದಿನ ಕೆಲಸದ ಬೇಡಿಕೆ ಈಡೇರಲಿದೆ.

ಸ್ಟ್ಯಾನ್ಲಿ ಲೈಫ್‌ಸ್ಟೈಲ್ಸ್ ಐಪಿಒಗೆ ಸೆಬಿ ಒಪ್ಪಿಗೆ

ಬೆಂಗಳೂರು: ಬೆಂಗಳೂರಿನ ಸ್ಟ್ಯಾನ್ಲಿ ಲೈಫ್‌ಸ್ಟೈಲ್ಸ್ ಲಿಮಿಟೆಡ್ ಕಂಪನಿಯು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ಒಪ್ಪಿಗೆ ಪಡೆದುಕೊಂಡಿದೆ.

ಐಪಿಒಗಾಗಿ ಕಂಪನಿಯು ಸೆಪ್ಟೆಂಬರ್ 4ರಂದು ಸೆಬಿಗೆ ಕರಡು ದಾಖಲೆ ಪತ್ರಗಳನ್ನು ಸಲ್ಲಿಸಿತ್ತು. ಅದರಲ್ಲಿ ಇರುವಂತೆ ₹200 ಕೋಟಿ ಮೌಲ್ಯದ ಹೊಸ ಷೇರುಗಳು ಮತ್ತು ಆಫರ್ ಫರ್ ಸೇಲ್ ಮೂಲಕ (ಒಎಫ್‌ಎಸ್) 91.33 ಲಕ್ಷ ಈಕ್ವಿಟಿ ಷೇರು ಮಾರಾಟ ಮಾಡಲಿದೆ.

ಹೊಸ ಷೇರುಗಳನ್ನು ಮಾರಾಟ ಮಾಡುವುದರಿಂದ ಬರುವ ಮೊತ್ತದಲ್ಲಿ ಹಾಲಿ ಮಳಿಗೆಗಳ ನವೀಕರಣ, ಹೊಸ ಮಳಿಗೆಗಳ ಸ್ಥಾಪನೆ ಮತ್ತು ಇನ್ನಿತರ ಬಂಡವಾಳದ ಅಗತ್ಯಗಳನ್ನು ಈಡೇರಿಸಿಕೊಳ್ಳುವ ಯೋಜನೆ ಹೊಂದಿರುವುದಾಗಿ ಪ್ರಕಟಣೆಯಲ್ಲಿ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

08-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1610 (1610)
ಒಂದು ವಾರದ ಡೆಲಿವರಿ	1605 (1605)
ಸೋಯಾ ಕಚ್ಚಾ	890 (885)
ಪಾಮ್ ವಾರದ ಡೆಲಿವರಿ	830 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (850)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	62,150 (62,300)
ಬೆಳ್ಳಿ ಕೆ.ಜಿ	73,750 (73,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ


ಹಣದುಬ್ಬರದ ಮೇಲೆ ಆಹಾರ ವಸ್ತುಗಳ ದರ ಏರಿಕೆ ಪರಿಣಾಮ ಸಾಧ್ಯತೆ: ದಾಸ್

ಬಡ್ಡಿದರ ಬದಲಿಸದ ಆರ್‌ಬಿಐ

ಮುಂಬೈ (ಪಿಟಿಐ): ತಜ್ಞರು, ಮಾರುಕಟ್ಟೆಯ ನಿರೀಕ್ಷೆಯಂತೆಯೇ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸತತ ಐದನೇ ಬಾರಿಯೂ ಯಥಾಸ್ಥಿತಿ ಕಾಯ್ದುಕೊಂಡಿದೆ.

‘ಹಣದುಬ್ಬರವನ್ನು ನಿಯಂತ್ರಿಸುವುದೇ ಆದ್ಯತೆ. ಕೆಲವು ತಿಂಗಳುಗಳ ಉತ್ತಮ ಅಂಕಿ–ಅಂಶಗಳಿಂದ ತೃಪ್ತಿಪಟ್ಟುಕೊಳ್ಳಲು ಆಗುವುದಿಲ್ಲ’ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಈ ಮೂಲಕ ಬಡ್ಡಿದರ ಕಡಿತ ಮಾಡದೇ ಇರುವುದನ್ನು ಅವರು ಸಮರ್ಥಿಸಿಕೊಂಡಿದ್ದಾರೆ. ಆರ್‌ಬಿಐನ ಹಣಕಾಸು ನೀತಿ ಸಮಿತಿ (ಎಂಪಿಸಿ) ಸದಸ್ಯರು ರೆಪೊ ದರವನ್ನು ಶೇ 6.5ರಲ್ಲಿಯೇ ಉಳಿಸಿಕೊಳ್ಳಲು ಸರ್ವಾನುಮತದ ಒಪ್ಪಿಗೆ ನೀಡಿದ್ದಾರೆ.

ಸಭೆಯ ಬಳಿಕ ಸುದ್ದಿಗಾರರನ್ನು ಉದ್ದೇಶಿಸಿ ಮಾತನಾಡಿದ ಅವರು, ಹಣದುಬ್ಬರವನ್ನು ಶೇ 4ರಲ್ಲಿ ಕಾಯ್ದುಕೊಳ್ಳುವ ಮೂಲಕ ಬೆಲೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದೇ ಮೂಲ ಉದ್ದೇಶ ಎಂದು ಹೇಳಿದ್ದಾರೆ. ‘ನಮ್ಮ ನಿರ್ಧಾರಗಳು ಪ್ರಮುಖವಾಗಿ ಹಣದುಬ್ಬರ ಮತ್ತು ಆರ್ಥಿಕ ಪ್ರಗತಿಯ ಮೇಲೆ ಅವಲಂಬಿತವಾಗಿರುತ್ತವೆ.



ಶಕ್ತಿಕಾಂತ ದಾಸ್ –ಪಿಟಿಐ ಚಿತ್ರ

> **ಬಡ್ಡಿದರ ಕಡಿತ ಮಾಡಿದ್ದರೆ ದೇಶದ ರಿಯಲ್ ಎಸ್ಟೇಟ್ ಮತ್ತು ಒಟ್ಟಾರೆ ಆರ್ಥಿಕತೆಗೆ ಹೆಚ್ಚಿನ ಪ್ರಯೋಜನ ಆಗುತ್ತಿತ್ತು**
> **ಬೊಮನ್ ಇರಾನಿ,** ಕ್ರೆಡಾಯ್ ಅಧ್ಯಕ್ಷ

ಸದ್ಯದ ಮಟ್ಟಿಗೆ ಹಣದುಬ್ಬರ ನಿಯಂತ್ರಕ್ಕೆ ಆದ್ಯತೆ ನೀಡಿದ್ದು, ಶೇ 4ರ ಮಟ್ಟಕ್ಕೆ ತಲುಪಲು ಇನ್ನೂ ಸಾಕಷ್ಟು ದೂರ ಸಾಗಬೇಕಿದೆ’ ಎಂದಿದ್ದಾರೆ.

ಹಣದುಬ್ಬರ ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ 2022ರ ಮೇ ತಿಂಗಳಿನಿಂದ 2023ರ ಫೆಬ್ರುವರಿ ವರೆಗೆ ಬಡ್ಡಿದರವನ್ನು ಒಟ್ಟು ಶೇ 2.50ರಷ್ಟು ಹೆಚ್ಚಳ ಮಾಡಿದೆ.

ಹಣದುಬ್ಬರವು ಇಳಿಮುಖವಾಗಿ ಇದೆಯಾದರೂ ಅಲ್ಪಾವಧಿಯಲ್ಲಿ ಆಹಾರ ವಸ್ತುಗಳ ದರ ಏರಿಕೆಯು ಡಿಸೆಂಬರ್‌ನಲ್ಲಿ ಹಣದುಬ್ಬರ ಪ್ರಮಾಣ ಹೆಚ್ಚಾಗಲು ಕಾರಣ ಆಗುವ ಸಾಧ್ಯತೆ ಇದೆ. ಇದನ್ನು ಗಮನಿಸಬೇಕಿದೆ ಎಂದು ದಾಸ್ ತಿಳಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ದರ ಏರಿಕೆ ಕಂಡಿರುವುದು ಆತಂಕಕ್ಕೆ ಕಾರಣವಾಗಿದೆ ಎಂದು ಹೇಳಿದ್ದಾರೆ.

‘ಶೇ 7ರಷ್ಟು ಬೆಳೆಯಲಿದೆ ಜಿಡಿಪಿ’

ಭಾರತದ ಆರ್ಥಿಕ ಬೆಳವಣಿಗೆಯ ಅಂದಾಜನ್ನು ಆರ್‌ಬಿಐ ಶೇ 0.5ರಷ್ಟು ಹೆಚ್ಚಿಸಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಜಿಡಿಪಿ ಶೇ 7ರಷ್ಟು ಬೆಳವಣಿಗೆ ಕಾಣಲಿದೆ ಎಂದು ಹೇಳಿದೆ. ಈ ಹಿಂದಿನ ಸಭೆಯಲ್ಲಿ ಜಿಡಿಪಿ ಶೇ 6.5ರಷ್ಟು ಆಗುವ ಅಂದಾಜನ್ನು ಮಾಡಿತ್ತು.

ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿಯು ನಿರೀಕ್ಷೆಯನ್ನೂ ಮೀರಿ ಶೇ 7.6ರಷ್ಟು ಬೆಳವಣಿಗೆ ಕಂಡಿದೆ. ಹೀಗಾಗಿ ಆರ್‌ಬಿಐ ಈ ಪರಿಷ್ಕರಣೆ ಮಾಡಿದೆ. ಜಿಡಿಪಿ ಬೆಳವಣಿಗೆಯು ಚೇತರಿಸಿಕೊಂಡಿದ್ದು ಎಲ್ಲರನ್ನು ಬೆರಗಾಗಿಸಿದೆ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ.

4 ತಿಂಗಳ ಬಳಿಕ ಗರಿಷ್ಠ ಮಟ್ಟಕ್ಕೇರಿದ ಮೀಸಲು ಸಂಗ್ರಹ

ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ನಾಲ್ಕು ತಿಂಗಳ ಬಳಿಕ 600 ಬಿಲಿಯನ್ ಡಾಲರ್ (₹50.05 ಲಕ್ಷ ಕೋಟಿ) ಗಡಿಯನ್ನು ದಾಟಿತು. ಡಿಸೆಂಬರ್ 1ರ ಅಂತ್ಯಕ್ಕೆ ₹50.38 ಲಕ್ಷ ಕೋಟಿಗೆ ತಲುಪಿದೆ.

ಮೀಸಲು ಸಂಗ್ರಹವು ಈ ಹಿಂದೆ ಆಗಸ್ಟ್ 11ರಂದು 600 ಬಿಲಿಯನ್ ಡಾಲರ್ ಗಡಿ ದಾಟಿತ್ತು.

ಮೀಸಲು ಸಂಗ್ರಹವು 604 ಬಿಲಿಯನ್ ಡಾಲರ್ ತಲುಪಿದೆ. ಬಾಹ್ಯ ಹಣಕಾಸು ಅಗತ್ಯಗಳನ್ನು ನಿರಾತಂಕವಾಗಿ ಈಡೇರಿಸಿಕೊಳ್ಳುವ ವಿಶ್ವಾಸ ಇದೆ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಈಕ್ವಿಟಿ ಎಂ.ಎಫ್: ಹೂಡಿಕೆ ಶೇ 22ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ (ಎಂ.ಎಫ್) ಬಂಡವಾಳ ಒಳಹರಿವು ನವೆಂಬರ್‌ನಲ್ಲಿ ಶೇ 22ರಷ್ಟು ಇಳಿಕೆ ಕಂಡಿದ್ದು ₹15,536 ಕೋಟಿ ಹೂಡಿಕೆ ಆಗಿದೆ.

ಅಕ್ಟೋಬರ್ ತಿಂಗಳಿನಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ₹19,957 ಕೋಟಿ ಹೂಡಿಕೆ ಆಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ದೀಪಾವಳಿ ಹಬ್ಬ ಮತ್ತು ಬ್ಯಾಂಕ್ ರಜಾ ದಿನಗಳಿಂದಾಗಿ ನವೆಂಬರ್‌ನಲ್ಲಿ ಒಳಹರಿವು ಕಡಿಮೆ ಆಯಿತು ಎಂದು ಕೋಟಕ್ ಮ್ಯೂಚುವಲ್ ಫಂಡ್‌ನ ಮಾರುಕಟ್ಟೆ ಮತ್ತು ಡಿಜಿಟಲ್ ವಹಿವಾಟಿನ ಮುಖ್ಯಸ್ಥ ಮನಿಷ್ ಮೆಹ್ತಾ ಹೇಳಿದ್ದಾರೆ.

ಈಕ್ವಿಟಿ ಫಂಡ್‌ಗಳಲ್ಲಿ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಫಂಡ್‌ಗಳಲ್ಲಿ ಹೆಚ್ಚಿನ ಹೂಡಿಕೆ ಆಗುತ್ತಿದೆ. ಈಕ್ವಿಟಿಗಳಲ್ಲಿ ಆಗುತ್ತಿರುವ ಒಳಹರಿವಿನಲ್ಲಿ ಮಿಡ್ ಮತ್ತು ಸ್ಮಾಲ್ ಕ್ಯಾಪ್‌ಗಳ ಪಾಲೇ ಶೇ 41ರಷ್ಟು ಇದೆ.

ಎಸ್‌ಐಪಿ ದಾಖಲೆ: ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೂಲಕ ನವೆಂಬರ್‌ನಲ್ಲಿ ₹17,073 ಕೋಟಿ ಹೂಡಿಕೆ ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟ ಇದಾಗಿದೆ. ಎಸ್‌ಐಪಿ ಪ್ರಯೋಜನಗಳ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಲಾರಂಭಿಸಿದೆ. ಹೀಗಾಗಿ ಹೊಸ ಹೂಡಿಕೆದಾರರು ಇದರತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ ಎಂದು ಒಕ್ಕೂಟ ಹೇಳಿದೆ.

ಆರ್ಥಿಕ ಚಟುವಟಿಕೆಗಳು ಏರಿಕೆ ಕಾಣುತ್ತಿವೆ. ಜಿಎಸ್‌ಟಿ ಸಂಗ್ರಹ ಸ್ಥಿರವಾಗಿದೆ. ಸರ್ಕಾರದ ಸುಧಾರಣಾ ಕ್ರಮಗಳು ಮತ್ತು ನೀತಿಗಳ ಗ್ಗೆ ವಿಶ್ವಾಸ ಇರುವುದರಿಂದ ಹೂಡಿಕೆದಾರರು ವಿವಿಧ ವಲಯಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಅಕ್ಟೋಬರ್‌ನಲ್ಲಿ ಎಸ್‌ಐಪಿಯಲ್ಲಿ ₹16,928 ಕೋಟಿ ಹೂಡಿಕೆ ಆಗಿತ್ತು. ನವೆಂಬರ್‌ನಲ್ಲಿ ₹17,073 ಕೋಟಿಗೆ ಏರಿಕೆ ಕಂಡಿದೆ ಎಂದು ಫೈರ್ಸ್ ಕಂಪನಿಯ ಉಪಾಧ್ಯಕ್ಷ ಗೋಪಾಲ ಕಾವಲಿರೆಡ್ಡಿ ತಿಳಿಸಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	590
ಅಡಿಕೆ	
ಬಂಟ್ವಾಳ	
ಕೋಕ	15000-27500
ಹೊಸತು	27500-36000
ಹಳತು	42500-45500
ಹೊಸನಗರ	
ಕೆಂಪುಗೋಟು	29399-34699
ರಾಶಿ	45899-48370
ಸಿಪ್ಪೆಗೋಟು	13199-13199
ಕಾರ್ಕಳ	
ಹೊಸತು	25000-36500
ಹಳತು	30000-46000
ಕುಮಟ	
ಚಿಪ್ಪು	26509-34309
ಕೋಕ	19019-31509
ಫ್ಯಾಕ್ಟರಿ	11509-23829
ಹಳೆಚಾಲಿ	36899-39019
ಹೊಸಚಾಲಿ	32510-35010
ಪುತ್ತೂರು	
ಹೊಸತು	27000-36500
ಶಿವಮೊಗ್ಗ	
ಬೆಟ್ಟೆ	47209-52200
ಗೊರಬಲು	18000-37693
ಹೊಸತು	44639-47209
ರಾಶಿ	35609-47899
ಸರಕು	48029-75303
ಸಿದ್ದಾಪುರ	
ಬಿಳಿಗೋಟು	30482-33509
ಚಾಲಿ	37639-38809
ಕೋಕ	16600-32789
ಕೆಂಪುಗೋಟು	28089-32689
ರಾಶಿ	43709-46899
ತಟ್ಟಿಬೆಟ್ಟೆ	38289-42109
ಶಿರಸಿ	
ಬೆಟ್ಟೆ	38021-45299
ಬಿಳಿಗೋಟು	27199-35418
ಚಾಲಿ	37099-39999
ರಾಶಿ	44099-46999
ತೀರ್ಥಹಳ್ಳಿ	
ಗೊರಬಲು	34500-34500
ರಾಶಿ	46000-47000
ಯಲ್ಲಾಪುರ	
ಬಿಳಿಗೋಟು	24899-35671
ಚಾಲಿ	36020-39576
ಕೋಕ	17999-31699
ಕೆಂಪುಗೋಟು	25499-34099
ರಾಶಿ	45109-56301
ತಟ್ಟಿಬೆಟ್ಟೆ	38799-44770


ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12600	13000	-	177.50 ಸೆಂಟ್ಸ್
ಎಸಿ	6750	7000	-	
ಆರ್‌ಪಿ	10200	10000	-	ಲಂಡನ್-
ಆರ್‌ಸಿ	6095	6000	-	2589 ಡಾಲರ್ಸ್

‘ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವೆ’

ಮಾಸ್ಕೋ (ಎಎಫ್‌ಪಿ): ಮಾರ್ಚ್‌ನಲ್ಲಿ ನಡೆಯಲಿರುವ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವುದಾಗಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಶುಕ್ರವಾರ ತಿಳಿಸಿದ್ದಾರೆ.

ಕ್ರೆಮ್ಲಿನ್‌ನಲ್ಲಿ ಯೋಧರಿಗೆ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಅವರು, ‘ಇದು ನಿರ್ಧಾರವನ್ನು ತೆಗೆದುಕೊಳ್ಳಬೇಕಾದ ಸಮಯ. ಚುನಾವಣೆಯಲ್ಲಿ ಸ್ಪರ್ಧಿಸದೆ ಬೇರೆ ಮಾರ್ಗವಿಲ್ಲ’ ಎಂದು ಹೇಳಿದ್ದಾರೆ.



ವ್ಲಾಡಿಮಿರ್ ಪುಟಿನ್

ಮಾ.17ರಂದು ಅಧ್ಯಕ್ಷೀಯ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ಪುಟಿನ್ ಅವರು ಐದನೇ ಅವಧಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, 2020ರ ಸಾಂವಿಧಾನಿಕ ತಿದ್ದುಪಡಿಯ ನಂತರ ಅವರಿಗೆ ಇನ್ನೂ ಎರಡು ಅವಧಿಗೆ ಆಯ್ಕೆಯಾಗಲು ಅವಕಾಶ ಇದೆ.

ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳಿಗೆ ಯುಪಿಐ ಪಾವತಿ ಮಿತಿ ₹5 ಲಕ್ಷ

ಒಂದನೇ ಪುಟದಿಂದ

ಈ ವ್ಯವಸ್ಥೆ ಅಡಿಯಲ್ಲಿ ₹15 ಸಾವಿರಕ್ಕಿಂತ ಅಧಿಕ ಮೊತ್ತದ ವರ್ಗಾವಣೆಗೆ ಹೆಚ್ಚುವರಿ ದೃಢೀಕರಣ (ಅಡಿಷನಲ್ ಫ್ಯಾಕ್ಟರ್ ಆಫ್ ಅಥೆಂಟಿಕೇಷನ್–ಎಎಫ್‌ಎ) ಅಗತ್ಯ ಇದೆ. ಒಂದು ನಿರ್ದಿಷ್ಟ ಬ್ಯಾಂಕ್ ಖಾತೆಯಿಂದ ನಿಗದಿತ ಮೊತ್ತವನ್ನು ಕಡಿತ ಮಾಡಲು ಬ್ಯಾಂಕ್‌ಗೆ ಅವಕಾಶ ನೀಡುವ ವ್ಯವಸ್ಥೆ ಇ-ಮ್ಯಾಂಡೇಟ್.

ಫಿನ್‌ಟೆಕ್ ಕಣಜ: ಫಿನ್‌ಟೆಕ್ ವಲಯದಲ್ಲಿ ಆಗುತ್ತಿರುವ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ವಲಯಕ್ಕೆ ಬೆಂಬಲ ನೀಡುವ ಉದ್ದೇಶದಿಂದ ಫಿನ್‌ಟೆಕ್ ಕಣಜ ಸ್ಥಾಪಿಸುವುದಾಗಿ ದಾಸ್ ಹೇಳಿದ್ದಾರೆ.

ಆರ್‌ಬಿಐನ ಇನೊವೇಷನ್ ಹಬ್ ಇದನ್ನು ನೋಡಿಕೊಳ್ಳಲಿದೆ. 2024ರ ಏಪ್ರಿಲ್ ಅಥವಾ ಅದಕ್ಕೂ ಮುನ್ನವೇ ಫಿನ್‌ಟೆಕ್ ಕಣಜ ಕಾರ್ಯಾರಂಭ ಮಾಡಲಿದೆ. ಫಿನ್‌ಟೆಕ್ ಕಂಪನಿಗಳು ಸ್ವಯಂ ಪ್ರೇರಿತರಾಗಿ ಅಗತ್ಯವಾದ ಮಾಹಿತಿಗಳನ್ನು ಈ ಕಣಜಕ್ಕೆ ನೀಡುವಂತೆ ಉತ್ತೇಜಿಸಲಾಗುವುದು ಎಂದಿದ್ದಾರೆ.

ಚಂಡಮಾರುತದ ನಂತರ ಸಹಜ ಸ್ಥಿತಿಗೆ ಬಾರದ ಚೆನ್ನೈ

ಬಾಗಿಲು ತೆರೆಯದ ಕಾರ್ಖಾನೆಗಳು

ಚೆನ್ನೈ (ರಾಯಿಟರ್ಸ್): ಚಂಡಮಾರುತ ಮಿಚಾಂಗ್‌ನಿಂದ ತತ್ತರಿಸಿರುವ ಚೆನ್ನೈ ಇನ್ನೂ ಸಹಜ ಸ್ಥಿತಿಗೆ ಬಂದಿಲ್ಲ.

ಜಲಾವೃತಗೊಂಡಿರುವ ವಸತಿ ಪ್ರದೇಶಗಳಲ್ಲಿನ ಜನ ಹೊರ ಬರಲಾಗದೇ ಪರದಾಡುತ್ತಿದ್ದಾರೆ. ಸಂಕಷ್ಟದಲ್ಲಿ ಸಿಲುಕಿರುವವರ ನೆರವಿಗೆ ಧಾವಿಸಿರುವ ನೂರಾರು ಸ್ವಯಂ ಸೇವಕರು ನೀರಲ್ಲೇ ನಡೆದು ಹೋಗಿ, ಪರಿಹಾರ ಸಾಮಾಗ್ರಿಗಳನ್ನು ವಿತರಿಸುತ್ತಿದ್ದಾರೆ.

ಇನ್ನೊಂದೆಡೆ, ಚಂಡಮಾರುತದಿಂದಾಗಿ ಮುಚ್ಚಿದ ಹಲವು ಕಾರ್ಖಾನೆಗಳು ಇನ್ನೂ ಬಾಗಿಲು ತೆರೆದಿಲ್ಲ. ‘ಹುಂಡೈ ಮೋಟಾರ್ಸ್’, ‘ಡೈಮ್ಲರ್’ ಮತ್ತು ‘ಆ್ಯಪಲ್’ನ ಅಂಗ ಸಂಸ್ಥೆ ‘ಫಾಕ್ಸ್‌ಕಾನ್’ನಂಥ ಪ್ರತಿಷ್ಠಿತ ಸಂಸ್ಥೆಗಳ ಕಾರ್ಖಾನೆಗಳಿಗೆ ಚೆನ್ನೈ ನೆಲೆವೀಡಾಗಿದ್ದು, ಚಂಡಮಾರುತದ ಪರಿಣಾಮ ಈ ಉದ್ಯಮಗಳ ಮೇಲೂ ಆಗಿದೆ.



ಚೆನ್ನೈನ ಅಮ್ಮನ್ ನಗರದಲ್ಲಿ ಶುಕ್ರವಾರ ಶುದ್ಧ ನೀರಿಗಾಗಿ ಬಿಂದಿಗೆಗಳನ್ನು ಹಿಡಿದು ಜಲಾವೃತ್ತ ರಸ್ತೆಯಲ್ಲಿ ಸಾಗಿದ ಮಹಿಳೆ – ಪಿಟಿಐ ಚಿತ್ರ

ನೆರೆಪೀಡಿತ ಪ್ರದೇಶಗಳಲ್ಲಿರುವ ಟಿವಿಎಸ್ ಗ್ರೂಪ್ ಮತ್ತು ಇತರ ಕಂಪನಿಗಳು ಇನ್ನೂ ಬಾಗಿಲು ತೆರೆದಿಲ್ಲ. ಐಟಿ ಸಂಸ್ಥೆಗಳು ತಮ್ಮ ಉದ್ಯೋಗಿಗಳಿಗೆ ‘ವರ್ಕ್ ಫ್ರಮ್ ಹೋಮ್’ ಘೋಷಿಸಿವೆ. ಶಾಲಾ ಕಾಲೇಜುಗಳ ರಜೆ ವಿಸ್ತರಣೆಯಾಗಿದೆ. ಹಲವು ಶಾಲಾ–ಕಾಲೇಜುಗಳನ್ನು ಪರಿಹಾರ ಕೇಂದ್ರಗಳಾಗಿ ಮಾಡಲಾಗಿದೆ. ಚಂಡಮಾರುತ ಬಂದಾಗಲೆಲ್ಲ ತತ್ತರಿಸಿ ಹೋಗುವ ಚೆನ್ನೈ ನಗರದ ಮೂಲಸೌಕರ್ಯದ ಬಗ್ಗೆ ನಾಗರಿಕರು ಪ್ರಶ್ನಿಸಿದ್ದಾರೆ.

‘ಇಲ್ಲಿ, ನಗರೀಕರಣ ಮಾತ್ರ ಸಮಸ್ಯೆಯಾಗಿಲ್ಲ. ನಗರೀಕರಣದ ಸ್ವರೂಪವೂ ಸಮಸ್ಯೆಯಾಗಿದೆ. ಬಯಲು, ಜೌಗು ಪ್ರದೇಶ, ನೀರು ಹರಿದುಹೋಗುವ ಪ್ರದೇಶಗಳು ಕಣ್ಮರೆಯಾಗಿ ಸಮಸ್ಯೆ ಸೃಷ್ಟಿಯಾಗುತ್ತಿದೆ’ ಎಂದು ಸಾಮಾಜಿಕ ಕಾರ್ಯಕರ್ತ ನಿತ್ಯಾನಂದ ಜಯರಾಮನ್ ಅಭಿಪ್ರಾಯಪಟ್ಟಿದ್ದಾರೆ.

ಭಾರಿ ಮಳೆ, ವಿಪರೀತ ಜೋರು ಮಳೆಗಳನ್ನು ಚೆನ್ನೈನ ಒಳಚರಂಡಿ ವ್ಯವಸ್ಥೆ ತಾಳಿಕೊಳ್ಳುತ್ತಿಲ್ಲ ಎಂದು ತಜ್ಞರು ಹೇಳಿದ್ದಾರೆ.

ಅಮೆರಿಕ ರಾಯಭಾರ ಕಚೇರಿ ಗುರಿಯಾಗಿಸಿ ದಾಳಿ

ಬಾಗ್ದಾದ್ (ಎಎಫ್‌ಪಿ, ಪಿಟಿಐ): ಬಿಗಿ ಭದ್ರತೆಯುಳ್ಳ, ಬಾಗ್ದಾದ್‌ನಲ್ಲಿರುವ ಅಮೆರಿಕದ ರಾಯಭಾರಿ ಕಚೇರಿಯನ್ನು ಗುರಿಯಾಗಿಸಿಕೊಂಡು ಗುರುವಾರ ರಾಕೆಟ್‌ಗಳ ದಾಳಿ ನಡೆಸಲಾಗಿದೆ.

ಅಮೆರಿಕ ಮತ್ತು ಮೈತ್ರಿ ರಾಷ್ಟ್ರಗಳ ಸೇನಾಪಡೆ ಗುರಿಯಾಗಿಸಿ ದಾಳಿ ನಡೆಸಲಾಗಿದೆ. ಆದರೆ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಅಮೆರಿಕದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ದಾಳಿ ಹೊಣೆಯನ್ನು ಯಾವುದೇ ಸಂಘಟನೆ ಹೊತ್ತುಕೊಂಡಿಲ್ಲ.

ಇರಾಕ್ ಮತ್ತು ನೆರೆಯ ಸಿರಿಯಾದಲ್ಲಿ ಇರುವ ಜಿಹಾದಿಗಳ ವಿರುದ್ಧ ಹೋರಾಟ ನಡೆಸುತ್ತಿರುವ ಅಂತರರಾಷ್ಟ್ರೀಯ ಮೈತ್ರಿ ಪಡೆಗಳ ನೇತೃತ್ವವನ್ನು ಅಮೆರಿಕ ವಹಿಸಿಕೊಂಡಿದೆ. ಇತ್ತೀಚಿನ ದಿನಗಳಲ್ಲಿ ಹಲವು ಬಾರಿ ಸೇನೆಯ ಮೇಲೆ ದಾಳಿ ನಡೆದಿದೆ.

ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಪ್ಯಾಲೆಸ್ಟೀನ್ ಇಸ್ಲಾಮಿಸ್ಟ್ ಸಮೂಹವಾದ ಹಮಾಸ್ ನಡುವಣ ಯುದ್ಧದ ಹಿನ್ನೆಲೆಯಲ್ಲಿ ಈ ದಾಳಿ ಮಹತ್ವ ಪಡೆದುಕೊಂಡಿದೆ.

ಇರಾನ್ ಜೊತೆಗೆ ಗುರುತಿಸಿಕೊಂಡಿರುವ ಬಂಡುಕೋರರು ದಾಳಿ ನಡೆಸಿರುವ ಸೂಚನೆಗಳಿವೆ. ಇಸ್ರೇಲ್ ಸರ್ಕಾರವು ರಾಜತಾಂತ್ರಿಕ ವಿಭಾಗ ಮತ್ತು ಸಿಬ್ಬಂದಿಯ ರಕ್ಷಣೆಗೆ ಎಲ್ಲ ಅಧಿಕಾರ ಬಳಸಿಕೊಳ್ಳ ಬೇಕು ಎಂದು ಅಮೆರಿಕದ ವಕ್ತಾರರು ಇರಾಕ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಇರಾನ್ ಪರ ಗುಂಪುಗಳು ಅಕ್ಟೋಬರ್ ನಂತರ ಅಮೆರಿಕ ಮತ್ತು ಮೈತ್ರಿ ಪಡೆಗಳನ್ನು ಗುರಿಯಾಗಿಸಿ 12ಕ್ಕೂ ಹೆಚ್ಚು ಬಾರಿ ರಾಕೆಟ್, ಡ್ರೋನ್ ದಾಳಿ ನಡೆಸಿವೆ. ಆದರೆ, ರಾಯಭಾರಿ ಕಚೇರಿ ಗುರಿಯಾಗಿಸಿ ರಾಕೆಟ್ ದಾಳಿ ನಡೆದಿರುವುದು ಇದೇ ಮೊದಲು.

ಖಂಡನೆ: ‘ಅಮೆರಿಕದ ರಾಯಭಾರ ಕಚೇರಿ ಮೇಲಿನ ದಾಳಿಯು ಸಮರ್ಥನೀಯವಲ್ಲ’ ಎಂದು ಪ್ರತಿಪಾದಿಸಿರುವ ಇರಾಕ್ ಪ್ರಧಾನಿ ಮೊಹಮ್ಮದ್ ಶಿಯಾ ಅಲ್–ಸುಡಾನಿ ಅವರು, ಈ ದಾಳಿಯ ಹಿಂದಿರುವವರ ಹೆಡೆಮುರಿ ಕಟ್ಟುವಂತೆ ಭದ್ರತಾಪಡೆಗಳಿಗೆ ಸೂಚನೆ ನೀಡಿದ್ದಾರೆ.

ವರದಿ ಓದಲು ಸಮಯ ನೀಡಿದ್ದರೆ ಆಕಾಶವೇನೂ ತಲೆಮೇಲೆ ಬೀಳುತ್ತಿರಲಿಲ್ಲ: ಮನೀಶ್ ತಿವಾರಿ

‘ಮಹುವಾ ಮಾತು ಸಮಿತಿಗೆ ಸೀಮಿತ’

ನವದೆಹಲಿ (ಪಿಟಿಐ): ಮಹುವಾ ಮೊಯಿತ್ರಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಬೇಕು ಎಂದು ಶಿಫಾರಸು ಮಾಡಿರುವ ನೀತಿ ಸಮಿತಿಯ ವರದಿ ಬಗ್ಗೆ ಲೋಕಸಭೆಯಲ್ಲಿ ಶುಕ್ರವಾರ ಬಿರುಸಿನ ಚರ್ಚೆ ನಡೆಯಿತು. ಮಹುವಾ ಅವರಿಗೆ ಮಾತನಾಡಲು ಅವಕಾಶ ನೀಡಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಆಗ್ರಹಿಸಿದರು. ಆದರೆ, ಮಹುವಾ ಅವರ ವಾದವನ್ನು ಸಮಿತಿಯು ಆಲಿಸಿದೆ ಎಂದು ಸರ್ಕಾರವು ಪ್ರತ್ಯುತ್ತರ ನೀಡಿತು.

ಚರ್ಚೆಯನ್ನು ಆರಂಭಿಸಿದ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧುರಿ, ವರದಿಯನ್ನು ಪರಿಶೀಲಿಸಲು ಇನ್ನಷ್ಟು ಸಮಯ ಬೇಕು ಎಂದರು. ಆದರೆ ಈ ಮನವಿಯನ್ನು ಮಾನ್ಯ ಮಾಡಲಿಲ್ಲ. ಸಮಿತಿಯ ವರದಿಯು ದೋಷಪೂರಿತವಾಗಿದೆ, ಸದಸ್ಯರನ್ನು ಉಚ್ಚಾಟಿಸುವಂತೆ ಶಿಫಾರಸು ಮಾಡುವ ಅಧಿಕಾರವು ಸಮಿತಿಗೆ ಇಲ್ಲ ಎಂದು ಕಾಂಗ್ರೆಸ್ಸಿನ ಮನೀಶ್ ತಿವಾರಿ ಹೇಳಿದರು.

ವ್ಯಕ್ತಿಯೊಬ್ಬ ಅಪರಾಧಿಯೇ ಅಥವಾ ಅಮಾಯಕನೇ ಎಂಬುದನ್ನು ತೀರ್ಮಾನಿಸುವ ಅಧಿಕಾರವು ಸಮಿತಿಗೆ ಇಲ್ಲ ಎಂದೂ ಅವರು ವಾದಿಸಿದರು. ‘ವರದಿಯನ್ನು ಓದಿ, ಅದರ ಬಗ್ಗೆ ಚರ್ಚಿಸಲು 3-4 ದಿನ ಅವಕಾಶ ನೀಡಿದರೆ ತಲೆಮೇಲೆ ಆಕಾಶವೇನೂ ಬೀಳುವುದಿಲ್ಲ’ ಎಂದರು.

ನೀತಿ ಸಮಿತಿಯ ಮುಂದೆ ತಮ್ಮ ವಾದ ಮಂಡಿಸಲು ಅವಕಾಶ ಪಡೆದಿದ್ದ ಸದಸ್ಯರಿಗೆ ಸದನದಲ್ಲಿ ಆ ವರದಿಯ ಬಗ್ಗೆ ಚರ್ಚೆ ನಡೆಯುವ ಹೊತ್ತಿನಲ್ಲಿ ಮಾತನಾಡಲು ಅವಕಾಶ ಕೊಡಲಾಗದು. ಈ ಪೂರ್ವ ನಿದರ್ಶನವನ್ನು ಹಿಂದೆ ಲೋಕಸಭೆಯ ಸ್ಪೀಕರ್ ಆಗಿದ್ದ ಸೋಮನಾಥ ಚಟರ್ಜಿ ಅವರು ಹಾಕಿಕೊಟ್ಟಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ವಿವರಿಸಿದರು.

ಎರಡು ತಾಸಿನ ಅವಧಿಯಲ್ಲಿ ತಾವು ವರದಿಯ 495 ಪುಟಗಳನ್ನು ಓದಿರುವುದಾಗಿ ಬಿಜೆಪಿಯ ಹೀನಾ ಗವಿತ್ ಅವರು ಹೇಳಿದರು. ‘ಮಹುವಾ ಅವರು 61 ಪ್ರಶ್ನೆಗಳನ್ನು ಕೇಳಿದ್ದಾರೆ.

ಆ ಪೈಕಿ 50 ಪ್ರಶ್ನೆಗಳು ಉದ್ಯಮಿ ದರ್ಶನ್ ಹೀರಾನಂದಾನಿ ಅವರಿಗೆ ಸಂಬಂಧಿಸಿದ ಐದು ಕ್ಷೇತ್ರಗಳ ಕುರಿತಾಗಿವೆ. ತಮ್ಮ ಲಾಗಿನ್ ಹೆಸರು ಮತ್ತು ಗುಪ್ತನಾಮವನ್ನು ಹೀರಾನಂದಾನಿ ಜೊತೆ ಹಂಚಿಕೊಂಡಿದ್ದನ್ನು ಮಹುವಾ ಅವರು ಒಪ್ಪಿಕೊಂಡಿದ್ದಾರೆ’ ಎಂದು ಗವಿತ್ ಹೇಳಿದರು.

‘ಇಂತಹ ನಡತೆಯು, ಸಂಸದರು ತಮ್ಮ ಪ್ರಶ್ನೆಯನ್ನು ಕೇಳುವ ಬದಲು ಬೇರೊಬ್ಬರ ಪರವಾಗಿ ಇಂತಹ ಕೆಲಸ ಮಾಡುತ್ತಾರೆ ಎಂಬ ಸಂದೇಶವನ್ನು ರವಾನಿಸುತ್ತದೆ... ಯಾರಾದರೂ ಹಣ ನೀಡಿದರೆ ಸಂಸದರು ಸದನದಲ್ಲಿ ಗಟ್ಟಿ ದನಿಯಲ್ಲಿ ಪ್ರಶ್ನೆ ಕೇಳಬಲ್ಲರು ಎಂಬ ಸಂದೇಶ ರವಾನಿಸುತ್ತದೆ’ ಎಂದು ಗವಿತ್ ಹೇಳಿದರು.



ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಅವರು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಮತ್ತು ಇತರ ಸಂಸದರ ಉಪಸ್ಥಿತಿಯಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದರು —ಪಿಟಿಐ ಚಿತ್ರ

‘ಪ್ರಜಾತಂತ್ರಕ್ಕೆ ಎಸಗಿದ ದ್ರೋಹ’

ಡಾರ್ಜಿಲಿಂಗ್ (ಪಶ್ಚಿಮ ಬಂಗಾಳ) (ಪಿಟಿಐ): ಮಹುವಾ ಮೊಯಿತ್ರಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಿರುವ ಕ್ರಮವನ್ನು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಖಂಡಿಸಿದ್ದಾರೆ. ದೇಶದ ಸಂಸದೀಯ ಪ್ರಜಾತಂತ್ರ ವ್ಯವಸ್ಥೆಗೆ ಎಸಗಿರುವ ದ್ರೋಹ ಇದು ಎಂದು ಅವರು ಹೇಳಿದ್ದಾರೆ.



ಮಮತಾ ಬ್ಯಾನರ್ಜಿ

‘ಇದು ಸಂಸದೀಯ ಪ್ರಜಾತಂತ್ರ ವ್ಯವಸ್ಥೆಗೆ ಒಂದು ಕಳಂಕ. ಪಕ್ಷವು ಅವರ ಜೊತೆ ಇದೆ. ನಮ್ಮನ್ನು ಚುನಾವಣೆಯಲ್ಲಿ ಸೋಲಿಸಲು ಸಾಧ್ಯವಾಗದ ಕಾರಣಕ್ಕೆ ಬಿಜೆಪಿಯು ದ್ವೇಷದ ರಾಜಕಾರಣದಲ್ಲಿ ತೊಡಗಿದೆ’ ಎಂದು ಮಮತಾ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಸರಿಸುಮಾರು 500 ಪುಟಗಳ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿದ ನಂತರ, ಕೇವಲ ಮೂವತ್ತು ನಿಮಿಷಗಳ ಅವಧಿಗೆ ಅದರ ಬಗ್ಗೆ ಚರ್ಚೆ ನಡೆಸಲು ಎಲ್ಲ ಪಕ್ಷಗಳಿಗೆ ಅವಕಾಶ ನೀಡಲಾಯಿತು. ‘ಮೂವತ್ತು ನಿಮಿಷಗಳಲ್ಲಿ ಸದಸ್ಯರು 500 ಪುಟಗಳ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಲು ಹೇಗೆ ಸಾಧ್ಯ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾತನಾಡಿದ ಎಲ್ಲರೂ ಒಂದು ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯ’ ಎಂದು ಮಮತಾ ಪ್ರಶ್ನಿಸಿದರು.

‘ವಿಧಾನಸಭೆಯಲ್ಲಿ ನಮಗೆ ಮೂರನೆಯ ಎರಡರಷ್ಟು ಬಹುಮತ ಇದ್ದರೂ ನಾವು ಯಾರನ್ನೂ ಉಚ್ಚಾಟಿಸಲು ಮುಂದಾಗುವುದಿಲ್ಲ’ ಎಂದರು.

ಸೋಮನಾಥ ಚಟರ್ಜಿ ಅವಧಿಯಲ್ಲಿ 10 ಸದಸ್ಯರ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಆರೋಪದ ಅಡಿಯಲ್ಲಿ ಸಂಸದರನ್ನು ಉಚ್ಚಾಟಿಸುತ್ತಿರುವುದು ಇದೇ ಮೊದಲಲ್ಲ. ಯುಪಿಎ ಸರ್ಕಾರದ ಆಡಳಿತದ ಅವಧಿಯಲ್ಲಿ, ಸೋಮನಾಥ ಚಟರ್ಜಿ ಅವರು ಲೋಕಸಭೆಯ ಸ್ಪೀಕರ್ ಆಗಿದ್ದಾಗ 10 ಮಂದಿ ಸಂಸದರನ್ನು ಇದೇ ಆರೋಪದ ಅಡಿಯಲ್ಲಿ ಉಚ್ಚಾಟಿಸಲಾಗಿತ್ತು.

ಆಗ ರಾಜ್ಯಸಭೆಯ ಒಬ್ಬ ಸದಸ್ಯರನ್ನು ಕೂಡ ಉಚ್ಚಾಟನೆ ಮಾಡಲಾಗಿತ್ತು. ಸುದ್ದಿವಾಹಿನಿಗಳು ನಡೆಸಿದ ಮಾರುವೇಷದ ಕಾರ್ಯಾಚರಣೆಯಲ್ಲಿ ಒಟ್ಟು 11 ಮಂದಿ ಸಂಸದರು (10 ಮಂದಿ ಲೋಕಸಭಾ ಸದಸ್ಯರು, ಒಬ್ಬ ರಾಜ್ಯಸಭಾ ಸದಸ್ಯ), ಸಂಸತ್ತಿನಲ್ಲಿ ಪ್ರಶ್ನೆ ಕೇಳಲು ಲಂಚ ಕೇಳಿದ್ದು ಸೆರೆಯಾಗಿತ್ತು. 2005ರ ಡಿಸೆಂಬರ್ ತಿಂಗಳ ಈ ಬೆಳವಣಿಗೆಯು ರಾಜಕೀಯ ವಲಯದಲ್ಲಿ ಭಾರಿ ಚರ್ಚೆಗೆ ಕಾರಣವಾಗಿತ್ತು.

ಪ್ರಶ್ನೆ ಕೇಳಲು ಲಂಚ ಪಡೆದಿದ್ದು ‘ಅನೈತಿಕವಾದುದು ಹಾಗೂ ಸಭ್ಯತೆಗೆ ಎಸಗಿದ ಅಪಚಾರ. ಅವರನ್ನು ಸದನದ ಸದಸ್ಯರನ್ನಾಗಿ ಮುಂದುವರಿಸುವುದು ಸರಿಯಲ್ಲ’ ಎಂದು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ 2005ರ ಡಿಸೆಂಬರ್ 23ರಂದು ನಿರ್ಣಯ ಅಂಗೀಕರಿಸಲಾಗಿತ್ತು.



ಸೋಮನಾಥ ಚಟರ್ಜಿ

ಕಾಕತಾಳೀಯ ಎಂಬಂತೆ, ಆಗ ಪ್ರಶ್ನೆಗಾಗಿ ಲಂಚ ಪಡೆದ ಸಂಸದರನ್ನು ಉಚ್ಚಾಟಿಸುವ ನಿರ್ಣಯವನ್ನು ಸಂಸತ್ತಿನ ಉಭಯ ಸದನಗಳು ಅಂಗೀಕರಿಸಿದ್ದು ಚಳಿಗಾಲದ ಅಧಿವೇಶನದಲ್ಲಿ.

ಈಗ, ಟಿಎಂಸಿಯ ಮಹುವಾ ಮೊಯಿತ್ರಾ ಅವರನ್ನು ಇಂಥದ್ದೇ ಆರೋಪದ ಅಡಿಯಲ್ಲಿ ಉಚ್ಚಾಟನೆ ಮಾಡಿರುವುದು ಕೂಡ ಚಳಿಗಾಲದ ಅಧಿವೇಶನದಲ್ಲಿ. ಬಿಜೆಪಿಯ ಐವರು ಲೋಕಸಭಾ ಸದಸ್ಯರು, ಬಿಎಸ್‌ಪಿಯ ಮೂವರು ಸದಸ್ಯರು ಹಾಗೂ ಕಾಂಗ್ರೆಸ್ ಮತ್ತು ಆರ್‌ಜೆಡಿಯ ತಲಾ ಒಬ್ಬ ಸದಸ್ಯರು ಆಗ ಉಚ್ಚಾಟನೆಗೊಂಡಿದ್ದರು. ಉಚ್ಚಾಟನೆಗೊಂಡ ಇನ್ನೊಬ್ಬರು ರಾಜ್ಯಸಭೆಯ ಬಿಜೆಪಿ ಸದಸ್ಯರಾಗಿದ್ದರು.

ಉಚ್ಚಾಟನೆಯ ಶಿಕ್ಷೆಯು ಅಪರಾಧದ ಪ್ರಮಾಣಕ್ಕೆ ಅನುಗುಣವಾಗಿ ಇಲ್ಲ ಎಂದು ಆಕ್ಷೇಪಿಸಿ, ಆಗ ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿದ್ದ ಎಲ್.ಕೆ. ಅಡ್ವಾಣಿ ಸಭಾತ್ಯಾಗ ನಡೆಸಿದ್ದರು. ಅಲ್ಲದೆ, ಉಚ್ಚಾಟನೆ ನಿರ್ಣಯವನ್ನು ಸಂಸತ್ತು ಅಂಗೀಕರಿಸಿದ ಮಾರನೆ ದಿನದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಅಡ್ವಾಣಿ ಅವರು, ‘ಸಂಸದರು ಮಾಡಿರುವ ಅಪರಾಧಕ್ಕೆ ಈಗ ವಿಧಿಸಿರುವ ಶಿಕ್ಷೆ ಹೆಚ್ಚೇ ಆಯಿತು. ಒಂದು ಅಧಿವೇಶನಕ್ಕೆ ಹಾಜರಾಗದಂತೆ ಅಮಾನತು ಮಾಡುವಂತಹ ಲಘು ಶಿಕ್ಷೆ ವಿಧಿಸಿದ್ದರೆ ಸಾಕಿತ್ತು’ ಎಂದು ಹೇಳಿದ್ದರು.

1951ರಲ್ಲಿ ಅಂದಿನ ತಾತ್ಕಾಲಿಕ ಸಂಸತ್ತು, ಸದಸ್ಯ ಎಚ್.ಜಿ. ಮುದ್ಗಲ್ ಅವರ ವಿರುದ್ಧ ಉಚ್ಚಾಟನೆಯ ಕ್ರಮ ಕೈಗೊಂಡಿತ್ತು. ಮುದ್ಗಲ್ ಅವರು ಸಂಸತ್ತಿನಲ್ಲಿ ಲಾಬಿ ನಡೆಸಲು ಮುಂಬೈನ ಚಿನ್ನಾಭರಣ ವರ್ತಕರಿಂದ ಲಂಚ ಪಡೆದ ಆರೋಪ ಎದುರಿಸುತ್ತಿದ್ದರು. ಆದರೆ, ಒಂದೇ ಬಾರಿ 10 ಮಂದಿ ಸದಸ್ಯರನ್ನು ಉಚ್ಚಾಟಿಸುವ ನಿರ್ಣಯವನ್ನು ಸಂಸತ್ತು ಕೈಗೊಂಡಿದ್ದು ಚಟರ್ಜಿ ಅವರು ಸ್ಪೀಕರ್ ಆಗಿದ್ದ ಅವಧಿಯಲ್ಲಿ ಮಾತ್ರ.

ಮಹುವಾ ಉಚ್ಚಾಟನೆ: ಘಟನಾವಳಿ

ನವದೆಹಲಿ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರಾ ಅವರು ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಹಣ ಹಾಗೂ ಉಡುಗೊರೆಗಳನ್ನು ಪಡೆದ ಆರೋಪಕ್ಕೆ ಒಳಗಾಗಿ, ಲೋಕಸಭಾ ಸದಸ್ಯತ್ವದಿಂದ ಉಚ್ಚಾಟನೆಯಾಗುವವರೆಗಿನ ಬೆಳವಣಿಗೆಯ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

- **ಸಿಬಿಐಗೆ ದೂರು (ಅ.14):** ಸುಪ್ರೀಂ ಕೋರ್ಟ್ ವಕೀಲ ಜೈ ಅನಂತ್ ದೆಹಾದ್ರಾಯ್ ಅವರು ಭ್ರಷ್ಟಾಚಾರ ಮತ್ತು ಹಣದ ಅಕ್ರಮ ವರ್ಗಾವಣೆ ಆರೋಪ ಹೊರಿಸಿ ಮಹುವಾ ವಿರುದ್ಧ ಸಿಬಿಐಗೆ ದೂರು ನೀಡಿ, ದೂರಿನ ಪ್ರತಿಯನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೂ ಕಳುಹಿಸಿದರು.
- **ಸ್ಪೀಕರ್‌ಗೆ ದುಬೆ ದೂರು (ಅ.15):** ಮಹುವಾ ಅವರು ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಹಣ ಹಾಗೂ ಉಡುಗೊರೆಗಳನ್ನು ಪಡೆದಿದ್ದಾರೆ ಎಂದು ಆರೋಪಿಸಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರಿಂದ ಸ್ಪೀಕರ್ ಓಂ ಬಿರ್ಲಾಗೆ ದೂರು. ಜೈ ಅನಂತ್, ಸಿಬಿಐಗೆ ನೀಡಿದ್ದ ದೂರಿನಲ್ಲಿರುವ ಮಾಹಿತಿ ಆಧರಿಸಿ ಸ್ಪೀಕರ್‌ಗೆ ದೂರು ನೀಡಿದ್ದಾಗಿ ದುಬೆ ಹೇಳಿಕೆ. ಆರೋಪ ಅಲ್ಲಗಳೆದ ಮಹುವಾ.
- **ಉದ್ಯಮಿ ಹೀರಾನಂದಾನಿ ಹೇಳಿಕೆ (ಅ.20):** ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇರಿಸುಮುರಿಸು ಉಂಟುಮಾಡಲು ಮಹುವಾ, ಉದ್ಯಮಿ ಗೌತಮ್ ಅದಾನಿ ಅವರನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಿದ್ದರು ಎಂದು ಉದ್ಯಮಿ ದರ್ಶನ್ ಹೀರಾನಂದಾನಿ ಆರೋಪ. ಮಹುವಾ ನೀಡಿದ್ದ ಸಂಸತ್ ಸದಸ್ಯತ್ವದ ಇ-ಮೇಲ್ ಐ.ಡಿ ಬಳಸಿ ತಾವು ಕಳುಹಿಸುತ್ತಿದ್ದ ಮಾಹಿತಿ ಆಧರಿಸಿ ಸಂಸತ್‌ನಲ್ಲಿ ಪ್ರಶ್ನೆ ಕೇಳುತ್ತಿದ್ದರು ಎಂದು ಪ್ರಮಾಣಪತ್ರದಲ್ಲಿ ಹೇಳಿಕೆ.
- ಸಿಬಿಐ ಮತ್ತು ಸಂಸತ್‌ನ ನೀತಿ ನಿಯಮಗಳ ಸಮಿತಿಯಿಂದ ಕರೆಬಂದರೆ ಸೂಕ್ತ ಉತ್ತರ ನೀಡಲು ಸಿದ್ಧ ಎಂದು ಮಹುವಾ ಪ್ರತಿಕ್ರಿಯೆ
- **ಸಂಸತ್ ಐ.ಡಿ ದುಬೈನಲ್ಲಿ ಬಳಕೆ (ಅ.21):** ಮಹುವಾ ಅವರ ಸಂಸತ್‌ನ ಲಾಗಿನ್ ಮತ್ತು ಪಾಸ್‌ವರ್ಡ್ ದುಬೈನಲ್ಲಿ ಬಳಕೆಯಾಗಿದೆ ಎಂದು ಆರೋಪಿಸಿದ ನಿಶಿಕಾಂತ್ ದುಬೆ
- **ವಿಚಾರಣೆಗೆ ಹಾಜರಾಗಲು ಸೂಚನೆ (ಅ.26):** ಮಹುವಾ ವಿರುದ್ಧದ ಆರೋಪಕ್ಕೆ ಸಂಬಂಧಿಸಿದಂತೆ ಲೋಕಸಭೆಯ ನೀತಿ ಸಮಿತಿಯ ಮೊದಲ ಸಭೆ. ಜೈ ಅನಂತ್ ದೆಹಾದ್ರಯ್ ಮತ್ತು ದುಬೆ ಅವರ ಹೇಳಿಕೆ ದಾಖಲು. ಅ.31ಕ್ಕೆ ವಿಚಾರಣೆಗೆ ಹಾಜರಾಗುವಂತೆ ಮಹುವಾಗೆ ಸೂಚನೆ
- **ನ.2ಕ್ಕೆ ಮರುನಿಗದಿ:** ಪೂರ್ವನಿಗದಿತ ಕಾರ್ಯಕ್ರಮ ಇರುವುದರಿಂದ 31ಕ್ಕೆ ಹಾಜರಾಗಲು ಸಾಧ್ಯವಿಲ್ಲ ಎಂದು ಸಮಿತಿಗೆ ಸಂಸದೆ ಪತ್ರ. ವಿಚಾರಣೆ ದಿನಾಂಕ ನವೆಂಬರ್ 2ಕ್ಕೆ ಮರುನಿಗದಿ
- **47 ಬಾರಿ ಲಾಗಿನ್ (ನ.1):** ಮಹುವಾ ಅವರ ಸಂಸತ್‌ನ ಖಾತೆಗೆ ದುಬೈನಲ್ಲಿ 47 ಬಾರಿ ಲಾಗಿನ್ ಮಾಡಲಾಗಿತ್ತು ಎಂಬ ಹೊಸ ಆರೋಪ
- **ಸಭೆಯಿಂದ ಹೊರನಡೆದ ಮಹುವಾ (ನ.2):** ಲೋಕಸಭೆಯ ‘ನೀತಿ ಸಮಿತಿ’ ಸಭೆ ನಾಟಕೀಯ ವಿದ್ಯಮಾನಗಳಿಗೆ ಸಾಕ್ಷಿ. ಸಮಿತಿಯ ಅಧ್ಯಕ್ಷ ವಿನೋದ್ ಸೋನಕರ್ ಅವರು ಮಹುವಾ ಅವರಿಗೆ ವೈಯಕ್ತಿಕ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಎಂದು ಆರೋಪಿಸಿ ಸಭೆಯಿಂದ ಹೊರನಡೆದ ವಿರೋಧ ಪಕ್ಷಗಳ ನಾಯಕರು ಹಾಗೂ ಮಹುವಾ
- **ತನಿಖೆಗೆ ಸಿದ್ಧ (ನ.3):** ತಮ್ಮ ವಿರುದ್ಧದ ಆರೋಪಗಳ ಕುರಿತ ವಿಚಾರಣೆಗೆ ಸಹಕರಿಸಲು ಸಿದ್ಧ, ಆದರೆ ವಿಚಾರಣೆ ವೇಳೆ ಸಭ್ಯತೆಯನ್ನು ಕಾಯ್ದುಕೊಳ್ಳುವ ಅಗತ್ಯವಿದೆ ಎಂದು ಮಹುವಾ ಹೇಳಿಕೆ
- **ಉಚ್ಚಾಟನೆಗೆ ಶಿಫಾರಸು (ನ.9):** ಮಹುವಾ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಬೇಕು ಎಂದು ನೀತಿ ನಿಯಮಗಳ ಸಮಿತಿಯಿಂದ ಶಿಫಾರಸು
- **ಚರ್ಚೆಗೆ ಆಗ್ರಹ (ಡಿ.2):** ಉಚ್ಚಾಟನೆ ಶಿಫಾರಸು ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆಸಬೇಕು. ಚರ್ಚೆ ಬಳಿಕವೇ ಉಚ್ಚಾಟನೆ ಕುರಿತು ನಿರ್ಧಾರ ತೆಗೆದುಕೊಳ್ಳಬೇಕು ಎಂದು ಟಿಎಂಸಿ ಪಕ್ಷದ ನಾಯಕರ ಆಗ್ರಹ. ಉಚ್ಚಾಟನೆ ಶಿಫಾರಸು ಮರುಪರಿಶೀಲಿಸುವಂತೆ ಕೋರಿ ಲೋಕಸಭೆಯ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರಿಂದ ಸ್ಪೀಕರ್‌ಗೆ ಪತ್ರ
- **ಉಚ್ಚಾಟನೆ (ಡಿ.8):** ಮಹುವಾ ಉಚ್ಚಾಟಿಸುವಂತೆ ಶಿಫಾರಸು ಮಾಡಿರುವ ನೀತಿ ಸಮಿತಿಯ ವರದಿ ಲೋಕಸಭೆಯಲ್ಲಿ ಮಂಡನೆ. ಅದರ ಬೆನ್ನಲ್ಲೇ ಲೋಕಸಭಾ ಸದಸ್ಯತ್ವದಿಂದ ಉಚ್ಚಾಟನೆ

ಸಿ.ಎಂ. ಆಯ್ಕೆ: ಮೂರು ರಾಜ್ಯಗಳಿಗೆ ವೀಕ್ಷಕರ ನೇಮಿಸಿದ ಬಿಜೆಪಿ ಹೈಕಮಾಂಡ್

ರಾಜನಾಥ್, ಮುಂಡಾ, ಖಟ್ಟರ್‌ಗೆ ಹೊಣೆ

ನವದೆಹಲಿ (ಪಿಟಿಐ): ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿರುವ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸಗಢ ರಾಜ್ಯಗಳಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಬಿಜೆಪಿ ಹೈಕಮಾಂಡ್ ಶುಕ್ರವಾರ ಒಂಬತ್ತು ಮಂದಿಯನ್ನು ವೀಕ್ಷಕರನ್ನಾಗಿ ನೇಮಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್, ಬಿಜೆಪಿ ಉಪಾಧ್ಯಕ್ಷ ಸರೋಜ್ ಪಾಂಡೆ ಮತ್ತು ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರನ್ನು ರಾಜಸ್ಥಾನದ ವೀಕ್ಷಕರಾಗಿ ನೇಮಿಸಲಾಗಿದೆ.

ಹರಿಯಾಣ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್, ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಕೆ.ಲಕ್ಷ್ಮಣ್ ಮತ್ತು ಕಾರ್ಯದರ್ಶಿ ಆಶಾ ಲಾಕ್ರ ಅವರು ಮಧ್ಯಪ್ರದೇಶದ ಜವಾಬ್ದಾರಿ ನಿಭಾಯಿಸಲಿದ್ದರೆ, ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ, ಕೇಂದ್ರ ಸಚಿವ ಸರ್ಬಾನಂದ ಸೋನೊವಾಲ್ ಹಾಗೂ ಬಿಜೆಪಿ ಪ್ರಧಾನ ಕಾರ್ಯದರ್ಶಿ ದುಶ್ವಂತ್ ಕುಮಾರ್ ಗೌತಮ್ ಅವರಿಗೆ ಛತ್ತೀಸಗಢದ ಜವಾಬ್ದಾರಿ ನೀಡಲಾಗಿದೆ.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗುವವರು ನೂತನ ಮುಖ್ಯಮಂತ್ರಿಯಾಗಲಿದ್ದಾರೆ. ವೀಕ್ಷಕರು ಈ ಮೂರು ರಾಜ್ಯಗಳಲ್ಲಿ ಪ್ರತಿಯೊಬ್ಬ ಶಾಸಕರ ಅಭಿಪ್ರಾಯ ಪಡೆದು ಅಂತಿಮ ನಿರ್ಧಾರಕ್ಕೆ ಬರಲಿದ್ದಾರೆ.

ರಾಜಸ್ಥಾನದಲ್ಲಿ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರ ‘ಒತ್ತಡ ತಂತ್ರ’ವನ್ನು ಕಡೆಗಣಿಸಿ, ಸಿ.ಎಂ. ಸ್ಥಾನವನ್ನು ಹೊಸಬರಿಗೆ ನೀಡುವ ಮಾತು ಪಕ್ಷದೊಳಗೆ ಕೇಳಿಬರುತ್ತಿದೆ.

ಮಧ್ಯಪ್ರದೇಶದಲ್ಲಿ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮತ್ತೊಂದು ಅವಕಾಶ ನೀಡುವುದೇ ಅಥವಾ ಹೊಸಬರಿಗೆ ಮಣೆಹಾಕುವುದೇ ಎಂಬ ಕಾತರ ಹೆಚ್ಚಿದೆ. ಕೇಂದ್ರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಒಬಿಸಿ ಮುಖಂಡ ಪ್ರಹ್ಲಾದ್ ಪಟೇಲ್, ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗಿಯ, ಮಧ್ಯಪ್ರದೇಶ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ.ಶರ್ಮಾ ಅವರೂ ಆಕಾಂಕ್ಷಿಗಳಾಗಿದ್ದಾರೆ.

ಛತ್ತೀಸಗಢದಲ್ಲಿ ಒಬಿಸಿ ಅಥವಾ ಬುಡಕಟ್ಟು ಸಮುದಾಯಕ್ಕೆ ಸೇರಿದ ಮುಖಂಡರೊಬ್ಬರಿಗೆ ಮುಖ್ಯಮಂತ್ರಿ ಸ್ಥಾನ ನೀಡಲು ಹೈಕಮಾಂಡ್ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಗೋಮತಿ ಸಾಯ್, ಲತಾ ಉಸೆಂಡೀ ಮತ್ತು ರೇಣುಕಾ ಸಿಂಗ್ ಅಲ್ಲದೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅರುಣ್ ಸಾವ್ ಹಾಗೂ ಒ.ಪಿ.ಚೌಧರಿ ಅವರ ಹೆಸರು ಮುಂಚೂಣಿಯಲ್ಲಿದೆ.

ಮಹಿಳೆಯರ ನೇತೃತ್ವದ ಅಭಿವೃದ್ಧಿಯ ಅಗತ್ಯತೆ ಮತ್ತು ಬಿಜೆಪಿಗೆ ಮಹಿಳಾ ಮತದಾರರ ಬೆಂಬಲದ ಬಗ್ಗೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆಗಿಂದಾಗ್ಗೆ ಮಾತನಾಡುವ ಕಾರಣ, ಈ ಮೂರು ರಾಜ್ಯಗಳಲ್ಲಿ ಕನಿಷ್ಠ ಒಂದು ಕಡೆ ಮಹಿಳಾ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಮಧ್ಯಪ್ರದೇಶ: ನಾಳೆ ಸಭೆ?

ಭೋಪಾಲ್ (ಪಿಟಿಐ): ಮಧ್ಯಪ್ರದೇಶದಲ್ಲಿ ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ಬಿಜೆಪಿಯ 163 ಶಾಸಕರು ಭಾನುವಾರ ಸಭೆ ಸೇರಲಿದ್ದು, ಕೇಂದ್ರದ ವೀಕ್ಷಕರ ಸಮ್ಮುಖದಲ್ಲಿ ನೂತನ ಮುಖ್ಯಮಂತ್ರಿಯನ್ನು ಆಯ್ಕೆ ಮಾಡುವ ಸಾಧ್ಯತೆಯಿದೆ. ‘ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದ ಕುತೂಹಲಕ್ಕೆ ಭಾನುವಾರ ತೆರೆಬೀಳಲಿದೆ’ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಕೈಲಾಶ್ ವಿಜಯವರ್ಗಿಯ ಗುರುವಾರ ರಾತ್ರಿ ಹೇಳಿದ್ದಾರೆ.

ಮಹುವಾ ಉಚ್ಚಾಟನೆ

ಒಂದನೇ ಪುಟದಿಂದ

ಈ ಗೊತ್ತುವಳಿಯನ್ನು ಸದನವು ಧ್ವನಿಮತದ ಮೂಲಕ ಅಂಗೀಕರಿಸಿತು.

ತಮ್ಮನ್ನು ಉಚ್ಚಾಟಿಸಿರುವುದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯೆ ನೀಡಿದ ಮಹುವಾ, ಈ ಕ್ರಮವು ‘ಕಾಂಗರೂ ನ್ಯಾಯಾಲಯವೊಂದು (ಕೆಲವು ವ್ಯಕ್ತಿಗಳ ಗುಂಪು ನಿಯಮಾವಳಿಯನ್ನು ಗಾಳಿಗೆ ತೂರಿ, ಸಾಕ್ಷ್ಯದ ಆಧಾರವಿಲ್ಲದೆ ನೀಡುವ ತೀರ್ಮಾನ) ನೇಣು ಶಿಕ್ಷೆ ವಿಧಿಸಿದಂತೆ ಇದೆ’ ಎಂದು ಹೇಳಿದರು. ವಿರೋಧ ಪಕ್ಷಗಳು ತಾನು ಹೇಳಿದಂತೆ ಕೇಳುವಂತಾಗಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರವು ಸಂಸದೀಯ ಸಮಿತಿಯೊಂದನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದೆ ಎಂದು ದೂರಿದರು.

ಅಸ್ತಿತ್ವದಲ್ಲಿಯೇ ಇಲ್ಲದ ನೀತಿ ಸಂಹಿತೆಯನ್ನು ಉಲ್ಲಂಘಿಸಲಾಗಿದೆ ಎಂದು ತಮ್ಮನ್ನು ಉಚ್ಚಾಟಿಸಲಾಗಿದೆ ಎಂದು ಮಹುವಾ ಅವರು ಸುದ್ದಿಗಾರರ ಬಳಿ ದೂರಿದರು. ತಾವು ಹಣ ಪಡೆದುಕೊಂಡಿದ್ದಕ್ಕಾಗಲೀ, ಉಡುಗೊರೆ ಸ್ವೀಕರಿಸಿದ್ದಕ್ಕಾಗಲೀ ಸಾಕ್ಷ್ಯ ಇಲ್ಲ ಎಂದು ಹೇಳಿದರು.

ಅನೈತಿಕವಾಗಿ ವರ್ತಿಸಿದ ತಪ್ಪನ್ನು ಮಹುವಾ ಅವರು ಮಾಡಿದ್ದಾರೆ ಎಂದು ನೀತಿ ಸಮಿತಿಯ ವರದಿಯು ಹೇಳಿದೆ. ಲೋಕಸಭಾ ಸದಸ್ಯರ ಪೋರ್ಟಲ್‌ನ ಗುಪ್ತನಾಮ ಮತ್ತು ಬಳಕೆದಾರರ ಹೆಸರನ್ನು, ಅದರ ಬಳಕೆಗೆ ಅಧಿಕಾರ ಇಲ್ಲದವರ ಜೊತೆ ಹಂಚಿಕೊಂಡು ಮಹುವಾ ಅವರು ರಾಷ್ಟ್ರದ ಭದ್ರತೆಗೆ ಧಕ್ಕೆ ಉಂಟುಮಾಡಿದ್ದಾರೆ ಎಂದು ವರದಿ ಹೇಳಿದೆ.

‘ಉದ್ಯಮಿಯೊಬ್ಬರ ಹಿತಾಸಕ್ತಿಗೆ ನೆರವು ನೀಡಲು ಅವರಿಂದ ಉಡುಗೊರೆ, ಅಕ್ರಮವಾಗಿ ನೆರವು ಪಡೆದ ಮಹುವಾ ಅವರ ವರ್ತನೆಯು ಸಂಸತ್ ಸದಸ್ಯರಿಗೆ ತಕ್ಕುದಲ್ಲ. ಇದು ಅಪರಾಧ, ತೀವ್ರ ವಿಷಾದಕರ ಕೃತ್ಯ’ ಎಂದು ಜೋಶಿ ಅವರು ಮಂಡಿಸಿದ ಗೊತ್ತುವಳಿಯಲ್ಲಿ ಹೇಳಲಾಗಿದೆ. ನೀತಿ ಸಮಿತಿಯ ಶಿಫಾರಸುಗಳನ್ನು ಒಪ್ಪಿಕೊಳ್ಳುವಂತೆ ಹಾಗೂ ‘ಮಹುವಾ ಅವರನ್ನು ಲೋಕಸಭೆಯ ಸದಸ್ಯ ಸ್ಥಾನದಿಂದ ಉಚ್ಚಾಟಿಸಬಹುದು’ ಎಂಬ ನಿರ್ಣಯವನ್ನು ಅಂಗೀಕರಿಸುವಂತೆ ಜೋಶಿ ಅವರು ಸದನವನ್ನು ಕೋರಿದರು.

ಮಹುವಾ ಅವರಿಗೆ ಸದನದಲ್ಲಿ ತಮ್ಮ ಅನಿಸಿಕೆ ಹೇಳಲು ಅವಕಾಶ ಕೊಡಬೇಕು ಎಂದು ಟಿಎಂಸಿ ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರು ಒತ್ತಾಯಿಸಿದರು. ಆದರೆ, ಪೂರ್ವನಿದರ್ಶನಗಳನ್ನು ಉಲ್ಲೇಖಿಸಿ ಸ್ಪೀಕರ್ ಓಂ ಬಿರ್ಲಾ ಅವರು ಇದಕ್ಕೆ ಒಪ್ಪಲಿಲ್ಲ.

ಪ್ರಶ್ನೆಗಾಗಿ ಹಣ ಪಡೆದಿದ್ದ ಆರೋಪ ಎದುರಿಸುತ್ತಿದ್ದ 10 ಮಂದಿ ಸಂಸದರಿಗೆ ಸದನದಲ್ಲಿ ಮಾತನಾಡಲು 2005ರಲ್ಲಿ ಅಂದಿನ ಸ್ಪೀಕರ್ ಸೋಮನಾಥ ಚಟರ್ಜಿ ಅವರು ಅವಕಾಶ ನೀಡಿರಲಿಲ್ಲ ಎಂದು ಬಿರ್ಲಾ ತಿಳಿಸಿದರು.

2005ರಲ್ಲಿ ಲೋಕಸಭೆಯಲ್ಲಿ ವರದಿ ಮಂಡನೆಯಾದ ದಿನವೇ 10 ಮಂದಿ ಸಂಸದರನ್ನು ಉಚ್ಚಾಟಿಸಲು ಅಂದಿನ ಸಭಾನಾಯಕ ಪ್ರಣವ್ ಮುಖರ್ಜಿ ಗೊತ್ತುವಳಿ ಮಂಡಿಸಿದ್ದರು ಎಂದು ಜೋಶಿ ವಿವರಿಸಿದರು.

ಬಿಜೆಪಿಯ ವಿನೋದ್ ಕುಮಾರ್ ಸೋನಕರ್ ಅಧ್ಯಕ್ಷತೆಯ ಲೋಕಸಭೆಯ ನೀತಿ ಸಮಿತಿಯು ಮಹುವಾ ವಿರುದ್ಧದ ಮೊದಲ ವರದಿಯನ್ನು ಲೋಕಸಭೆಯಲ್ಲಿ ಮಂಡಿಸಿತು.

‘ನನಗೆ 49 ವರ್ಷ, ಇನ್ನೂ 30 ವರ್ಷ ಹೋರಾಡುವೆ’

ಒಂದನೇ ಪುಟದಿಂದ

‘ಗಟಾರದಲ್ಲಿ ನಿಂತು, ಬೀದಿಯಲ್ಲಿ ನಿಂತು ಹೋರಾಡುವೆ... ನಿಮ್ಮ ಕೊನೆ ಕಾಣಿಸುವೆ... ಇದು ನಿಮ್ಮ ಅಂತ್ಯದ ಆರಂಭ... ನಾವು ಮರಳಿ ಬರುತ್ತೇವೆ, ನಿಮ್ಮ ಕೊನೆಯನ್ನು ತೋರಿಸುತ್ತೇವೆ’ ಎಂದು ಆಕ್ರೋಶದಿಂದ ಹೇಳಿದರು.

ಜೊತೆಯಲ್ಲಿ ಇದ್ದ ಸೋನಿಯಾ, ಅವರ ಮಾತು ಕೇಳಿ ಚಪ್ಪಾಳೆ ತಟ್ಟಿದರು. ಮಹುವಾ ಉಚ್ಚಾಟನೆಯನ್ನು ವಿರೋಧಿಸಿ, ವಿರೋಧ ಪಕ್ಷಗಳ ಸದಸ್ಯರು ಸಂಸತ್ತಿನ ಆವರಣದಲ್ಲಿ ಇರುವ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದರು.

‘ನನ್ನ ಬಾಯಿ ಮುಚ್ಚಿಸಿ, ಅದಾನಿ ವಿಚಾರವನ್ನು ಮರೆಮಾಚಬಹುದು ಎಂದು ಮೋದಿ ನೇತೃತ್ವದ ಸರ್ಕಾರ ಭಾವಿಸಿದ್ದರೆ, ಈ ಕಾಂಗರೂ ನ್ಯಾಯಾಲಯವು ಅದಾನಿ ಎಷ್ಟು ಮುಖ್ಯ ಎಂಬುದನ್ನು ತೋರಿಸಲು, ಕಾನೂನಿನ ಕ್ರಮವನ್ನು ದುರ್ಬಳಕೆ ಮಾಡಿಕೊಂಡಿದೆ ಎಂಬ ಮಾತನ್ನು ಹೇಳಲು ಬಯಸುವೆ’ ಎಂದು ಹೇಳಿದರು.

‘ಇಬ್ಬರು ಖಾಸಗಿ ವ್ಯಕ್ತಿಗಳ ಲಿಖಿತ ಹೇಳಿಕೆಯೊಂದನ್ನು ಮಾತ್ರ ಆಧರಿಸಿ ವರದಿ ಸಿದ್ಧವಾಗಿದೆ. ಆದರೆ ಆ ಇಬ್ಬರ ಮಾತುಗಳು ಪರಸ್ಪರ ವಿರೋಧಾಭಾಸಗಳಿಂದ ಕೂಡಿವೆ. ಅವರನ್ನು ಪಾಟಿ ಸವಾಲಿಗೆ ಒಳಪಡಿಸಲು ನನಗೆ ಅವಕಾಶವೇ ಇರಲಿಲ್ಲ. ಇಬ್ಬರು ಖಾಸಗಿ ವ್ಯಕ್ತಿಗಳಲ್ಲಿ ಒಬ್ಬ ವ್ಯಕ್ತಿ, ನನ್ನ ಹಿಂದಿನ ಸಂಗಾತಿ. ಅವರು ಕೆಟ್ಟ ಉದ್ದೇಶದಿಂದ ಸಮಿತಿಯ ಎದುರು ಒಬ್ಬ ಸಾಮಾನ್ಯ ಪ್ರಜೆಯಂತೆ ಹಾಜರಾಗಿದ್ದರು’ ಎಂದು ಅವರು ದೂರಿದರು.

ಲಾಲ್ದುಹೋಮಾ ಪ್ರಮಾಣ

ಐಜ್ವಾಲ್ (ಪಿಟಿಐ): ಝೋರಂ ಪೀಪಲ್ಸ್ ಮೂವ್‌ಮೆಂಟ್‌ನ (ಝಡ್‌ಪಿಎಂ) ಮುಖ್ಯಸ್ಥ, 73 ವರ್ಷದ ಲಾಲ್ದುಹೋಮಾ ಅವರು ಶುಕ್ರವಾರ ಮಿಜೋರಾಂನ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದರು.



ಇವರೊಂದಿಗೆ 11 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಇವರಲ್ಲಿ ಏಳು ಜನರು ಸಂಪುಟ ದರ್ಜೆ ಸಚಿವರಾಗಿದ್ದಾರೆ. ವಿಧಾನಸಭೆಯ ಒಟ್ಟು ಸದಸ್ಯ ಬಲ 40 ಆಗಿದ್ದು, ನಿಯಮಾನುಸಾರ ಮುಖ್ಯಮಂತ್ರಿ ಸೇರಿ 12 ಜನ ಸಚಿವರಾಗಲು ಅವಕಾಶವಿದೆ.

ರಾಜ್ಯಪಾಲರಾದ ಹರಿಬಾಬು ಕಂಭಂಪತಿ ಅವರು ಸಿ.ಎಂ ಮತ್ತು ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ನಿರ್ಗಮಿತ ಮುಖ್ಯಮಂತ್ರಿ ಝೋರಂತಂಗಾ, ಮಾಜಿ ಮುಖ್ಯಮಂತ್ರಿ ಲಾಲ್ ಥನ್ಹಾವ್ಲಾ ಅವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಝಡ್‌ಪಿಎಂ ಶಾಸಕಾಂಗ ಪಕ್ಷದ ಉಪ ನಾಯಕ ಕೆ.ಸಪ್ದಂಗಾ ಅವರಿಗೆ ಗೃಹ ಖಾತೆ ವಹಿಸಿದ್ದರೆ, ಮಿಜೋರಾಂನ ಮೊದಲ ಮಹಿಳಾ ಸಂಪುಟ ಸಚಿವರಾದ ಲಾಲ್ರಿನ್‌ಪುಯಿ ಅವರಿಗೆ ಆರೋಗ್ಯ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆ ವಹಿಸಲಾಗಿದೆ.

‘ನ್ಯಾಯಮೂರ್ತಿಗಳ ಬೋಧನೆ ಬೇಡ’

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಸ್ಥಾನದಲ್ಲಿ ಇರುವವರು ತಮ್ಮ ವೈಯಕ್ತಿಕ ಅನಿಸಿಕೆಗಳನ್ನು ವ್ಯಕ್ತಪಡಿಸಬಾರದು, ಬೋಧನೆಗೆ ಮುಂದಾಗಬಾರದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ. ಅಲ್ಲದೆ, ಯುವತಿಯರು ತಮ್ಮ ‘ಲೈಂಗಿಕ ಬಯಕೆಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು’ ಎಂದು ಕಲ್ಕತ್ತಾ ಹೈಕೋರ್ಟ್ ಹೇಳಿದ್ದನ್ನು ಟೀಕಿಸಿದೆ.



ಹೈಕೋರ್ಟ್ ಆಡಿದ ಮಾತುಗಳು ಬಹಳ ಆಕ್ಷೇಪಾರ್ಹವಾಗಿವೆ, ಅನಗತ್ಯವಾಗಿವೆ ಎಂದು ಹೇಳಿರುವ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಪಂಜಕ್ ಮಿತ್ತಲ್ ಅವರಿದ್ದ ವಿಭಾಗೀಯ ಪೀಠವು, ಆ ಮಾತುಗಳು ಸಂವಿಧಾನದ 21ನೆಯ ವಿಧಿಯ ಅಡಿಯಲ್ಲಿ ಹದಿಹರೆಯದವರಿಗೆ ಇರುವ ಹಕ್ಕುಗಳ ಉಲ್ಲಂಘನೆ ಎಂದಿದೆ.

ಅಕ್ಟೋಬರ್ 18ರಂದು ನೀಡಿದ್ದ ಆದೇಶದಲ್ಲಿ ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿ ಚಿತ್ತರಂಜನ್ ದಾಸ್ ಮತ್ತು ಪಾರ್ಥಸಾರಥಿ ಸೇನ್ ಅವರಿದ್ದ ವಿಭಾಗೀಯ ಪೀಠವು ಈ ಮಾತು ಆಡಿತ್ತು. ಅಲ್ಲದೆ, ಹದಿಹರೆಯದ ಹುಡುಗಿಯರು ‘ಎರಡು ನಿಮಿಷಗಳ ಸುಖಕ್ಕೆ ಶರಣಾಗಬಾರದು’ ಎಂದು ಕೂಡ ಹೇಳಿತ್ತು.

ಹೈಕೋರ್ಟ್‌ನ ಮುಂದೆ ಇದ್ದುದು ಆದೇಶವೊಂದು ಕಾನೂನಿನ ದೃಷ್ಟಿಯಿಂದ ಎಷ್ಟು ಸರಿ ಎಂಬುದನ್ನು ಪರಿಶೀಲಿಸುವುದಾಗಿತ್ತು. ‘ಅಪರಾಧ ನಿರ್ಣಯವನ್ನು ಪ್ರಶ್ನಿಸಿದ ಅರ್ಜಿಯ ವಿಚಾರಣೆಯಲ್ಲಿ, ಆ ಅರ್ಜಿಯಲ್ಲಿ ವಾದಗಳ ಹುರುಳನ್ನು ತೀರ್ಮಾನಿಸುವ ಕೆಲಸವನ್ನು ಹೈಕೋರ್ಟ್ ಮಾಡಬೇಕಿತ್ತು. ಇಂತಹ ಪ್ರಕರಣಗಳಲ್ಲಿ ಗೌರವಾನ್ವಿತ ನ್ಯಾಯಮೂರ್ತಿಗಳು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸುವಂತಿಲ್ಲ, ಬೋಧನೆಗೆ ತೊಡಗುವಂತೆ ಇಲ್ಲ ಎಂಬುದು ನಮ್ಮ ಅನಿಸಿಕೆ’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಒಡಿಶಾದ ಡಿಸ್ಟಿಲರಿ ಕಂಪನಿ ● 156 ಚೀಲಗಳಲ್ಲಿ ತುಂಬಿಟ್ಟಿರುವ ಹಣ

ತೆರಿಗೆ ವಂಚನೆ: ₹ 225 ಕೋಟಿ ನಗದು ಜಪ್ತಿ

ಭುವನೇಶ್ವರ (ಪಿಟಿಐ): ಒಡಿಶಾ ಮೂಲದ ಡಿಸ್ಟಿಲರಿ ಸಮೂಹದ ಕಚೇರಿ ಮೇಲಿನ ತಪಾಸಣೆಯನ್ನು ಶುಕ್ರವಾರವೂ ಮುಂದುವರಿಸಿರುವ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು 156 ಚೀಲಗಳಲ್ಲಿದ್ದ ₹225 ಕೋಟಿ ನಗದು ಜಪ್ತಿ ಮಾಡಿದ್ದಾರೆ. ಒಟ್ಟು ಮೊತ್ತ ಸುಮಾರು ₹250 ಕೋಟಿಗೂ ಹೆಚ್ಚಾಗುವ ಅಂದಾಜಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದುವರೆಗೂ 7-8 ಚೀಲಗಳಲ್ಲಿದ್ದ ಹಣವನ್ನಷ್ಟೇ ಲೆಕ್ಕ ಹಾಕಿದ್ದು, ಅದರ ಮೊತ್ತ ₹ 25 ಕೋಟಿ ಆಗಿದೆ. ಎಣಿಕೆ ಮುಂದುವರಿದಿದೆ. ಹಣ ಎಣಿಕೆಗೆ 12ಕ್ಕೂ ಹೆಚ್ಚು ಯಂತ್ರ ಬಳಸಲಾಗುತ್ತಿದೆ. ಅದರ ಎಣಿಕೆ ಸಾಮರ್ಥ್ಯ ಕಡಿಮೆ ಇದ್ದು, ಪ್ರಕ್ರಿಯೆ ವಿಳಂಬವಾಗಲಿದೆ ಎಂದು ತಿಳಿಸಿದ್ದಾರೆ.

ದೇಶದ ಬೃಹತ್ ಮದ್ಯ ಉತ್ಪಾದಕ ಸಂಸ್ಥೆಗಳಲ್ಲಿ ಒಂದಾಗಿರುವ, ಒಡಿಶಾ ಮೂಲದ ಬಲ್‌ದೇವ್ ಸಾಹು ಮತ್ತು ಸಮೂಹ ಕಂಪನಿಯ ಬೊಲಾಂಗಿರ್ ಕಚೇರಿ, ಇತರೆಡೆ ಬುಧವಾರ ದಾಳಿ ನಡೆದಿತ್ತು.

ತೆರಿಗೆ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಐ.ಟಿ ಅಧಿಕಾರಿಗಳು ಸಂಬಾಲ್‌ಪುರ, ಬೊಲಾಂಗಿರ್, ತಿತಿಲ್‌ಗಢ, ಬೌದ್, ಸುಂದರ್‌ಗಢ, ರೂರ್ಕೆಲಾ, ಭುವನೇಶ್ವರದಲ್ಲಿ ದಾಳಿ ನಡೆಸಿದ್ದರು. ದಾಳಿ ಕುರಿತಂತೆ ಕಂಪನಿಯು ಇದುವರೆಗೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಈ ಕಂಪನಿ ಜೊತೆ ಸಂಪರ್ಕ ಹೊಂದಿದ್ದಾರೆ ಎನ್ನಲಾದ ಜಾರ್ಖಂಡ್‌ನ ಸಂಸದರನ್ನು ಸಂಪರ್ಕಿಸಲು ಪಿಟಿಐ ಸುದ್ದಿಸಂಸ್ಥೆ ಯತ್ನಿಸಿದರೂ ಸಂಪರ್ಕ ಸಾಧ್ಯವಾಗಲಿಲ್ಲ. ಅವರ ಫೋನ್ ಸ್ವಿಚ್ಡ್ ಆಫ್ ಆಗಿತ್ತು. ರಾಂಚಿಯ ಅವರ ಕಚೇರಿ ಸಿಬ್ಬಂದಿಯು ‘ಸಂಸದರು ಪ್ರತಿಕ್ರಿಯೆಗೆ ಲಭ್ಯವಿಲ್ಲ’ ಎಂದರು.



ಒಡಿಶಾ ಮೂಲದ ಡಿಸ್ಟಿಲರಿ ಸಮೂಹ ಸಂಸ್ಥೆಗಳ ಕಚೇರಿಯಿಂದ ಐ.ಟಿ ಅಧಿಕಾರಿಗಳು ಜಪ್ತಿ ಮಾಡಿರುವ ಹಣ —ಪಿಟಿಐ ಚಿತ್ರ

ಬುಧವಾರ ಐ.ಟಿ ಅಧಿಕಾರಿಗಳು ಭುವನೇಶ್ವರದ ಪಲಸಪಲ್ಲಿಯಲ್ಲಿನ ಬೌದ್ ಡಿಸ್ಟಿಲ್ಲರಿ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ಮುಖ್ಯ ಕಚೇರಿ, ಅಧಿಕಾರಿಗಳ ನಿವಾಸ ಮತ್ತು ಫ್ಯಾಕ್ಟರಿ, ರಾಣಿಸತಿ ರೈಸ್ ಮಿಲ್‌ಗಳಲ್ಲಿಯೂ ತಪಾಸಣೆ ನಡೆಸಿದ್ದರು.

ಆದಾಯ ತೆರಿಗೆ ಇಲಾಖೆಯ ಮಾಜಿ ಆಯುಕ್ತ ಶರತ್ ಚಂದ್ರ ದಾಸ್ ಅವರು, ‘ಒಡಿಶಾದಲ್ಲಿ ನಡೆದಿರುವ ಅತಿದೊಡ್ಡ, ಬೃಹತ್ ಮೊತ್ತದ ನಗದು ವಶಪಡಿಸಿಕೊಂಡಿರುವ ಪ್ರಕರಣ ಇದಾಗಿದೆ. ಇಷ್ಟು ದೊಡ್ಡ ಪ್ರಮಾಣದ ನಗದು ಜಪ್ತಿಯನ್ನು ನಾನು ನೋಡಿರಲಿಲ್ಲ’ ಎಂದು ತಿಳಿಸಿದರು.

ಸಿಬಿಐ ತನಿಖೆಗೆ ಆಗ್ರಹ: ಒಡಿಶಾದ ಬಿಜೆಪಿ ಘಟಕ ಇಡೀ ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಒತ್ತಾಯಿಸಿದೆ. ಬಿಜೆಪಿ ವಕ್ತಾರ ಮನೋಜ್ ಮಹಾಪಾತ್ರ ಅವರು, ಮದ್ಯ ವ್ಯಾಪಾರಿ ಜೊತೆಗೆ ಸಚಿವರೊಬ್ಬರು ವೇದಿಕೆಯಲ್ಲಿರುವ ಚಿತ್ರವನ್ನು ಪ್ರದರ್ಶಿಸಿದರು. ಒಡಿಶಾದ ಅಬಕಾರಿ ಇಲಾಖೆ, ಗುಪ್ತದಳ, ಆರ್ಥಿಕ ಅಪರಾಧಗಳ ಘಟಕಗಳು ಏನು ಮಾಡುತ್ತಿವೆ ಎಂದು ಅವರು ಪ್ರಶ್ನಿಸಿದರು.

ಈ ಮಧ್ಯೆ, ಬಿಜೆಡಿ ಶಾಸಕ ಸತ್ಯನಾರಾಯಣ ಪ್ರಧಾನ್ ಅವರು, ‘ತಪ್ಪಿತಸ್ಥರನ್ನು ಶಿಕ್ಷೆಗೆ ಒಳಪಡಿಸಲಾಗುತ್ತದೆ. ಈ ವಿಷಯದಲ್ಲಿ ಕಾನೂನು ತನ್ನ ಕ್ರಮಕೈಗೊಳ್ಳಲಿದೆ ಎಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ’ ಎಂದು ಹೇಳಿದರು.

‘ಲೂಟಿ ಹಣ ಹಿಂದಿರುಗಿಸಬೇಕು’

ನವದೆಹಲಿ (ಪಿಟಿಐ): ಭ್ರಷ್ಟಾಚಾರ ಕುರಿತಂತೆ ವಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ, ‘ಜನರಿಂದ ಲೂಟಿ ಮಾಡಿರುವ ಪ್ರತಿ ಪೈಸೆಯನ್ನು ಅವರು ಹಿಂದಿರುಗಿಸಬೇಕು. ಇದು, ಮೋದಿ ಗ್ಯಾರಂಟಿ’ ಎಂದಿದ್ದಾರೆ.

‘ಎಕ್ಸ್’ ಜಾಲತಾಣದಲ್ಲಿ ಈ ಬಗ್ಗೆ ಅವರು ಪೋಸ್ಟ್ ಮಾಡಿದ್ದಾರೆ. ಜಾರ್ಖಂಡ್‌ನ ಕಾಂಗ್ರೆಸ್ ಸಂಸದ ಧೀರಜ್ ಪ್ರಸಾದ್ ಸಾಹು ಅವರಿಗೆ ಸೇರಿದ್ದು ಎನ್ನಲಾದ ಉದ್ಯಮ ಸಮೂಹದಿಂದ ಐ.ಟಿ ಅಧಿಕಾರಿಗಳು ₹ 200 ಕೋಟಿಗೂ ಹೆಚ್ಚು ಹಣ ಜಪ್ತಿ ಮಾಡಿರುವ ಸಂಬಂಧ ಮಾಧ್ಯಮ ವರದಿಯನ್ನು ಅವರು ಹಂಚಿಕೊಂಡಿದ್ದಾರೆ.

‘ಎತ್ತರಕ್ಕೆ ಜೋಡಿಸಿಟ್ಟಿರುವ ಕರೆನ್ಸಿ ನೋಟುಗಳನ್ನು ದೇಶದ ಜನರು ಒಮ್ಮೆ ನೋಡಬೇಕು. ನಂತರ ಪ್ರಾಮಾಣಿಕತೆ ಕುರಿತು ಅವರ ಪಕ್ಷದವರು ಮಾತನಾಡುವುದನ್ನು ಕೇಳಬೇಕು’ ಎಂದು ಮೋದಿ ಹೇಳಿದರು. ಮಾಧ್ಯಮ ವರದಿ ಜೊತೆಗೆ, ಆಲ್ಮೇರಾಗಳಲ್ಲಿ ನೋಟುಗಳನ್ನು ಜೋಡಿಸಿಟ್ಟಿರುವ ಚಿತ್ರವು ಪ್ರಕಟವಾಗಿದೆ.

‘ಕೈ’ ಆತ್ಮಾವಲೋಕನ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಧ್ಯಪ್ರದೇಶ ಮತ್ತು ಛತ್ತೀಸಗಢ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಕಾರಣಗಳನ್ನು ಹುಡುಕುವ ನಿಟ್ಟಿನಲ್ಲಿ ಕಾಂಗ್ರೆಸ್ ಪಕ್ಷದ ಉನ್ನತ ನಾಯಕರು ಶುಕ್ರವಾರ ಆತ್ಮಾವಲೋಕನ ಸಭೆ ನಡೆಸಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ನಾಯಕ ರಾಹುಲ್ ಗಾಂಧಿ ಅವರು ಎರಡೂ ರಾಜ್ಯಗಳ ಮುಖಂಡರ ಜತೆ ಪ್ರತ್ಯೇಕ ಸಭೆ ನಡೆಸಿದರು. ಸಭೆಯ ವೇಳೆ ಇಬ್ಬರು ನಾಯಕರು ಚುನಾವಣೆಯಲ್ಲಿ ಪಕ್ಷಕ್ಕೆ ಆಗಿರುವ ಹಿನ್ನಡೆಯ ಬಗ್ಗೆ ಯಾವುದೇ ಮಾತುಗಳನ್ನಾಡಲಿಲ್ಲ ಎಂದು ಮೂಲಗಳು ತಿಳಿಸಿವೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ಖಜಾಂಚಿ ಅಜಯ್ ಮಾಕನ್ ಅವರೂ ಸಭೆಯಲ್ಲಿದ್ದರು.

ಪಕ್ಷದಹೈಕಮಾಂಡ್ ಮಧ್ಯಪ್ರದೇಶ, ರಾಜಸ್ಥಾನ ಮತ್ತು ಛತ್ತೀಸಗಢದ ರಾಜ್ಯ ಘಟಕಗಳಲ್ಲಿ ‘ಭಾರಿ ಬದಲಾವಣೆ’ ತರುವ ಗಂಭೀರ ಚಿಂತನೆ ನಡೆಸಿದೆ ಎಂದು ಈ ಹಿಂದೆ ವರದಿಯಾಗಿತ್ತು. ರಾಜಸ್ಥಾನದ ಮುಖಂಡರ ಜತೆಗಿನ ಸಭೆ ಶನಿವಾರ ನಡೆಯಲಿದೆ.

ಮಧ್ಯಪ್ರದೇಶದ ಮುಖಂಡರು, ರಾಜ್ಯ ಘಟಕದಲ್ಲಿ ಬದಲಾವಣೆ ತರುವ ಮತ್ತು ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯ ಹೊಣೆಯನ್ನು ಖರ್ಗೆ ಅವರಿಗೆ ವಹಿಸಿಕೊಟ್ಟಿದ್ದಾರೆ. ಪಕ್ಷದ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಯಾಗಿದ್ದ ಮಧ್ಯಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಮಲ್‌ನಾಥ್ ಅವರು ಹೊಸಬರಿಗಾಗಿ ಜಾಗ ಬಿಟ್ಟುಕೊಡುವ ಸೂಚನೆ ದೊರೆತಿದೆ.

ಚುನಾವಣೆಯ ಫಲಿತಾಂಶದಿಂದ ಎಲ್ಲರಿಗೂ ನಿರಾಸೆಯಾಗಿದೆ. ಆತ್ಮಾವಲೋಕನ ಸಭೆಯು ‘ಸ್ನೇಹಪರ’ ವಾತಾವರಣದಲ್ಲಿ ನಡೆಯಿತು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಮಧ್ಯಪ್ರದೇಶದ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಹೇಳಿದರು. ಶಾಸಕಾಂಗ ಪಕ್ಷದ ನಾಯಕನ ಆಯ್ಕೆಗೆ ವೀಕ್ಷಕರನ್ನು ಕಳುಹಿಸುವಂತೆ ಖರ್ಗೆ ಅವರಿಗೆ ಮನವಿ ಮಾಡಲಾಗಿದೆ ಎಂದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಮಧ್ಯಪ್ರದೇಶದ ಮುಖಂಡರಲ್ಲಿ ಕಮಲ್‌ನಾಥ್, ದಿಗ್ವಿಜಯ್ ಸಿಂಗ್ ಮತ್ತು ಗೋವಿಂದ ಸಿಂಗ್ ಅವರು ಪ್ರಮುಖರಾಗಿದ್ದರು.

ಇದಕ್ಕೂ ಮುನ್ನ ಖರ್ಗೆ ಸೇರಿದಂತೆ ರಾಷ್ಟ್ರೀಯ ನಾಯಕರು ಛತ್ತೀಸಗಢದ ಮುಖಂಡರ ಜತೆ ಸಭೆ ನಡೆಸಿದರು. ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೆಲ್, ಮಾಜಿ ಉಪಮುಖ್ಯಮಂತ್ರಿ ಟಿ.ಎಸ್. ಸಿಂಹದೇವ್, ಛತ್ತೀಸಗಢ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ದೀಪಕ್ ಬೈಜ್ ಮತ್ತು ರಾಜ್ಯ ಉಸ್ತುವಾರಿ ಕುಮಾರಿ ಶೆಲ್ಜಾ ಸಭೆಯಲ್ಲಿದ್ದರು.

‘ಪಕ್ಷದ ಸೋಲಿಗೆ ಕಾರಣವಾದ ಅಂಶಗಳ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು. ಯಾವ ಮತಗಟ್ಟೆ ಸಮೀಕ್ಷೆಯೂ ಕಾಂಗ್ರೆಸ್‌ನ ಸೋಲಿನ ಭವಿಷ್ಯ ನುಡಿದಿರಲಿಲ್ಲ’ ಎಂದು ಸಭೆಯ ಬಳಿಕ ಶೆಲ್ಜಾ ಅವರು ಸುದ್ದಿಗಾರರಲ್ಲಿ ತಿಳಿಸಿದರು.

‘2018 ರಲ್ಲಿ ಪಡೆದಿದ್ದ ಮತ ಪ್ರಮಾಣವನ್ನು ಪಕ್ಷವು ಈ ಚುನಾವಣೆಯಲ್ಲೂ ಉಳಿಸಿಕೊಂಡಿರುವುದು ಸಕಾರಾತ್ಮಕ ಅಂಶ. ಸೋಲಿನಿಂದ ನಿರಾಸೆಯಾಗಿರುವುದು ನಿಜ. ಆದರೆ ಹತಾಶೆಗೊಂಡಿಲ್ಲ’ ಎಂದು ಹೇಳಿದರು.

ರಾಜ್ಯ ಶಾರ್ಟ್‌ಕೋರ್ಸ್ ಈಜು ಚಾಂಪಿಯನ್‌ಷಿಪ್: ಬಸವನಗುಡಿ ಈಜುಕೇಂದ್ರ ಮೇಲುಗೈ

ಹಿತೈಷಿ, ನೈಶಾ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಉಡುಪಿ: ಬೆಂಗಳೂರು ಡಾಲ್ಫಿನ್ ಅಕ್ವಾಟಿಕ್ಸ್‌ನ ನೈಶಾ ಶೆಟ್ಟಿ ಮತ್ತು ವಿಜಯ ನಗರ ಈಜು ಕೇಂದ್ರದ ಹಿತೈಷಿ, ಕರ್ನಾಟಕ ರಾಜ್ಯ ಈಜು ಸಂಸ್ಥೆ ಆಶ್ರಯದ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ದಾಖಲೆ ಬರೆದರು.

ಅಜ್ಜರಕಾಡು ಈಜುಕೊಳದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶುಕ್ರವಾರವೂ ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದ ಈಜುಪಟುಗಳು ಅಧಿಪತ್ಯ ಮುಂದುವರಿಸಿದರು.

ಮಹಿಳೆಯರ 100 ಮೀಟರ್ಸ್ ಬಟರ್‌ಫ್ಲೈಯಲ್ಲಿ ನೈಶಾ ಶೆಟ್ಟಿ 1 ನಿಮಿಷ 06.41 ಸೆಕೆಂಡುಗಳ ಸಾಧನೆಯೊಂದಿಗೆ ಕಳೆದ ವರ್ಷ ತಾವೇ ಬರೆದ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಮಹಿಳೆಯರ 200 ಮೀಟರ್ಸ್ ಮೆಡ್ಲೆಯಲ್ಲಿ 2 ನಿಮಿಷ 30.53 ಸೆಕೆಂಡುಗಳಲ್ಲಿ ಗುರಿ ಮುಟ್ಟಿದ ಹಿತೈಷಿ ಕಳೆದ ವರ್ಷ ನೈಶಾ ಶೆಟ್ಟಿ ಮಾಡಿದ್ದ ದಾಖಲೆಯನ್ನು ಮೀರಿದರು.

ಎರಡನೇ ದಿನದ ಫಲಿತಾಂಶಗಳು: ಗುಂಪು-1, 100 ಮೀಟರ್ಸ್ ಬಟರ್‌ಫ್ಲೈ: ಬಾಲಕರು: ಚಿಂತನ್ ಎಸ್. ಶೆಟ್ಟಿ (ಮಂಗಳ ಸ್ವಿಮ್ಮಿಂಗ್ ಕ್ಲಬ್)-1, ಸ್ವರೂಪ್ ಧನುಚೆ (ಬಸವನಗುಡಿ ಈಜು ಕೇಂದ್ರ-ಬಿಎಸಿ)-2, ನಿರಂಜನ್ ಕಾರ್ತಿಕ್ (ಗ್ಲೋಬಲ್ ಈಜು ಕೇಂದ್ರ)-3. ಕಾಲ: 57.08 ಸೆ; ಬಾಲಕಿಯರು: ನೈಶಾ ಶೆಟ್ಟಿ (ಡಾಲ್ಫಿನ್ ಅಕ್ವಾಟಿಕ್ಸ್)-1, ಜನ್ಯಾ ಬಿ.ಎಸ್ (ಬಿಎಸಿ)-2, ಹಿತೈಷಿ ವಿ (ವಿಜಯನಗರ ಈಜುಕೇಂದ್ರ)-3. ಕಾಲ: 1 ನಿ 06.41 ಸೆ. (ಕೂಟ ದಾಖಲೆ: ಹಿಂದಿನ ದಾಖಲೆ: ನೈಶಾ ಶೆಟ್ಟಿ, 1:06.77; 2022); 50 ಮೀ ಬ್ಯಾಕ್‌ಸ್ಟ್ರೋಕ್: ಮಹಿಳೆಯರು: ಸಿದ್ಧಿ ಜಿ.ಶಾ (ಡಾಲ್ಫಿನ್ ಅಕ್ವಾಟಿಕ್ಸ್)-1, ಇಂಚರಾ ಫಣೀಂದ್ರನಾಥ್ (ಎಲೀಟ್ ಸ್ಪೋರ್ಟ್ಸ್ ಅಕಾಡೆಮಿ)-2, ಶ್ರುತಿ ಕೆ.ಆರ್ (ಗ್ಲೋಬಲ್ ಈಜುಕೇಂದ್ರ)-3. ಕಾಲ: 32.10; ಬಾಲಕರು: ಸ್ವರೂಪ್ ಧನುಚೆ (ಬಿಎಸಿ)-1, ಸೂರ್ಯ ಜೆ.ಟಿ (ಬಿಎಸಿ)-2, ರಾಘವ್ ಸ್ವಚ್ಛಂದಂ (ನೆಟ್ಟಕಲ್ಲಪ್ಪ ಈಜುಕೇಂದ್ರ)-3. ಕಾಲ: 28.65 ಸೆ; 200 ಮೀ ಮೆಡ್ಲೆ: ಮಹಿಳೆಯರು: ಹಿತೈಷಿ ವಿ (ವಿಜಯನಗರ ಈಜುಕೇಂದ್ರ)-1, ನೈಶಾ ಶೆಟ್ಟಿ (ಡಾಲ್ಫಿನ್ ಅಕ್ವಾಟಿಕ್ಸ್)-2, ಲಿಪಿಕಾ ದೇವ್ ಜಿ (ಸೌಂದರ್ಯ ಈಜುಕೇಂದ್ರ)-3. ಕಾಲ: 2 ನಿ 30.53ಸೆ (ಕೂಟ ದಾಖಲೆ: ಹಿಂದಿನ ದಾಖಲೆ: ನೈಶಾ ಶೆಟ್ಟಿ: 2ನಿ 30.73 ಸೆ, 2022); ಬಾಲಕರು: ಸೂರ್ಯ ಜೋಯಪ್ಪ (ಬಿಎಸಿ)-1, ಸಾಹಿಲ್ ದಲಾಲ್ (ಬಿಎಸಿ)-2, ಸೂರ್ಯ ಜೆ.ಟಿ (ಬಿಎಸಿ)-3. ಕಾಲ: 2 ನಿ 11.67ಸೆ.



ದಾಖಲೆ ಬರೆದ ಹಿತೈಷಿ ಅವರ ಈಜಿನ ಭಂಗಿ



ನೈಶಾ ಶೆಟ್ಟಿ

ಗುಂಪು-2: 100 ಮೀ ಬಟರ್‌ಫ್ಲೈ, ಬಾಲಕರು: ಅನೀಶ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜುಕೇಂದ್ರ, ಬೆಂಗಳೂರು)-1, ದಕ್ಷ್ ಮಟ್ಟ (ಬಿಎಸಿ)-2, ಸಮರ್ಥ್ ಗೌಡ (ಬಿಎಸಿ)-3. ಕಾಲ: 59.88 ಸೆ; ಬಾಲಕಿಯರು: ಅಂಜಲಿ ಹೊಸಕೆರೆ (ಬಿಎಸಿ)-1, ತನಿಷಾ ವಿನಯ್ (ಬಿಎಸಿ)-2, ವೇದಾ ಖನೋಳ್ಕರ್ (ಅಬಾ ಕ್ಲಬ್)-3. ಕಾಲ: 1 ನಿ 06.64ಸೆ; 50 ಮೀ ಬ್ಯಾಕ್ ಸ್ಟ್ರೋಕ್: ಬಾಲಕರು: ಸಮರ್ಥ್ ಗೌಡ (ಬಿಎಸಿ)-1, ಅಭಿಮನ್ಯು ನಂಬಿಯಾರ್ (ಡಾಲ್ಫಿನ್ ಅಕ್ವಾಟಿಕ್ಸ್)-2, ವಾಫಿ ಅಬ್ದುಲ್ ಹಕೀಮ್ (ಬಿಎಸಿ)-3. ಕಾಲ: 29.58ಸೆ; ಬಾಲಕಿಯರು: ತನ್ಯಾ ಎಂ.ಎನ್ (ಬಿಎಸಿ)-1, ವೇದಾ ಖನೋಳ್ಕರ್ (ಅಬಾ ಕ್ಲಬ್)-2, ತನ್ಮಯಿ ಧರ್ಮೇಶ್ (ಗ್ಲೋಬಲ್ ಈಜುಕೇಂದ್ರ)-3. ಕಾಲ: 32.07; 200 ಮೀ ಮೆಡ್ಲೆ: ಬಾಲಕರು: ದಕ್ಷ್ ಮಟ್ಟ (ಬಿಎಸಿ)-1, ಡ್ಯಾನಿಯಲ್ ಪಾಲ್ (ಬಿಎಸಿ)-2, ಆರ್ಯನ್ ಮನೀಷ್ (ಬಿಎಸಿ)-3. ಕಾಲ: 2 ನಿ 17.14 ಸೆ.

ಗುಂಪು-3: 50 ಮೀ ಬ್ಯಾಕ್‌ಸ್ಟ್ರೋಕ್ : ಬಾಲಕರು: ಶ್ಲೋಕ್ ಜಾಧವ್ (ಅಬಾ ಕ್ಲಬ್)-1, ನಿಖಿಲ್ ತೇಜ್ ರೆಡ್ಡಿ (ಬಿಎಸಿ)-2, ರಕ್ಷಿತ್ ಅನಿರುದ್ಧ ಕೋರೆ (ನೆಟ್ಟಕಲ್ಲಪ್ಪ ಈಜುಕೇಂದ್ರ)-3. ಕಾಲ: 35 ಸೆ; ಬಾಲಕಿಯರು: ಸುಮೇಧಾ ವಿ (ಡಿಕೆವಿ ಈಜುಕೇಂದ್ರ)-1, ಅವನಿ ಬೆಳ್ಳಿಯಪ್ಪ (ಡಿಕೆವಿ ಈಜುಕೇಂದ್ರ)-2, ಶ್ವಿತಿ ದಿವಾಕರ್ ಸುವರ್ಣ (ಡಾಲ್ಫಿನ್ ಅಕ್ವಾಟಿಕ್ಸ್)-3. ಕಾಲ: 35.96 ಸೆ; 200 ಮೀ ಫ್ರೀಸ್ಟೈಲ್: ಬಾಲಕರು: ರೋನಿತ್ ಅರುಣ್ ಕುಮಾರ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-1, ಲೋಹಿತಾಶ್ವ ನಾಗೇಶ್ (ಡಿಕೆವಿ ಈಜುಕೇಂದ್ರ)-2, ವ್ಯಾಸ್ ವಿಜಯ್ (ಡಿಕೆವಿ ಈಜುಕೇಂದ್ರ)-3. ಕಾಲ: 2ನಿ 20.60 ಸೆ; ಬಾಲಕಿಯರು: ಸುಮನ್ವಿ ವಿ (ಡಿಕೆವಿ ಈಜುಕೇಂದ್ರ)-1, ಸ್ತುತಿ ಸಿಂಗ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ)-2, ಸುಮೇಧಾ ವಿ (ಡಿಕೆವಿ ಈಜುಕೇಂದ್ರ)-3. ಕಾಲ: 2 ನಿ 25.52 ಸೆ; 200 ಮೀ ಮೆಡ್ಲೆ: ಬಾಲಕರು: ಲೋಹಿತಾಶ್ವ ನಾಗೇಶ್ (ಡಿಕೆವಿ ಈಜುಕೇಂದ್ರ)-1, ನಿಖಿಲ್ ತೇಜ್ ರೆಡ್ಡಿ (ಬಿಎಸಿ)-2, ರಾಮ್ ಪ್ರಕಾಶ್ (ಗ್ಲೋಬಲ್ ಈಜುಕೇಂದ್ರ)-3. ಕಾಲ: 2ನಿ 42.74ಸೆ.

ಇಂಗ್ಲೆಂಡ್ ತಂಡದಿಂದ ಹಿಂದೆ ಸರಿದ ಎಮ್ಮಾ

ಮುಂಬೈ (ಪಿಟಿಐ): ಇಂಗ್ಲೆಂಡ್ ತಂಡದ ಬ್ಯಾಟಿಂಗ್ ಆಲ್‌ರೌಂಡರ್ ಎಮ್ಮಾ ಲ್ಯಾಂಬ್ ಅವರು ಭಾರತ ವಿರುದ್ಧ ಏಕೈಕ ಟೆಸ್ಟ್ ಪಂದ್ಯದಿಂದ ಹಿಂದೆ ಸರಿದಿದ್ದಾರೆ. ಡಿಸೆಂಬರ್ 14 ರಿಂದ 17ರವರೆಗೆ ಈ ಪಂದ್ಯ ಇಲ್ಲಿ ನಿಗದಿಯಾಗಿದೆ. 25 ವರ್ಷದ ಎಮ್ಮಾ ಬೆನ್ನುನೋವಿನಿಂದಾಗಿ ಹಿಂದೆಸರಿದಿದ್ದು, ತವರಿಗೆ ಮರಳಿದ್ದಾರೆ ಎಂದು ಇಸಿಬಿ ಹೇಳಿಕೆಯಲ್ಲಿ ತಿಳಿಸಿದೆ.



ಭಾರತ– ಇಂಗ್ಲೆಂಡ್ ಮಹಿಳಾ ಎರಡನೇ ಟಿ20 ಪಂದ್ಯ ಇಂದು

ಮುಂಬೈ (ಪಿಟಿಐ): ಭಾರತ ಮಹಿಳಾ ತಂಡದವರು, ಪ್ರಬಲ ಇಂಗ್ಲೆಂಡ್ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಯಲ್ಲಿ ಗೆಲುವಿನ ಆಸೆ ಜೀವಂತವಾಗಿಡಬೇಕಾದರೆ, ಶನಿವಾರ ಇಲ್ಲಿ ನಡೆಯುವ ಎರಡನೇ ಪಂದ್ಯದಲ್ಲಿ ವಿಶೇಷವಾಗಿ ಬೌಲಿಂಗ್ ಮತ್ತು ಕ್ಷೇತ್ರರಕ್ಷಣೆಯ ವಿಭಾಗದಲ್ಲಿ ಸುಧಾರಿತ ಪ್ರದರ್ಶನ ನೀಡಬೇಕಾಗಿದೆ.

ಇಲ್ಲಿಯೇ ನಡೆದಿದ್ದ ಸರಣಿಯ ಮೊದಲ ಪಂದ್ಯವನ್ನು ಇಂಗ್ಲೆಂಡ್ 38 ರನ್‌ಗಳಿಂದ ಗೆದ್ದುಕೊಂಡಿದ್ದು 1-0 ಮುನ್ನಡೆ ಪಡೆದಿದೆ. ಬ್ಯಾಟರ್ ಸ್ನೇಹಿ ಪಿಚ್‌ನಲ್ಲಿ ಇಂಗ್ಲೆಂಡ್ ಬ್ಯಾಟರ್‌ಗಳು ನಾಲ್ವರು ಸ್ಪಿನ್ನರ್‌ಗಳಿದ್ದ ಭಾರತದ ದಾಳಿಯನ್ನು ಮನಸಾರೆ ದಂಡಿಸಿದ್ದರು. ಪದಾರ್ಪಣೆ ಮಾಡಿದ್ದ ಕನಿಕಾ ಅಹುಜಾ ಮತ್ತು ಶ್ರೇಯಾಂಕಾ ಪಾಟೀಲ ದುಬಾರಿಯಾಗಿದ್ದರು. ಡ್ಯಾನಿ ವ್ಯಾಟ್ ಮತ್ತು ನಾಟ್ ಶೀವರ್-ಬ್ರಂಟ್ ಅವರಿಗೆ ಜೀವದಾನ ನೀಡಿದ್ದಕ್ಕೆ ಬೆಲೆ ತೆರಬೇಕಾಯಿತು.

ಮಧ್ಯಮ ವೇಗದ ಬೌಲರ್ ರೇಣುಕಾ ಸಿಂಗ್ ಮಾತ್ರ ಒಂದಿಷ್ಟು ಬಿಗುವಾಗಿ ಬೌಲಿಂಗ್ ಮಾಡಿದ್ದರು. ಅವರು ಮೊದಲ ಓವರ್‌ನಲ್ಲೇ ಎರಡು ವಿಕೆಟ್ ಪಡೆದಿದ್ದರು.

ಇನ್ನೊಂದೆಡೆ ಇಂಗ್ಲೆಂಡ್ ಸ್ಪಿನ್ನರ್‌ಗಳಾದ ಸೋಫಿ ಎಕ್ಲೆಸ್ಟೋನ್ (15ಕ್ಕೆ3) ಮತ್ತು ಸಾರಾ ಗ್ಲೆನ್ (25ಕ್ಕೆ1) ಪರಿಣಾಮಕಾರಿಯಾಗಿದ್ದರು. 198 ರನ್ ಬೆನ್ನಟ್ಟುವಾಗ ಶೆಫಾಲಿ ವರ್ಮಾ ಅರ್ಧ ಶತಕ ಹೊಡೆದಿದ್ದರು. ಈ ಪಂದ್ಯದಲ್ಲಿ ಅನುಭವಿಗಳಾದ ಜೆಮಿಮಾ ರಾಡ್ರಿಗಸ್, ಸ್ಮೃತಿ ಮಂದಾನ ಅವರಿಂದ ಉತ್ತಮ ಆಟ ಬರಬೇಕಾಗಿದೆ.

ಪಂದ್ಯ ಆರಂಭ: ರಾತ್ರಿ 7
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನೆಮಾ

ಟೆಸ್ಟ್: ಕಿವೀಸ್‌ಗೆ ಗ್ಲೆನ್ ಫಿಲಿಪ್ಸ್ ಆಸರೆ

ಡಾಕಾ (ಎಎಫ್‌ಪಿ): ಗ್ಲೆನ್ ಫಿಲಿಪ್ಸ್ ಅವರ ಆಕ್ರಮಣಕಾರಿ ಆಟದ ನೆರವಿನಿಂದ ನ್ಯೂಜಿಲೆಂಡ್ ತಂಡವು ಬಾಂಗ್ಲಾದೇಶದ ವಿರುದ್ಧದ ಎರಡನೇ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ 8 ರನ್‌ಗಳ ಮುನ್ನಡೆ ಪಡೆದಿದೆ.

ಬಾಂಗ್ಲಾದೇಶ ಮೊದಲ ಇನ್ನಿಂಗ್ಸ್‌ನಲ್ಲಿ ಗಳಿಸಿದ 172 ರನ್‌ಗೆ ಉತ್ತರವಾಗಿ ಬ್ಯಾಟಿಂಗ್ ಆರಂಭಿಸಿದ್ದ ನ್ಯೂಜಿಲೆಂಡ್, ಮೊದಲ ದಿನದಾಟ ಮುಗಿದಾಗ 55 ರನ್‌ಗೆ 5 ವಿಕೆಟ್ ಕಳೆದುಕೊಂಡಿತ್ತು.

ಮೂರನೇ ದಿನವಾದ ಶುಕ್ರವಾರ ಸಂಕಷ್ಟದಲ್ಲಿದ್ದ ಕಿವೀಸ್ ತಂಡಕ್ಕೆ ಮಧ್ಯಮ ಕ್ರಮಾಂಕದಲ್ಲಿ ಆಲ್‌ರೌಂಡರ್ ಫಿಲಿಪ್ಸ್ (87;72ಎ, 4x9, 6x4) ಆಸರೆಯಾದರು. 3 ವಿಕೆಟ್ ಪಡೆದಿದ್ದ ಅವರು ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದರು. ಹೀಗಾಗಿ, ಕಿವೀಸ್ 37.1 ಓವರ್‌ಗಳಲ್ಲಿ 180 ರನ್ ಗಳಿಸಿ ಆಲೌಟ್ ಆಯಿತು.

ದಬಾಂಗ್ ಎದುರು ಮಂಕಾದ ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ನವೀನ್ ಕುಮಾರ್ ಅವರ ಸೂಪರ್ ಟೆನ್ ಮತ್ತು ಆಶು ಮಲಿಕ್ (10 ಪಾಯಿಂಟ್) ಅವರ ಅಮೋಘ ರೈಡಿಂಗ್ ಬಲದಿಂದ ದಬಾಂಗ್ ಡೆಲ್ಲಿ ಕೆ.ಸಿ. ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 38-31 ರಲ್ಲಿ ಬೆಂಗಳೂರು ಬುಲ್ಸ್ ತಂಡವನ್ನು ಏಳು ಪಾಯಿಂಟ್‌ಗಳಿಂದ ಸೋಲಿಸಿತು. ತವರಿನಲ್ಲಿ ಈ ಪಂದ್ಯದ ಸೋಲು ಸೇರಿದಂತೆ ಬುಲ್ಸ್‌ಗೆ ಇದು 10ನೇ ಆವೃತ್ತಿಯಲ್ಲಿ ಸತತ ಮೂರನೇ ಸೋಲು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಹುಪಾಲು ದೆಹಲಿ ತಂಡವೇ ಮೇಲುಗೈ ಸಾಧಿಸಿದ್ದು ವಿರಾಮದ ವೇಳೆಗೆ 17-12 ರಿಂದ ಮುನ್ನಡೆ ಸಾಧಿಸಿತ್ತು. ಬೆಂಗಳೂರು ಎರಡು ಬಾರಿ ಆಲೌಟ್ ಆಯಿತು. ನವೀನ್13ಪಾಯಿಂಟ್ಸ್‌ಕಲೆಹಾಕಿದರು. ಇದು ಪ್ರೊ ಕಬಡ್ಡಿ ಲೀಗ್‌ನಲ್ಲಿ ಅನುಭವಿ ನವೀನ್‌ಗೆ 60ನೇ 'ಸೂಪರ್ ಟೆನ್'.

ವಿರಾಮದ ನಂತರ ಬುಲ್ಸ್ ಒಮ್ಮೆ 20-20ರಲ್ಲಿ ಸಮ ಮಾಡಿದ್ದು ಬಿಟ್ಟರೆ ಉಳಿದಂತೆ ಪಂದ್ಯದುದ್ದಕ್ಕೂ ದೆಹಲಿ ತಂಡವೇ ಮುನ್ನಡೆಯಲ್ಲಿತ್ತು. ಬೆಂಗಳೂರು ಪರ ಪ್ರಮುಖ ರೈಡರ್ ಭರತ್ ಸೂಪರ್ ಟೆನ್ (12 ಪಾಯಿಂಟ್) ಸಾಧಿಸಿ ಗಮನ ಸೆಳೆದರು. ಅವರೂ ಪೂರ್ಣ ಲಯದಲ್ಲಿದ್ದಂತೆ ಕಾಣಲಿಲ್ಲ. ಮತ್ತೊಬ್ಬ ಪ್ರಮುಖ ರೈಡರ್ ವಿಕಾಸ್ ಖಂಡೋಲಾ ವಿಫಲರಾಗಿದ್ದು ಹಿನ್ನಡೆ ಎನಿಸಿತು.

ಆಶು ಮತ್ತು ನವೀನ್ ಅವರ ಉತ್ತಮ ರೈಡ್‌ಗಳ ನೆರವಿನಿಂದ ಡೆಲ್ಲಿ ತಂಡ ಆರಂಭದಲ್ಲೇ 6-3 ರಲ್ಲಿ ಮುನ್ನಡೆ ಪಡೆಯಿತು. ಭರತ್ ಕೆಲವು ರೈಡ್‌ಗಳಲ್ಲಷ್ಟೇ ಮಿಂಚಿದರು. ಅವರ ರೈಡಿಂಗ್‌ಅನ್ನೇ ತಂಡ ಬಲವಾಗಿ ನಂಬಿದಂತಿತ್ತು. ಕ್ಯಾಚಿಂಗ್‌ನಲ್ಲೂ ಬುಲ್ಸ್ ವಿಫಲವಾಯಿತು. 11ನೇ ನಿಮಿಷ ಬೆಂಗಳೂರು ಬುಲ್ಸ್ ಆಲೌಟ್ ಆಯಿತು. ಆಗ ಡೆಲ್ಲಿ ತಂಡ 11-5ರಲ್ಲಿ ಮುಂದಿತ್ತು.

ಆದರೆ ಚೇತರಿಕೆಯ ಆಟವಾಡಿದ ಬೆಂಗಳೂರು ಕೆಲವು ಉತ್ತಮ ರೈಡ್‌ಗಳ ಮೂಲಕ ವಿರಾಮದ ವೇಳೆಗೆ ಹಿನ್ನಡೆಯನ್ನು 12-17ಕ್ಕೆ ಇಳಿಸಿತು. ವಿರಾಮದ ಮೂರು ನಿಮಿಷಗಳ ನಂತರ ಡೆಲ್ಲಿ ತಂಡ ಆಲೌಟ್ ಆಯಿತು. ಆಗ ಹಿನ್ನಡೆ ಅಂತರ 17-20ಕ್ಕೆ ಇಳಿದಿತ್ತು.

ಬುಲ್ಸ್ ತಂಡದ ಸುಶೀಲ್ ಅವರ ಎರಡು ಪಾಯಿಂಟ್‌ಗಳ ನೆರವಿನಿಂದ ಮತ್ತು ಸೌರಭ್ ನಂದಾಲ್ ಅವರ ಟ್ಯಾಕಲ್‌ನಿಂದ ಒಂದು ಹಂತದಲ್ಲಿ ಸ್ಕೋರ್ ಸಮನಾಯಿತು. ಆದರೆ ಡೆಲ್ಲಿ ಮತ್ತೊಮ್ಮೆ ಮೇಲುಗೈ ಸಾಧಿಸಿ ಮುನ್ನಡೆ ಹೆಚ್ಚಿಸುತ್ತಾ ಹೋಯಿತು.

31ನೇ ನಿಮಿಷ ಬೆಂಗಳೂರು ಬುಲ್ಸ್ ಎರಡನೇ ಬಾರಿ ಆಲೌಟ್ ಆಯಿತು. ಡೆಲ್ಲಿ ಆಗ 29-23ರಲ್ಲಿ ಮುನ್ನಡೆದಿತ್ತು. ಭರತ್ ಒಮ್ಮೆ ರೈಡಿಂಗ್‌ನಲ್ಲಿ ಮೂರು ಪಾಯಿಂಟ್‌ಗಳನ್ನು ತಂದಾಗ ಸ್ಕೋರ್ ಬುಲ್ಸ್ ಹಿನ್ನಡೆ 29-32ಕ್ಕೆ ಇಳಿದಿತ್ತು.

ಡೆಲ್ಲಿಗೆ ಇದು ಆಡಿದ ಎರಡು ಪಂದ್ಯಗಳಲ್ಲಿ ಮೊದಲ ಜಯ.

ಇನ್ನೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ಸ್ 43-32 ಪಾಯಿಂಟ್‌ಗಳಿಂದ ಯು ಮುಂಬಾ ತಂಡವನ್ನು ಸೋಲಿಸಿತು. ಮೋಹಿತ್ ಗೋಯತ್ ವಿಜೇತ ತಂಡದ ಪರ 12 ಪಾಯಿಂಟ್ಸ್ ಗಳಿಸಿದರು.



ದಬಾಂಗ್ ಡೆಲ್ಲಿ ಕೆ.ಸಿ. ತಂಡದ ಆಟಗಾರರು ಬೆಂಗಳೂರು ಬುಲ್ಸ್‌ನ ರೈಡರ್ ಭರತ್ ಅವರನ್ನು ಹಿಡಿದೆಳೆದರು. ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಭಾರತ– ಕೆನಡಾ ಹಣಾಹಣಿ ಇಂದು

ಕ್ವಾಲಾಲಂಪುರ (ಪಿಟಿಐ): ಭಾರತ ತಂಡವು ಶನಿವಾರ ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಕೆನಡಾ ತಂಡವನ್ನು ಎದುರಿಸಲಿದೆ.

'ಸಿ' ಗುಂಪಿನಲ್ಲಿರುವ ಭಾರತವು ಮೊದಲ ಪಂದ್ಯದಲ್ಲಿ ದಕ್ಷಿಣ ಕೊರಿಯಾ ತಂಡವನ್ನು 4-2ರಿಂದ ಸೋಲಿಸಿ ಶುಭಾರಂಭ ಮಾಡಿತ್ತು. ಆದರೆ, ಎರಡನೇ ಪಂದ್ಯದಲ್ಲಿ ಸ್ಪೇನ್ ವಿರುದ್ಧ 1-4ರಿಂದ ಪರಾಭವಗೊಂಡಿತ್ತು.

ಸ್ಪೇನ್ ತಂಡವು ಆಡಿರುವ ಎರಡೂ ಪಂದ್ಯಗಳನ್ನು ಗೆದ್ದು, ಆರು ಅಂಕಗಳೊಂದಿಗೆ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಭಾರತ ಮತ್ತು ದಕ್ಷಿಣ ಕೊರಿಯಾ ತಂಡ ತಲಾ ಮೂರು ಅಂಕ ಹೊಂದಿದ್ದರೆ, ಗೆಲುವಿನ ಖಾತೆ ತೆರೆಯದ ಕೆನಡಾ ಕೊನೆಯ ಸ್ಥಾನದಲ್ಲಿದೆ.

ಗುರುವಾರ ನಡೆದ ಪಂದ್ಯದಲ್ಲಿ ಭಾರತದ ವಿರುದ್ಧ ಸಾಂಘಿಕ ಪ್ರದರ್ಶನ ನೀಡಿದ ಸ್ಪೇನ್ ತಂಡವು ಮೇಲುಗೈ ಸಾಧಿಸಿತು. ಎದುರಾಳಿ ತಂಡದ ಅಮೋಘ ತಂತ್ರಗಾರಿಕೆಯ ಆಟದೆದುರು ಉತ್ತಮ್ ಸಿಂಗ್ ಪಡೆಯ ಪ್ರಯತ್ನಗಳಿಗೆ ಯಶಸ್ಸು ಸಿಗಲಿಲ್ಲ.

ಸೆಮಿಗೆ ಟರ್ಕಿ, ಇಟಲಿಯ ಕ್ಲಬ್

ಬೆಂಗಳೂರು: ಸರ್ವಾಂಗೀಣ ಆಟದ ಪ್ರದರ್ಶನ ನೀಡಿದ ಟರ್ಕಿಯ ಹಾಕ್‌ಬ್ಯಾಂಕ್ ಸ್ಪೋರ್ ಕುಲುಬು (ಕ್ಲಬ್) ತಂಡ 3-0 ನೇರ ಸೆಟ್‌ಗಳಿಂದ ಬ್ರೆಜಿಲ್‌ನ ಸಡಾ ಕ್ರುಝೇರೊ ವೋಲಿ ಕ್ಲಬ್ ತಂಡವನ್ನು ಸೋಲಿಸಿ, ಪುರುಷರ ವಾಲಿಬಾಲ್ ಕ್ಲಬ್ ವಿಶ್ವ ಚಾಂಪಿಯನ್‌ಷಿಪ್‌ನ 'ಬಿ' ಗುಂಪಿನಿಂದ ಸೆಮಿಫೈನಲ್ ಪ್ರವೇಶಿಸಿತು. ದಿನದ ಎರಡನೇ ಪಂದ್ಯದಲ್ಲಿ ಭಾರತದ ಅಹಮದಾಬಾದ್ ಡಿಫೆಂಡರ್ಸ್ ತಂಡ 'ಎ' ಗುಂಪಿನಲ್ಲಿ ನೇರ ಸೆಟ್‌ಗಳಿಂದ ಇಟಲಿಯ ಸರ್ ಸಿಕೊಮಾ ಪೆರುಗಿಯಾ ತಂಡಕ್ಕೆ ಮಣಿಯಿತು.

ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಹಾಕ್‌ಬ್ಯಾಂಕ್ ತಂಡ 26-24, 25-18, 28-26 ರಿಂದ ಬ್ರೆಜಿಲ್‌ನ ಕ್ಲಬ್ ಮೇಲೆ 85 ನಿಮಿಷಗಳ ಹೋರಾಟದಲ್ಲಿ ಜಯಗಳಿಸಿತು. ಎರ್ವಿನ್ ಎನ್‌ಗಪೆತ್ (15 ಅಂಕ), ಡಚ್ ತಂಡದ ನಾಯಕ ಅಬ್ದುಲ್ ಅಜೀಜ್ ನಿಮಿರ್ (14) ಮತ್ತು ಪೆರಿನ್ (12) ಅವರು ಹಾಕ್‌ಬ್ಯಾಂಕ್ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಜಪಾನ್ ಸುಂಟೋರಿ ಸನ್‌ಬರ್ಡ್ಸ್ ಕ್ಲಬ್ ನಾಲ್ಕು ಪಾಯಿಂಟ್‌ಗಳೊಡನೆ 'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದರೆ, ಮೂರು ಪಾಯಿಂಟ್‌ಗಳೊಡನೆ ಟರ್ಕಿಯ ಕ್ಲಬ್ 2ನೇ ತಂಡವಾಗಿ ಸೆಮಿಫೈನಲ್‌ಗೆ ಮುನ್ನಡೆಯಿತು. ಶನಿವಾರ ನಡೆಯುವ ಸೆಮಿಫೈನಲ್ ಪಂದ್ಯದಲ್ಲಿ ಇಟಲಿಯ ಪೆರುಗಿಯಾ ತಂಡವು, ಟರ್ಕಿಯ ಹಾಕ್‌ಬ್ಯಾಂಕ್ ಸ್ಪೋರ್ ಕುಲುಬು ತಂಡವನ್ನು ಎದುರಿಸಲಿದೆ. ಬ್ರೆಜಿಲ್‌ನ ಇಟಾಂಬೆ ಮಿನಾಸ್ ತಂಡವು ಮತ್ತೊಂದು ಸೆಮಿಫೈನಲ್‌ನಲ್ಲಿ ಜಪಾನ್‌ನ ಸುಂಟೋರಿ ಸನ್‌ಬರ್ಡ್ಸ್ ವಿರುದ್ಧ ಸೆಣಸಲಿದೆ.

ಡಿಫೆಂಡರ್ಸ್‌ಗೆ ಸೋಲು: ಈ ಪ್ರತಿಷ್ಠಿತ ಟೂರ್ನಿಯಲ್ಲಿ ಆಡುತ್ತಿರುವ ಭಾರತದ ಮೊದಲ ಕ್ಲಬ್ ಅಹಮದಾಬಾದ್ ಡಿಫೆಂಡರ್ಸ್, 'ಎ' ಗುಂಪಿನ ರೌಂಡ್ ರಾಬಿನ್ ಲೀಗ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಇಟಲಿಯ ಸರ್ ಸಿಕೊಮಾ ಪೆರುಗಿಯಾ ವಿರುದ್ಧ ಹೋರಾಟ ತೋರಿದರೂ ಗೆಲ್ಲಲಾಗಲಿಲ್ಲ. ಇಟಲಿಯ ಕ್ಲಬ್ 25-18, 25-19, 25-11 ರಲ್ಲಿ ನೇರ ಸೆಟ್‌ಗಳಿಂದ ಜಯಗಳಿಸಿತು. ಪೆರುಗಿಯಾ ಗುಂಪಿನಲ್ಲಿ ಆಡಿದ ಎರಡೂ ಪಂದ್ಯಗಳಲ್ಲಿ ಜಯಗಳಿಸಿ, ಗುಂಪಿನಲ್ಲಿಅಗ್ರಸ್ಥಾನ ಪಡೆದರೆ, ಬ್ರೆಜಿಲ್‌ನ ಇಟಾಂಬೆ ಮಿನಾಸ್ 3 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆಯಿತು.

ಜ.9ರಿಂದ ರಾಷ್ಟ್ರೀಯ ರೋಡ್ ಸೈಕ್ಲಿಂಗ್

ವಿಜಯಪುರ: '28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಶಿಪ್ ಜನವರಿ 9 ರಿಂದ 12ರವರೆಗೆ ವಿಜಯಪುರದಲ್ಲಿ ನಡೆಯಲಿದೆ' ಎಂದು ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಅಸೋಶಿಯೇಶನ್ ಅಧ್ಯಕ್ಷ ರಾಜು ಬಿರಾದಾರ ತಿಳಿಸಿದರು.

'ಎನ್.ಎಚ್ 13 ರಲ್ಲಿ ನಡೆಯುವ ಸ್ಪರ್ಧೆಯಲ್ಲಿ 14, 16, 18 ಮತ್ತು 23 ವರ್ಷದೊಳಗಿನವರ ಸ್ಪರ್ಧೆಗಳು ನಡೆಯಲಿವೆ. 5 ವರ್ಷದೊಳಗಿನ ಬಾಲಕರು ಮತ್ತು 4 ವರ್ಷದೊಳಗಿನ ಬಾಲಕಿಯರಿಗೆ ಸೇರಿ ಸುಮಾರು 25 ಸ್ಪರ್ಧೆಗಳು ನಡೆಯಲಿವೆ' ಎಂದರು.



ಮುಂಬೈ ಎಫ್ ಸಿ ಜಾರ್ಜ್ ಪೆರೇರಾ ಡಯಾಸ್ ಗೋಲು ಹೊಡೆದ ಕ್ಷಣ. ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

ಬಿಎಫ್‌ಸಿಗೆ ಮತ್ತೆ ಸೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಮುಂಬೈ ಸಿಟಿ ತಂಡದವರು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ 4-0 ಗೋಲುಗಳಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವನ್ನು ಸುಲಭವಾಗಿ ಮಣಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬಿಎಫ್‌ಸಿ ತಂಡ ಮುಗ್ಗರಿಸಿತು. ಅಬ್ದೆನಾಸೆರ್ ಎಲ್ ಖಯಾತಿ (11ನೇ ನಿ), ಆಕಾಶ್ ಮಿಶ್ರಾ (30ನೇ), ಜಾರ್ಜ್ ಪೆರೇರಾ ಡಯಾಸ್ (57ನೇ), ಲಾಲಿಯನ್ಜುವಾಲಾ ಛಾಂಗ್ಟೆ (61) ಅವರು ಮುಂಬೈ ತಂಡದ ಪರ ಗೋಲು ಗಳಿಸಿದರು.

ಈ ಟೂರ್ನಿಯಲ್ಲಿ ಬಿಎಫ್‌ಸಿ ತಂಡವು ಒಟ್ಟು ಒಂಬತ್ತು ಪಂದ್ಯಗಳನ್ನು ಆಡಿದ್ದು, ಅದರಲ್ಲಿ ಕೇವಲ ಒಂದರಲ್ಲಿ ಜಯ ಸಾಧಿಸಿದೆ. ನಾಲ್ಕು ಡ್ರಾ ಆಗಿದ್ದು, ಉಳಿದ ನಾಲ್ಕರಲ್ಲಿ ಸೋತಿದೆ. ಏಳು ಅಂಕಗಳೊಂದಿಗೆ ಬೆಂಗಳೂರು ತಂಡ 9ನೇ ಸ್ಥಾನದಲ್ಲಿದ್ದರೆ, 14 ಅಂಕಗಳೊಂದಿಗೆ ಮುಂಬೈ ಸಿಟಿ ತಂಡ ನಾಲ್ಕನೇ ಸ್ಥಾನಕ್ಕೆ ಏರಿದೆ.

ಧೀರಜ್, ಧ್ರುವ ಪ್ರಭಾಕರ್ ಮಿಂಚು

ಪ್ರಜಾವಾಣಿ ವಾರ್ತೆ

ಮೈಸೂರು: ಕರ್ನಾಟಕದ ಧೀರಜ್ ಗೌಡ (37ಕ್ಕೆ 4) ಹಾಗೂ ಧ್ರುವ್ ಪ್ರಭಾಕರ್ (63ಕ್ಕೆ 4) ಅವರ ಸ್ಪಿನ್ ಮೋಡಿಗೆ ತತ್ತರಿಸಿದ ಉತ್ತರ ಪ್ರದೇಶ ತಂಡ, ಶುಕ್ರವಾರ ಆರಂಭವಾದ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಮೊದಲ ಇನ್ನಿಂಗ್ಸ್‌ನಲ್ಲಿ 239 ರನ್‌ಗೆ ಕುಸಿಯಿತು.

ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ದಿನದಾಟ ಮುಗಿದಾಗ ಕರ್ನಾಟಕ ತಂಡ 2 ವಿಕೆಟ್‌ಗೆ 29 ರನ್ ಗಳಿಸಿತು. ಮಾನವ್ ಸಿಂಧು ಮತ್ತು ಇನ್ಜಮಾಮ್ ಹುಸೇನ್ ಮೊದಲ ವಿಕೆಟ್‌ಗೆ 37 ರನ್ ಸೇರಿಸಿದರು. ನಂತರ ತಂಡದ ನಾಯಕ ಯಶು ಪ್ರಧಾನ್ (54), ಸಿಂಧು ಅವರೊಂದಿಗೆ 70 ರನ್ ಸೇರಿಸಿ ತಂಡದ ಮೊತ್ತ ಬೆಳೆಸಿದರು. ನಂತರ ಕಾವ್ಯ ತೆವೊಟಿಯಾ (39) ಹಾಗೂ ಸುಶಾಂತ್ (38) ಅವರನ್ನು ಬಿಟ್ಟರೆ ಉಳಿದವರು ತಿಣುಕಾಡಿದರು.

ಸಂಕ್ಷಿಪ್ತ ಸ್ಕೋರು: ಉತ್ತರ ಪ್ರದೇಶ ಮೊದಲ ಇನ್ನಿಂಗ್ಸ್: 77 ಓವರ್‌ಗಳಲ್ಲಿ 239 (ಯಶು ಪ್ರಧಾನ್ 54, ಕಾವ್ಯ ತೆವೊಟಿಯಾ 39, ಸುಶಾಂತ್ 38; ಧೀರಜ್ ಗೌಡ 37ಕ್ಕೆ 4, ಧ್ರುವ್ ಪ್ರಭಾಕರ್ 63ಕ್ಕೆ 4); ಕರ್ನಾಟಕ ಮೊದಲ ಇನ್ನಿಂಗ್ಸ್: 11 ಓವರ್‌ಗಳಲ್ಲಿ 2 ವಿಕೆಟ್‌ಗೆ 29 (ಪ್ರಖರ್ ಚತುರ್ವೇದಿ 11, ಯಾಸೀರ್ ಖಾನ್ 8ಕ್ಕೆ1, ಹಿತೇಶ್ ಕುಮಾರ್ 15ಕ್ಕೆ 1).



ನಾಯಕ ಧೀರಜ್ ಗೌಡ ಅವರ ಸ್ಪಿನ್ ದಾಳಿಯ ವೈಖರಿ – ಪ್ರಜಾವಾಣಿ ಚಿತ್ರ/ಅನೂಪ್ ರಾಘು.ಟಿ.

ಇಶಾನ್, ಆಹಾನ್‌ಗೆ 'ಡಬಲ್' ಪ್ರಶಸ್ತಿ

ಬೆಂಗಳೂರು: ಇಶಾನ್ ಯಡ್ಲಪಲ್ಲಿ ಅವರು ಕೆಎಸ್‌ಎಲ್‌ಟಿಎ ಏಷ್ಯನ್ 14 ವರ್ಷದೊಳಗಿನ ಟೆನಿಸ್ ಟೂರ್ನಿಯಲ್ಲಿ ಬಾಲಕರ ವಿಭಾಗದ ಸಿಂಗಲ್ಸ್ ಮತ್ತು ಡಬಲ್ಸ್‌ನಲ್ಲಿ ಪ್ರಶಸ್ತಿಯನ್ನು ಗೆದ್ದರು. ಬಾಲಕಿಯರ ವಿಭಾಗದಲ್ಲಿ ಎ.ಆಹಾನ್ ಕೂಡ 'ಡಬಲ್' ಪ್ರಶಸ್ತಿ ತಮ್ಮದಾಗಿಸಿಕೊಂಡರು. ಶುಕ್ರವಾರ ನಡೆದ ಬಾಲಕರ ಸಿಂಗಲ್ಸ್‌ನ ಫೈನಲ್ ಪಂದ್ಯದಲ್ಲಿ ಇಶಾನ್ ಅವರು 6-4, 6-4ರಿಂದ ಎಸ್. ಸುವರ್ಣ ಅವರನ್ನು ಮಣಿಸಿದರು. ಬಾಲಕರ ಡಬಲ್ಸ್‌ನಲ್ಲಿ ಆಹಾನ್ ಮಿಶ್ರಾ ಅವರೊಂದಿಗೆ 6-1, 6-4 ರಿಂದ ಎ.ಪಳನಿಸಾಮಿ ಮತ್ತು ಇಶಾನ್ ಸುದರ್ಶನ್ ಅವರನ್ನು ಸೋಲಿಸಿದರು.

ಅಹಮದಾಬಾದ್ ಪಿಚ್ 'ಸಾಧಾರಣ': ಐಸಿಸಿ ರೇಟಿಂಗ್

ನವದೆಹಲಿ (ಪಿಟಿಐ): ನವೆಂಬರ್ 19ರಂದು ಭಾರತ– ಆಸ್ಟ್ರೇಲಿಯಾ ನಡುವೆ ಏಕದಿನ ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದ ಆತಿಥ್ಯ ವಹಿಸಿದ್ದ ಅಹಮದಾಬಾದಿನ ನರೇಂದ್ರ ಮೋದಿ ಕ್ರೀಡಾಂಗಣದ ಪಿಚ್ 'ಸಾಧಾರಣ ಮಟ್ಟದ್ದು' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ರೇಟಿಂಗ್ ನೀಡಿದೆ.

ಆದರೆ ಹೊರಾಂಗಣ (ಔಟ್‌ಫೀಲ್ಡ್) 'ಅತ್ಯುತ್ತಮ'ವಾಗಿತ್ತು ಎಂದು ಐಸಿಸಿ ಮ್ಯಾಚ್‌ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ರೇಟಿಂಗ್ ನೀಡಿದ್ದಾರೆ. ಟ್ರಾವಿಸ್ ಹೆಡ್ ಶತಕದ (137) ಬಲದಿಂದ ಆಸ್ಟ್ರೇಲಿಯಾ ಫೈನಲ್ ನಲ್ಲಿ 6 ವಿಕೆಟ್‌ಗಳಿಂದ ಜಯಗಳಿಸಿತ್ತು.

ಭಾರತ ಲೀಗ್ ಪಂದ್ಯಗಳನ್ನು ಆಡಿದ್ದ ಕೋಲ್ಕತ್ತ, ಲಖನೌ, ಅಹಮದಾಬಾದ್ ಮತ್ತು ಚೆನ್ನೈ ಕ್ರೀಡಾಂಗಣದ ಪಿಚ್‌ಗಳೂ 'ಸಾಧಾರಣ ಮಟ್ಟದ್ದು' ಎಂದು ಐಸಿಸಿ ರೇಟಿಂಗ್ ನೀಡಿದೆ. ಆದರೆ ಭಾರತ ಮತ್ತು ನ್ಯೂಜಿಲೆಂಡ್ ಸೆಮಿಫೈನಲ್ ಪಂದ್ಯದ ತಾಣವಾದ ಮುಂಬೈನ ವಾಂಖೆಡೆ ಕ್ರೀಡಾಂಗಣದ ಪಿಚ್‌ಗೆ 'ಉತ್ತಮ' ರೇಟಿಂಗ್ ನೀಡಲಾಗಿದೆ. ಆಸ್ಟ್ರೇಲಿಯಾ– ದಕ್ಷಿಣ ಆಫ್ರಿಕಾ ನಡುವೆ ಅಲ್ಪಸ್ಕೋರುಗಳನ್ನು ಕಂಡ ಎರಡನೇ ಸೆಮಿಫೈನಲ್ ಪಂದ್ಯ ನಡೆದ ಈಡನ್ ಗಾರ್ಡನ್ ಕ್ರೀಡಾಂಗಣಕ್ಕೂ 'ಎವರೇಜ್' ರೇಟಿಂಗ್ ನೀಡಲಾಗಿದೆ. ಆದರೆ ಈಡನ್ ಗಾರ್ಡನ್‌ನ ಹೊರಾಂಗಣ 'ಅತ್ಯುತ್ತಮ ಮಟ್ಟದ್ದು' ಎಂದು ಐಸಿಸಿ ಮ್ಯಾಚ್ ರೆಫ್ರಿ ಜಾವಗಲ್ ಶ್ರೀನಾಥ್ ರೇಟಿಂಗ್ ಕೊಟ್ಟಿದ್ದಾರೆ.

ಪ್ರಜಾವಾಣಿ
ಶನಿವಾರ • ಡಿಸೆಂಬರ್ 9, 2023


ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331





ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

PROPERTY CORNER ಕ್ಲಾಸಿಫೈಡ್ಸ್



Nelamangala



Rajarajeshwari Nagar

RR-NAGAR 66X40 EAST FACING A KHATA RESIDENCIAL SITE GOOD LOCATION. 200 MTRS FROM TANISHQ: 9448288522

SALE RESIDENTIAL Site 40X61 @ RR-Nagar, Sweet Home Layout,Uttarhalli Main Road, BBMP A-Katha. 9880886474

SITE FOR SALE @ 9000/- GATTIGERE SUDARSHAN LAYOUT RAJA RAJESHWARI NAGAR CALL:9900036544/ 9740252729



Kumaraswamy Layout

3-BHK E/F A-Khata Flat 2250Sqft Fully Teak Wood Italian Marbles 2Carpark 1.6Cr Kumaraswamy Layout 15F Bustand- 9611144096

Kanakapura Road

3-BHK FLAT Sale 1575 Sq.Ft N/F Full Interiors 70 Lakhs Off Kanakpura Road, Konankunte Near Junior Delhi Public School: 9343722162

Malleshwaram

MALLESHWARAM 4TH Main, Good Location 3 Bedroom Flats, each 1900 Sft. Carpark & Terrace. 98450-29067



REAL ESTATE SELLING

Agricultural Land

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Location: Opposite to Hubli Water World
Brokers excuse.
Genuine Party Contact
9108133206

Magadi Road

MAGADI ROAD, 800 Sqft, Kadabagere Cross, DC Conversion, E-Katha, Shivani Greens. Contact: 9845044335

Sahakarnagar

SAHAKARANAGAR 1620 sft Site North West Corner Top Location For Sale Contact: 9341260828 7829203369

Sadashiva Nagar

***SADASHIVANAGAR* RESIDENTIAL** PRIME LOCATION 54x86 SITE FOR SALE. Contact: 9945079777

Tumkur Road

30X40 SITE sale, Good location, west facing, Kirloskar layout, Hesaraghata Road, opposite Sapthagiri college. 9620480363.

AVAILABLE BDA Site 20X30 Vishveshwariah Layout 2nd Block, Builder Location 47 Lacks Contact Buyers: 9844603127

VISHVESWARAIAH LAYOUT 6th Block 30x40 (East) and 40x60 1st Block 40ft Road Good Location: 9964971895

"SELLING/BUYING 20X30,30X40, 40x60,50x80 Vishveshwaraiah Layout Surroundings Rate-7000 to 12000/-P.Sft. "Rajarajeshwari Real_Estate" 9945518355/ 9008360005"

Vidyaranyapura

SITE SALE BBMP A Katha 20x30 Semi Commercial South Face Thindlu Good Location Contact: 8296895858

COLDWELL BANKER VALUE ADD REALTY
#1 REAL ESTATE AGENCY IN BANGALORE
Exceptional BDA corner plots for both commercial and residential ventures in BANASHANKARI, JAYANAGAR, ANJANAPURA, SIR M VISHVESHWARAIAH LAYOUT, KEMPEGOWDA LAYOUT, RR NAGAR, and UTTRAHALLI. Your perfect opportunity for prime real estate is here.
Act fast and secure your corner of success.
99165 92400

Hebbal

2 BHK Flat 1174 sqft with car-parking, 11 years old in Bhuvaneshwarinagar, Hebbal Kempapura. Contact: 9886744734

Cambridge Layout

FOUR BEDROOMS spacious Villa, Private Entrance, Garden, Backyard, Car-parkings. 3700 sft. 2.9 Cr. 9880346216/ 9620204637.

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

Padmanabha Nagar

SALE, SAI_KUTEERA 3BHK Flat (1454 Sq.Ft), East Facing,A Katha, Chikkalasandra, 52 lakhs (Nego). Call: 9845743555

Chandra Layout

3-BHK 1635 sqft. Car Parking Furnished Behind Village Hyper Bazaar, Chandra Layout. 1.25 Cr. 09890345737



Mathikere



HOUSE FOR SALE
Independent East Face
Semi Furnished
3 BHK single Floor 1400 sft on 2037 sft Site. Near Mathikere Bus Stop & JPN Park.
CALL : 99725 35997

Mysore

"MYSORE AGRICULTURAL-LAND 9 acres expecting ₹8.Crores just 5minutes drive-from Ring Road,& City,clear titles,Only genuine buyers "Sri.Ganesh Estates"- 9845286505"

Koramangala

40X60 BBMP A Khata Site for Sale at Koramangala 8th block. Contact Girish: 8123541901

Kanakapura Road

DUPLEX HOUSE FOR SALE, BALAJI Layout 30x40 West Face, BIKASIPURA, 30×45 East Face. Call: 9448684258

SALE 40X60 North Facing Site on 45ft Road, First Allottee, Judicial Layout Kanakapura Road, 13500/- Per Sft. 5Minutes From Metro Station: 9900430381

KANAKAPURA ROAD Kaggalipura BMRDA APPROVED 'E" Khatha 30x40, 30x50, East Facing, 3500/- Negotioble: 9538680364/ 9986146147

Vishveshwariah Layout

"40X60-BDA ALLOTEE-SITE Sale North facing 40 feet Road Vishweshwaraiah 6th Block, Genuine buyers only, 9845078185/ 7892224597"

DIRECT OWNER 40x60 East Facing BDA #2194 Site Sale VISHVESWARAIAH LAYOUT 1st Block, 60ft-Road, 9886634578

AVAILABLE BDA Site 30X40 W/F 6th Block Vishveshwariah Layout 7500/- Psft Contact Only Buyers:9844603127

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact: 9844533371, 9341733480



BDA VISHWESHWAR Layout, 4th Block 30x40 N/F, Vishweshwaraya Layout, 1st Block, 20x30, E/F. 9980239748/ 8792207829.

BDA SITE SALE VISHWESHWARAIAH LAYOUT 1ST BLOCK 30X40 NORTH 9000, 5th BLOCK EAST FACE 11000 NEGOTIABLE: 8892901567

BDA PROPERTY 40x60 South facing 6th Block Vishveshwaraiah layout. Contact- 09019962007/ 9741554173

Yelahanka

SALE 30X52, West facing, Vidhan Soudha Layout adjacent, DC converted, Rate 6750/ sqft. 9845387114, 9945762394

Mandya

SITE FOR Sale 30X40 Mandya Bandi Gowda layout Behind LIC Office Contact Kalamariah.D 7483128593

Banashankari

BSK-6TH STAGE 7th Block 50x80 Site For Sale in Good Location Near Proposal BDA Complex (Agents Excuse) Call:9845555666

BANASHANKARI 6TH Stage Pavamanapura 40x80sftWest facing close to upcoming BDA commercialcomplex, 100feet Road. 9900097239

AVAILABLE BANASHANKARI 6th Stage, 5th Block 40x60 West facing Price-1,30 cr Contact- 9901315949 / 9980528223.

BDA SITE Sale BANASHANKARI 6th Stage, 4Th `T`Block 20X30, E/F, 30feet Road Near Metro-Station :9972327777

BANASHANKARI 6TH Stage 2nd Block and 9th Block, 30x40, 40x60 Site for Sale. 9483748768/ 9880448478.

Flat

Old Airport Road

RESIDENTIAL PROPERTY for Sale Located near Old Airport in Ravi Prakash Nagar, this is Standalone Apartment with G+1 construction of 1034 sqft carpet area 2 Bedroom, 1 Big Hall, Kichen and Store Room. Contact:Mr Nandish 8050070222/ Mr Eshwar 8050070277 to plan a visit.

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

Uttarahalli

"SALE-FLAT POORNA-PRAGNA Layout Ready-to occupy BBMP 'A'.Katha one floor one Flat, 2Car parking,Teak wood,Italian marble,₹1.60 Crore, 9845286505"

House

Basavanagudi

SALE 3300SQ.FT Building with carparking. 20x40. West Facing.Rental income. Close to Gandhi Bazar. Owner: 9845743555

HBR Layout

HBR LAYOUT 3rd Block, Good Residential Area, 30x40 BDA Site with House Rs.15,000 Per Sqft. 9980910229.

Jayanagar

JAYANAGAR 2ND Block, 62×53 W/S Corner Sale, 3-BHK FLATS For SALE AND 4-BHK Duplex For Commercial Rent. 9448684258

Magadi Road

KAMAKSHIPALYA TWO Years Old Building 15x50 Sq.ft E/F, "A" Khata, 1 BHK 8 Houses + 1 Shop Fully Granite Floor, Getting 49000 Rent. Rs. 1.20 Cr Negotiable. 9845288310

Nagarabhavi

"BDA,20X30 NEW-4BHK Architect Triplex House for-Sale- at Jnanabharathi 2nd Block,near Bangalore University Ready-to occupy just 2minutes drive to Ring-Road Bus stop, 5minutes to Jnanabharathi Metro station. 9066617555"

Farm House/ Land/ Resorts

Out-Station

FARM PLOTS with World Class Amenities for sale in Chikkaballapur. CALL 9611153404

Magadi Road

FARM HOUSE for Sale 26 Gunta 3 Houses, Turnkey fully furnished, Gated Community 300nuts, Varieties of fruit Trees, Swimming pool. Just 5 kms from Tavarekere Magadi Road. Contact: 9448357757.

Joint Development

Mysore

LOOKING FOR a joint venture opportunity in Mysore. We have a prime 5-acre land located at the entry of Mysore city, strategically positioned for residential and commercial development. Google link for the land location- https://maps.app.goo.gl/AfX25TmcDuMFXAn99?g_st=iw Contact person- Mr.Basavraj: +91 9448023101, Pradeep: 9739663514

Agricultural Land Converted

Electronic City

ACRE 2.15 GUNTA, Agriculture Land for sale in Avalahalli Village, 10mins from Sarjapur Road, close to Huskur Fruit Market & Railway Station, Per Acre 5.5Cr & 52,000sqft Residential Converted Land in Chikkanagamangla Village near Biocon Foundation, Adjacent Huskur Lake View Property Rs.1500/sqft. VernaDevelopers.com, MG Road, 9353128035/ 9916310226

Kengeri

30X40 NORTH, BBMP A katha, Kengeri Metro Station, Uttarahalli Road, (BGS_Global) 7,000/- Negotiable. 9148914809, 9740075563.

SITE FOR Sale Kengeri Kodipalya 30×40 West Facing BBMP Limit, Price 58,00,000. Contact: 9035699974

Sites

Bannerghatta Road

VIJAYABANK LAYOUT 26×55/ 40×60/ 50×80 SITES/ HOUSES, VARIOUS LOCATIONS AVAILABLE. EXCEPT SOUTH. 'VASAVI' 98453-76147

Kempegowda Layout

NADAPRABHU KEMPEGOWDA LAYOUT and Vishweshwaraiah Layout BDA Sites Buying, Selling 20x30, 30x40, 40x60. 9742568746, 9480186666.

Nagarabhavi

AVAILABLE NAGARABHAVI Site D Group 30x40 West Facing BDA Katha Genuine Buyers Contact: 9743381719

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ





REAL ESTATE SELLING

Commercial Land

Banashankari

"40X60 COMMERCIAL Property for Sale Hosakerehalli 100 feet Ring Road Banashankari 3rd Stage, 2nd Phase. 9845500019/ 7019314962"

Villas/Bunglows

Magadi Road

SALE SPACIOUS 6600 sq.ft. House, Built-on 3600 sq.ft. East Facing Corner Site. 6 Bedroom, 6 Bathroom, Servant House, Surrounded by Garden on two Sides.Carpark, Gated Community with allamenities. No.5, Rashi Residency Located on 4 lane Magadi Road, Kadabagere Cross, Bangalore. Call: 9972300999

Commerical

M G Road And Around

TENANTED SHOWROOM 980 Sft with Bank Tenant 1.9Cr with 1.03 Lakh Rental Income. 2500 Sft 2.95Cr with Rental Income 2.15 Lakh: 9845311141

Mysore Road

MYSORE ROAD Kumbalgodu Prime Industrial Hub 13200 sqft Commercial Shed, 3 Side Road, Corner property available for RENT (Rs 25/- per sqft) or for SALE (Cost 4.5 cr). Contact : owner 9844027560.

REAL ESTATE BUYING

Joint Development

Sarjapur Road

WANTED Immediately Two to Five Acres Purchase/ Joint-Venture Bangalore East Direct Owners Contact: 8884501767

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

BDA-SITES WANTED Anjanapura, Banashankari 6th Stg, Visveshwaraiah Lyt, 20x30,30x40,40x60 Any Measurement Immediate Settlement Call:9945610779

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Vishweshwariah Layout

WANTED 50X80 Residential Site Vishweshwaraiah Layout 8th Block. Direct Owner meeting required. Contact: 9342833999

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted. Contact: SAPTHAGIRI. 9900268073, 9448068073.

BUILDERS ESSENTIAL

Water Proofing

"WE FIX" LEAKING ROOF,TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY,CIVIL WORKS. Macbond: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE 2000 Square Feet for Commercial in Kumaraswamy Layout 50 Feet Main Road. Call 9880022644.

House

2 BEDROOM House for Rent, BSK 1st stage, Hanumanthanagar near SBM Colony. Veg Only. 9844179944.

TWO BEDROOM Ground Floor House For Lease. East Facing at 2nd Block Jayanagar. Contact:- 9481525329

1 BHK. & 2 BHK New Houses Available for Lease`with Car- Parking Cavery & Borewell water`at Hulimavu Contact: 9945719267

BUSINESS

Business to Business

Services

PLASTIC JERRY CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 23.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037887

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189



PUBLIC NOTICE

PUBLIC NOTICE

NOTICE is hereby given that Arun Manoraj R. S/o Srl. Ramaiah, Aged about 36 years. Oce: Business, R/a.No.24, Lazer Road, 2 cross, Frazer Town, Bnagatore-560005 agreed to sell the property mentioned in the schedule hereto, to my cilent Sri Isshaq Jehangeer S/o Syed Ameer Aged about 49.

All persons claiming an interest in the said property or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise howsoever are hereby required to make the same known to the undersigned at at his office within 10 days from the date hereof, failing which the said sale will be completed, without any reference to such claim and the same, if any, shall be considered as walved.

SCHEDULE

All that piece and parcel of the residential vacant site/plot No.9, bearing PID No.152900401300401176 Katha No.09/562/09, Issued by Ittamadu Grampanchyayat, Approved by the BMICAPA vide order bearing No.BMICAPA/185/683/2011-12, dated 7-06-2012, carved out Sy. No.199/4 new No.199/5, situated at Na Layout, Nagarathana Layout, hegadegere Village, Bidadi Hobli, Ramanagara Taluk measuring in feet on the East to West 53 feet (16.16meater) and north to south72.5 feet (21.11meater) totally measuring 3842.5 Square feet (357.30 square meter) and bounded on

East By: Others Property
West By: Site No.8
North By: others property
South By: Road

Sandeep katti Advocate
No.85B, Rajagardenia layout,
Turahalii, SB post, Bangalore-560061

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

PERSONAL

Lost

DOCUMENT LOST

I, H.S. Devaraju residing at #3, Bilva Priya Nilaya, Cottenpet have Lost Mother Deed Document No. Khata No. 135/2 and 135/3 of Site No.18 located at Shivakhote, Hesaraghatta Taluk. **Police Complainant No.0745548/2023** While in transit. If found, please Contact: **9880508410, 8904892669**

Change of Name

I, RASIKA KHANDELWAL D/o.Uttam Chand Gupta R/a#C504 Krishvi Gavakshi Kadubeesenahalli Banglalore- 560103 have`changed my Name to RASIKA GUPTA vide affidavit dated:7.12.2023 sworn before Notary K.V.Mani Bengaluru

MOHAN BHARTI, 6497683Y, NK, Vill- Usagar, Amleta, Namli, Ratlam, Madhya Pradesh changed Son's name ISHWER BHARTI to ISHWAR BHARTI, 08/12/2023, Notary K.V. Mani, Bangalore

R ANANDAN Father/o 7431521K, HAV, A SRINIVASAN, R/o B8-239, BDA Flats Phase II Kallahalli Halasuru, Bengaluru, Karnataka changed name R ANANDAN to ANADHAN & Date of birth changed from 01-07-1954 to 01-01-1956, 08/12/2023, Notary K.V. Mani, Bangalore

I, AKTHARUNNISA W/o Late Syed Anwar, aged about 65 years, resident of No 108A, Near ITI College, Khadripura, Kolar 563101. Have changed my name to Akhtar Unnisa vide affidavit dated 08.12.2023 before Notary K.M Vijaya Kumar Kolar. Henceforth I shall be called as Akhtar Unnisa only

I, SHANKARAPPA R/at No.4/92 Kalladevanahalli village Yadgiri, today camp at Bangalore, have changed my name to SHIVASHANKAR vide affidavit dated: 8/12/2023 Before Notary Vanajakshi. R Bangalore



OTHERS

Furniture & Furnishings

FURNITURE FOR Sale- Diwan Cot with mattress, Sofa set, Diwan etc. Contact: 9886744734.



ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಸೈಟು ಖರೀದಿಸಲು ಸುವರ್ಣಾವಕಾಶ

ವಸತಿ ನಿವೇಶನಗಳು

ಕೆಂಗೇರಿ, ರಾಮೋಹಳ್ಳಿ ಹತ್ತಿರ ಮೈಸೂರು ರಸ್ತೆ





ACTUAL PRICE ₹ ~~2500~~ per sft

OFFER PRICE ₹ 2299 per sft
Limited Period Offer

Festival Spot Booking Offer
iPhone FREE



ಸಂಪರ್ಕ :
- ಕೆಂಗೇರಿ ಮೆಟ್ರೋ ನಿಲ್ದಾಣದಿಂದ 10 ನಿಮಿಷಗಳ ದಾರಿ,
- ಕೆಂಗೇರಿ ರೈಲು ನಿಲ್ದಾಣದಿಂದ 15 ನಿಮಿಷಗಳ ದಾರಿ
- ಬೆಂಗಳೂರು - ಮೈಸೂರು ಹೆದ್ದಾರಿಯಿಂದ 10 ನಿಮಿಷಗಳು
- ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣಕ್ಕೆ 30 ನಿಮಿಷಗಳು

- ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ
- ನೋಂದಣಿಗೆ ರೆಡಿ ಇರುವ ನಿವೇಶನಗಳು
- ಮನೆ ಕಟ್ಟಲು ಸಿದ್ಧವಿರುವ ಸೈಟುಗಳು

ಮೂಲ ಸೌಕರ್ಯಗಳು : ರಸ್ತೆ, ಕಾಂಪೌಂಡ್ ಗೋಡೆ, ನೀರಿನ ಸಂಪರ್ಕ, ವಿದ್ಯುತ್, ಬೀದಿ ದೀಪ

ಸೈಟು ಭೇಟಿಗಾಗಿ ಸಂಪರ್ಕಿಸಿ : **93411 18999**



DC CONVERSION

ACTUAL PRICE Rs. ~~499~~/- Per Sft

OFFER PRICE Rs. 370/-* Per Sft

*for Sites in Phase-2 only

DTCP APPROVED Residential Sites

ಚಿಕ್ಕಬಳ್ಳಾಪುರ



ಈಶಾ ಫೌಂಡೇಶನ್‌ನಿಂದ ಕೇವಲ 15 ನಿಮಿಷಗಳ ಪ್ರಯಾಣ

- ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ.
- 100% ಕಾನೂನಾತ್ಮಕ ದಾಖಲೆ ಪತ್ರಗಳು • ಅಭಿವೃದ್ಧಿಪಡಿಸಿದ ಲೇಔಟ್
- ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : • ನೀರು • ಬೀದಿ ದೀಪ • ರಸ್ತೆಗಳು • ಪಾರ್ಕ್ • ವಿದ್ಯುತ್ • ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

ಸೈಟ್ ಭೇಟಿಗಾಗಿ ಕರೆ ಮಾಡಿ : **8880665577**

BBMP 'A' Khata Sites

ಬೇಗೂರು ಹೊಸೂರು ರಸ್ತೆ

Aditya Shrusti Gardens

30x30
30x40
60x40
plots

ಬ್ಯಾಂಕುಗಳಿಂದ ಸಾಲ ಲಭ್ಯ

LIC HFL LIC HOUSING FINANCE LTD
IDBI BANK



Fully Developed
Ready for Registration & Construction

ಸೌಕರ್ಯಗಳು
1. ಪ್ರವೇಶ ದ್ವಾರ
2. ಮುಂಭಾಗದ ಕಾಂಪೌಂಡ್ ಗೋಡೆಗಳು
3. ರಸ್ತೆಗಳು
4. ವಿದ್ಯುತ್
5. 24/7 ಭದ್ರತೆ
6. ಮಕ್ಕಳ ಆಟದ ಪ್ರದೇಶ
7. ಅವೆನ್ಯೂ ತೋಟ
8. ಒಳಚರಂಡಿ
9. ಪ್ರತಿ ಪ್ಲಾಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ

ಸಂಪರ್ಕ
- ಬನ್ನೇರುಘಟ್ಟ ಮುಖ್ಯ ರಸ್ತೆ (5 min)
- ಬೆಂಗಳೂರು-ಹೊಸೂರು ರಾಷ್ಟ್ರೀಯ ಹೆದ್ದಾರಿ (5 min)
- ಮೆಟ್ರೋ ನಿಲ್ದಾಣ (5 min)
- ಅಂತರರಾಷ್ಟ್ರೀಯ ಶಾಲೆಗಳು (5 min)
- ಸೂಪರ್ ಮಾರುಕಟ್ಟೆಗಳು (5 min)
- ಪ್ರಮುಖ ಐಟಿ ಕಂಪನಿಗಳು (5 min)
- NICE ರಸ್ತೆ (10 min)
- ಎಲೆಕ್ಟ್ರಾನಿಕ್ ಸಿಟಿ (10 min)

DLF Township ಹತ್ತಿರ
ಬನ್ನೇರುಘಟ್ಟ ರಸ್ತೆ ಹತ್ತಿರ

7676560000

NISCHITHA PROPERTIES
More Than Real Estate
nischitaproperties.com

Meadows BIDADI



PREMIUM PLOTS FOR SALE

Amenities
- Arch with Gate
- Under Ground Electricity
- CCTV Camera
- Compound Wall
- 24/7 Security
- Wide Black Top Roads
- Footpath with Tiles
- Garden
- Street Lights
- Sewage lines

Proximity
- Mysore Highway - 0.5km
- Bidadi bus stand - 1km
- Bidadi Railway station - 1.8km
- Nearest to Bidadi Industrial Area
- Coca-cola, Toyota, Bosch, Britannia & 250+ Industries
- Innovative Film city,
- Wonder la & Eagleton resort

ಮೈಸೂರು ರಸ್ತೆ ಯಿಂದ 400mts

ಅಳತೆ
20x40 ,30x40
Odd sites

ಕೆಲವೇ ಸೈಟ್‌ಗಳು ಲಭ್ಯ

ಬೆಲೆ ಕೇವಲ 33 ಲಕ್ಷದಿಂದ ಪ್ರಾರಂಭ

0.5 ಕಿ.ಮೀ ದೂರದಲ್ಲಿ ಪ್ರಸ್ತಾಪಿಸಲಾದ ಮೆಟ್ರೋ ನಿಲ್ದಾಣ

80 % ಬ್ಯಾಂಕ್ ಸಾಲ ಲಭ್ಯವಿದೆ

96639 11326, 89710 76395, 95130 60760